# ಪ್ರಸಾದ

**ಸಂಪುಟ 30 ಸಂಚಿಕೆ 3** **ಮೇ-ಜೂನ್ 2015**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004




**ಸಂಸ್ಥಾಪಕರು**

‘ಶ್ರೀಮನ್ಮಹಾರಾಜ ರಾಜಗುರುತಿಲಕ’ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಶ್ರೀ ಬಿ.ಎನ್. ಬೆಟ್‌ಕೆರೂರ್

ಶ್ರೀ ಎಸ್.ಪಿ. ಮಂಜುನಾಥ್

ಶ್ರೀ ಎಸ್. ನಂಜುಂಡಯ್ಯ

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಶ್ರೀಮತಿ ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 9 |
| ಕೋಲಶಾಂತಯ್ಯನ ವಚನಗಳು: ಅಭಿವ್ಯಕ್ತಿ - ವಿಶ್ಲೇಷಣೆ | 11 |
| **ಡಾ. ಜಿ.ಆರ್. ತಿಪ್ಪೇಸ್ವಾಮಿ** | |
| ವಿವೇಕಶೂನ್ಯ ಸೃಷ್ಟಿಯ ಸಮಸ್ಯೆಗಳು ಮತ್ತು ಪರಿಹಾರ | 27 |
| **ಡಾ. ರುದ್ರಣ್ಣ ಚಿಲಮಿ** | |
| ಗ್ರಂಥಾಂತರಂಗ | 39 |
| **ಡಾ. ಕೂಡಲಿ ಜಗನ್ನಾಥ ಶಾಸ್ತ್ರಿ** | |
| ವಾರ್ತಾವಿಹಾರ | 43 |
| ಕೃತಿ ಸ್ವೀಕೃತಿ | 64 |


**ಮುಖಪುಟ ಚಿತ್ರ**

ದಿನಾಂಕ 28.4.2015 ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ 'ಸುತ್ತೂರ ಬೆಳದಿಂಗಳು' ಹಾಗೂ 'ಶ್ರೀ ಗೌರೀಶಂಕರ ಸ್ವಾಮಿಗಳವರ ಸಮಗ್ರ ಸಾಹಿತ್ಯ' ಕೃತಿಗಳ ಲೋಕಾರ್ಪಣೆ ಸಮಾರಂಭ. ಚಿತ್ರದಲ್ಲಿ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಶ್ರೀ ಎಚ್.ಎಸ್. ದೊರೆಸ್ವಾಮಿ, ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಪರಮಪೂಜ್ಯ ಜಗದ್ಗುರುಗಳು, ನಾಡೋಜ ಡಾ. ದೇ. ಜವರೇಗೌಡ ಮತ್ತು ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರುಗಳು

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವಕ್ಕಾಗಿ ಬರಹಗಳಿಗೆ ಆಹ್ವಾನ**

ಅಕ್ಷರ, ಅನ್ನ, ಆರೋಗ್ಯ ಕ್ಷೇತ್ರಗಳಲ್ಲಿ ಅಹರ್ನಿಶಿ ಸೇವೆಗೈದ ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮಶತಮಾನೋತ್ಸವದ ಅಂಗವಾಗಿ ನೆನಪಿನ ಸಂಚಿಕೆಗಳನ್ನು ಹೊರತರಲಾಗುತ್ತಿದೆ. ಪೂಜ್ಯರು ಸಲ್ಲಿಸಿರುವ ಅನುಪಮ ಸೇವೆ ಸರ್ವವಿದಿತವಾಗಿದೆ.

ಆಸಕ್ತ ಲೇಖಕರು ಪೂಜ್ಯರ ಜೀವನ-ಸಾಧನೆಗಳನ್ನು ಕುರಿತಾಗಿ ಪೂಜ್ಯರ ನೆನಪಿನ ಮಾಹಿತಿ ಅಥವಾ ಘಟನೆಗಳಿದ್ದರೆ (ಈಗಾಗಲೇ ಕಳುಹಿಸಿಕೊಟ್ಟಿರುವವರನ್ನು ಹೊರತುಪಡಿಸಿ) ದಯವಿಟ್ಟು ಬರೆದು ಕಳುಹಿಸಿಕೊಡಬೇಕಾಗಿ ವಿನಂತಿ. ಹಾಗೆಯೇ ವಿಶೇಷವಾದ ಭಾವಚಿತ್ರಗಳಿದ್ದರೆ ಅವುಗಳನ್ನೂ ಕಳುಹಿಸಿಕೊಟ್ಟು ಅನಂತರ ಹಿಂದಕ್ಕೆ ಪಡೆಯಬಹುದಾಗಿದೆ.

ಆಸಕ್ತರು ತಮ್ಮ ಬರಹಗಳನ್ನು ಉಪ ಸಂಯೋಜನಾಧಿಕಾರಿಗಳು, ಶತಮಾನೋತ್ಸವ ಸಮಿತಿ, ಜೆಎಸ್ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004 ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಸಂಚಾಲಕ
ಶತಮಾನೋತ್ಸವ ಸಮಿತಿ

# ಸಂಪಾದಕೀಯ

ಇದೇ ಮೇ ತಿಂಗಳಿನಲ್ಲಿ ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ಸಾಮಾಜಿಕ, ಶೈಕ್ಷಣಿಕ ಹಿನ್ನೆಲೆಯಲ್ಲಿ ಜನಗಣತಿ ನಡೆಯಿತು. ಇದರ ಉದ್ದೇಶ ಸಾಮಾಜಿಕ ನ್ಯಾಯವನ್ನು ಒದಗಿಸುವ ಸಲುವಾಗಿ ಹಿಂದುಳಿದ ಸಮುದಾಯಗಳ ಜನಸಂಖ್ಯೆಯನ್ನು ನಿಖರವಾಗಿ ಗುರುತಿಸಿ ಅವರುಗಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸಮಾಜದ ಮುಖ್ಯವಾಹಿನಿಗೆ ತಂದು ಸಮಸಮಾಜವನ್ನು ನಿರ್ಮಾಣ ಮಾಡುವುದು ಎನ್ನುವುದು ಸರ್ಕಾರ ಕೊಟ್ಟಂತಹ ಸಮರ್ಥನೆ. ಧನಾತ್ಮಕವಾಗಿ ಯೋಚನೆ ಮಾಡಿದರೆ ಈ ಉದ್ದೇಶ ಸರಿಯಾದದ್ದೇ. ಆದರೆ ಆಡಳಿತ ನಡೆಸುತ್ತಿರುವವರ ಗುಪ್ತ ಕಾರ್ಯಸೂಚಿ ಬೇರೆಯೇ ಇರುವಂತಿದೆ. ಅವರ ಹೇಳಿಕೆ ಮೇಲ್ನೋಟಕ್ಕೆ ಸರಿಯಾಗಿರುವಂತೆ ಕಂಡುಬಂದರೂ, ಅವರ ಉದ್ದೇಶ ಜನಸಂಖ್ಯಾಬಾಹುಳ್ಯವುಳ್ಳ ಮೇಲುವರ್ಗದವರನ್ನು, ಸರ್ಕಾರದ ಸವಲತ್ತುಗಳನ್ನು ಕೊಡುವ ಆಮಿಷವೊಡ್ಡಿ, ಅನೇಕ ಗುಂಪುಗಳಾಗಿ ಬೇರ್ಪಡಿಸಿ ಅಂಥ ಸಮುದಾಯಗಳನ್ನು ದುರ್ಬಲಗೊಳಿಸುವ ಮೂಲಕ ಕೆಲವು ವರ್ಗಗಳ ಶಕ್ತಿಗುಂದಿಸುವುದು ಎನ್ನುವುದು ಹಲವರು ವ್ಯಕ್ತಪಡಿಸುತ್ತಿರುವ ಆತಂಕ. ಒಂದು ಪಕ್ಷ ಈ ತೆರನಾದ ಗುಪ್ತ ಕಾರ್ಯಸೂಚಿ ಸರ್ಕಾರಕ್ಕೆ ಇದ್ದದ್ದೇ ಆದರೆ ಅದು ನಿಜಕ್ಕೂ ಖಂಡನೀಯ. ಆದರೆ ಈ ಬಗ್ಗೆ ಅರೆಬರೆ ಜ್ಞಾನದಿಂದ ಹಾದಿಬೀದಿಯಲ್ಲಿ ಹಗುರವಾಗಿ ಮಾತನಾಡಿಕೊಂಡು, ಕೆಲವೊಮ್ಮೆ ಪಕ್ಷ, ಜಾತಿ ರಾಜಕಾರಣದ ಗುಪ್ತಲೆಕ್ಕಾಚಾರದ ಹಿನ್ನೆಲೆಯಲ್ಲಿ ಸಾಮಾನ್ಯ ಜನರನ್ನು ದಾರಿ ತಪ್ಪಿಸುವುದಕ್ಕಿಂತ ವಿಶಾಲ ಮನೋಭಾವನೆಯ ಪ್ರಗತಿಪರ ಚಿಂತಕರು, ಇದರ ಸಾಧಕ-ಬಾಧಕಗಳ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸುವಂಥ ಚಿಂತನ ಮಂಥನಗಳನ್ನು ನಡೆಸಬೇಕಾದುದು ಅಗತ್ಯ.

ಇಂಥ ಯಾವುದೇ ಹೊಸ ಪರಿಕ್ರಮದ ಸಂದರ್ಭದಲ್ಲಿ ಈ ತೆರನಾದ ಅನುಮಾನಗಳು, ಗೊಂದಲಗಳು ಸಹಜವಾಗಿ ಕಂಡುಬರುತ್ತವೆ. ಸಮೂಹದ ಚಿಂತನೆಗಳು ಒಂದೇ ಸ್ತರದಲ್ಲಿ ನಡೆಯಲು ಸಾಧ್ಯವಿಲ್ಲದಿರುವುದರಿಂದ ಅವರವರ 'ದೃಷ್ಟಿ'ಗೆ ದಕ್ಕಿದಷ್ಟು ಅವರವರ ನಿರ್ಧಾರಗಳಾಗಿರುತ್ತವೆ; ಆದರೆ ವಾಸ್ತವ ಸ್ಥಿತಿ ಮತ್ತೇನೋ ಆಗಿರುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇವು ಒಂದು ರೀತಿಯ ಸಾಮಾಜಿಕ 'ಸ್ಥಿತ್ಯಂತರ'ಗಳ ಸಂದರ್ಭಗಳಾಗಿರುತ್ತವೆ. ಆದ್ದರಿಂದ ಪ್ರಜ್ಞಾವಂತರು ಇವುಗಳನ್ನು ಬಹಳ ಎಚ್ಚರಿಕೆಯಿಂದ, ದೂರದೃಷ್ಟಿಯಿಂದ ವಿಶ್ಲೇಷಿಸಬೇಕಾಗುತ್ತದೆ. ಮಾಜಿ ಮುಖ್ಯಮಂತ್ರಿ

ಶ್ರೀ ಡಿ. ದೇವರಾಜ ಅರಸು ಅವರು ಉಳುವವನನ್ನೇ ಭೂಮಿಯ ಒಡೆಯನನ್ನಾಗಿಸಿದಾಗ ಹಾವನೂರು ವರದಿ ಜಾರಿಗೆ ಬಂದ ಸಂದರ್ಭದಲ್ಲಿ ನಾಡಿನಲ್ಲಿ ಉಂಟಾದ 'ಸಂಚಲನ'ದ ಉದಾಹರಣೆ ನಮ್ಮ ಕಣ್ಣ ಮುಂದೆ ಇನ್ನೂ ಹಸಿರಾಗಿಯೇ ಇದೆ.

ಒಂದು ಬಹುಮುಖಿ ಸಂಸ್ಕೃತಿಯ, ಬಹುಸ್ತರೀಯ ಸಾಮಾಜಿಕ ಜನವರ್ಗಗಳಿರುವ ಈ ನಾಡಿನಲ್ಲಿ (ಹಾಗೆಯೇ ದೇಶದಲ್ಲಿ) ಇಂಥ ಯಾವುದೇ ಯೋಜನೆಗಳು ಹೊಸ ಫಲಾನುಭವಿಗಳಿಗೆ ಸಂತೋಷವನ್ನು, ಆ ಕಕ್ಷೆಯೊಳಗೆ ಬರದಿದ್ದವರಿಗೆ ನಿರಾಸೆಯನ್ನು ಉಂಟುಮಾಡುವುದು ಸಹಜ. ಆದರೆ ತಾವೂ ಹೇಗಾದರೂ ಮಾಡಿ ಆ ಫಲಾನುಭವಿಗಳ ಪಟ್ಟಿಗೆ ಸೇರಿಕೊಳ್ಳಲು ಏನು ಮಾಡಬೇಕು, ಅದಕ್ಕೆ ಅನುಸರಿಸಬೇಕಾದ ಒಳದಾರಿಗಳು ಯಾವುವು ಎಂದು ಹುಡುಕಾಡುವುದಿದೆಯಲ್ಲ ಅದು ನಿಜಕ್ಕೂ ಸಮಾಜಘಾತುಕ ವಾದುದು, ಈ ಮಾತುಗಳ ಹಿನ್ನೆಲೆಯಲ್ಲಿ ಜನಗಣತಿಗಿಂತ ಹಿಂದೆ ನನ್ನ ಗಮನಕ್ಕೆ ಬಂದ ಒಂದು ವಿಷಯವನ್ನು ಇಲ್ಲಿ ಓದುಗರೊಡನೆ ಹಂಚಿಕೊಳ್ಳಬಯಸುತ್ತೇನೆ:

ಉತ್ತರ ಕರ್ನಾಟಕದ ನನ್ನ ಸಾಹಿತಿಮಿತ್ರರೊಬ್ಬರೊಡನೆ ಹೀಗೆಯೇ ಮಾತನಾಡುತ್ತಿರುವಾಗ ಜನಗಣತಿಯ ವಿಷಯ ಪ್ರಸ್ತಾಪಕ್ಕೆ ಬಂತು. ಅವರು ನಿಮ್ಮ ಕಡೆ ಲಿಂಗಾಯಿತರು ಹೇಗೆ ಬರೆಸಿದ್ದಾರೆ ಎಂದರು. ಧರ್ಮದ ಕಾಲಂನಲ್ಲಿ 'ವೀರಶೈವ ಲಿಂಗಾಯಿತ' ಎಂದೂ, ಜಾತಿ ಕಾಲಂನಲ್ಲಿ ಅವರವರ ವರ್ಗವನ್ನೂ ಬರೆಸಿದ್ದಾರೆ ಎಂದೆ. ಆಗ ಅವರು "ನಾವು ಹಾಗೆ ಮಾಡಲಿಲ್ಲ. ನಮ್ಮ ಜಾತಿಯನ್ನು ಮಾತ್ರ ಬರೆಸಿದೆವು. (ಆ ಜಾತಿಯ ಹೆಸರು ಇಲ್ಲಿ ಅಪ್ರಸ್ತುತ) ಧರ್ಮ ನನಗೆ ಬೇಕೆನಿಸಲಿಲ್ಲ ಎಂದರು. ಅವರು ಏನು ಹೇಳುತ್ತಿದ್ದಾರೆ ಎನ್ನುವುದು ನನಗೆ ಸ್ಪಷ್ಟವಾಗಲಿಲ್ಲ. ಮುಂದುವರೆದು ನೀವು ಧರ್ಮದ ಕಾಲಂ ಅನ್ನು ಏಕೆ ನಮೂದಿಸಲಿಲ್ಲ ಎಂದೆ. ಅದಕ್ಕೆ ಅವರು ಅದರ ಅಗತ್ಯ ನಮಗೆ ಇಲ್ಲ. ಏಕೆಂದರೆ ಬಸವಣ್ಣನ ಕಾಲದಲ್ಲಿ ನಮ್ಮವರು ಲಿಂಗಾಯಿತ ರಾದರು. ಆದರೆ ನಮ್ಮ ಎದೆಯ ಮೇಲೆ ಇಷ್ಟಲಿಂಗ ಬಂದಿತೇ ಹೊರತು, ನಮ್ಮನ್ನು ಬಹುಸಂಖ್ಯಾತರು ಲಿಂಗಾಯಿತರನ್ನಾಗಿಸಿಕೊಳ್ಳಲಿಲ್ಲ. 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವ ಗಾದೆಮಾತಿನಂತೆ ಕೌಟುಂಬಿಕ ಸಂಬಂಧಗಳನ್ನು ಬೆಳೆಸುವುದರಲ್ಲಿ, ರಾಜಕೀಯ ಪ್ರಾತಿನಿಧ್ಯ ಕೊಡುವುದರಲ್ಲಿ ನಮ್ಮನ್ನು ಹೊರಗಿನವರಾಗಿಯೇ ಕಾಣುತ್ತ ಬಂದರು. ನಾವು ನಮ್ಮನಮ್ಮಲ್ಲಿಯೇ ಸಂಬಂಧ ಬೆಳೆಸಬೇಕು; ನಮ್ಮ ಹೆಣ್ಣುಮಕ್ಕಳು ಬೇರೆಯವರ ಶುಭಕಾರ್ಯಗಳಲ್ಲಿ ಎಲ್ಲರಂತೆ ಪೂಜೆ, ಶಾಸ್ತ್ರ ಮಾಡಲು ಮುಕ್ತ ಅವಕಾಶವಿಲ್ಲ. ಹೆಸರಿಗೆ ಮಾತ್ರ ನಾವು ಲಿಂಗಾಯಿತರು. ಇತ್ತ ಧರ್ಮದೊಳಗೂ ನಮಗೆ ಶೋಷಣೆ, ಸರ್ಕಾರದಲ್ಲಿಯೂ ಇವರು ಮೇಲುಜಾತಿಯವರು ಎನ್ನುವ ಕಾರಣಕ್ಕೆ ಯಾವುದೇ ಸರ್ಕಾರಿ ಸವಲತ್ತುಗಳೂ ಸಿಕ್ಕುವ ಹಾಗಿಲ್ಲ. ಇಂತಹ ಇಕ್ಕಟ್ಟಿನಲ್ಲಿ ನಾವು ಎರಡನ್ನೂ ಏಕೆ ಕಳೆದುಕೊಂಡು ಬದುಕಬೇಕು? ನಮ್ಮ ಮೂಲ ಜಾತಿಯನ್ನಾದರೂ



ಗುರುತಿಸಿಕೊಂಡರೆ ನಮಗೆ ಸರ್ಕಾರಿ ಸವಲತ್ತುಗಳು ಸಿಕ್ಕಿ ನಮ್ಮ ಕುಟುಂಬ ಆರ್ಥಿಕವಾಗಿಯಾದರೂ ಸದೃಢವಾಗುತ್ತದೆ. ನಮ್ಮಂತಹ ಸಣ್ಣ ಸಮುದಾಯದವರಿಗೆ ಧರ್ಮದ ಅಗತ್ಯ ಕಂಡುಬರುವುದಿಲ್ಲ. ಏಕೆಂದರೆ 'ಧರ್ಮ' ಯಾವಾಗಲೂ ಬಹುಸಂಖ್ಯಾತರ ಸ್ವತ್ತು. ನಮ್ಮದು ಎಲ್ಲಿ ಹೋದರೂ ಪರಾವಲಂಬಿ ಜೀವನ. ದೊಡ್ಡವರೆನಿಸಿಕೊಂಡವರ ಮರ್ಜಿಯಲ್ಲಿ ಬದುಕಿದರೆ ಮಾತ್ರ ಉಳಿಗಾಲ. ನಾವು 12ನೇ ಶತಮಾನದಿಂದಲೂ ಭಾವನಾತ್ಮಕ ಬೆಸುಗೆಗಾಗಿ ಹಪಹಪಿಸುತ್ತಲೇ ಬದುಕಿದೆವು; ಆದರೆ ಅದು 21ನೇ ಶತಮಾನದಲ್ಲೂ ಸಾಧಿತವಾಗಲಿಲ್ಲ. ಈಗ ನೀವೇ ಹೇಳಿ, ನಾವು ಇನ್ನೇನು ಬರೆಸಬೇಕಾಗಿತ್ತು" ಎಂದು ನನಗೇ ಪ್ರಶ್ನೆ ಹಾಕಿದರು.

ಅವರ ಈ ಪ್ರಶ್ನೆ ತುಂಬಾ ಜಟಿಲವಾಗಿತ್ತು, ಅಷ್ಟೇ ಚಿಂತನಾರ್ಹವೂ ಆಗಿತ್ತು. ಹನ್ನೆರಡನೆಯ ಶತಮಾನದಲ್ಲಿ ನಡೆದ ಅಭೂತಪೂರ್ವ ಸಾಮಾಜಿಕ ಕ್ರಾಂತಿಯಲ್ಲಿ (ಆಧ್ಯಾತ್ಮಿಕಸಂಬಂಧಿ ವಿಷಯ ಒಂದುಕಡೆ ಇರಲಿ) ಸಕಲೆಂಟು ಜಾತಿಯ ಜನರನ್ನೂ ಬಸವಣ್ಣನವರು ಒಂದುಗೂಡಿಸಿ ಒಂದು ಆದರ್ಶ ಸಮಾಜವನ್ನು ರೂಪಿಸಿದರು. ಅಲ್ಲಿ ಸಾಮಾಜಿಕವಾಗಿ ಯಾರೂ, 'ಅನ್ಯ'ರೆನಿಸದೆ, 'ನಮ್ಮವ'ರೆನಿಸಿಕೊಂಡು ಹೆಮ್ಮೆಯಿಂದ ಬಾಳಿದರು; ಹಾಗೆಯೇ ವಿನಯದಿಂದ ಬಾಗಿದರು.

> ದೇವಸಹಿತ ಮನೆಗೆ ಭಕ್ತ ಬಂದಡೆ
> ಕಾಯಕವಾವುದೆಂದು ಬೆಸಗೊಂಡೆನಾದಡೆ
> ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ!
> ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
> ನಿಮ್ಮ ರಾಣಿವಾಸದಾಣೆ

ಎಂದು ಆಣೆ ಮಾಡಿದವರು ಬಸವಣ್ಣನವರು. ಕಾಯಕದ ಕಾರಣಕ್ಕಾಗಿಯೇ ಕೀಳಾಗಿ ಪರಿಗಣಿಸಲ್ಪಡುತ್ತಿದ್ದ ಅನೇಕ ಕಿರುಸಮುದಾಯಗಳೂ ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು ಸಾಧ್ಯವಾದದ್ದು, ಹಡಪದವರೂ ಶೀಲವಂತರೆನಿಸಿಕೊಂಡದ್ದು, ಹೊಲೆಯರೆನಿಸಿಕೊಂಡವರು ಹಿರಿಯಕುಲದವರಾದದ್ದು ಬಸವಣ್ಣನವರ ಇಂತಹ ಹೃದಯವೈಶಾಲ್ಯದಿಂದ, ಪಾರದರ್ಶಕ ಕ್ರಿಯಾಶೀಲತೆಯಿಂದ. ಕೀಳುಕುಲದವನೊಬ್ಬ 'ಶರಣು' ಎಂದರೆ, 'ಶರಣು ಶರಣಾರ್ಥಿ' ಎಂದು 'ಬಾಗಿದ ತಲೆಯ, ಮುಗಿದ ಕೈಯಾದ' ಬಸವಣ್ಣನವರು ತಮ್ಮ ವ್ಯೋಮಸದೃಶ ವ್ಯಕ್ತಿತ್ವದಿಂದ, ಸಕಲ ಜೀವಾತ್ಮರಿಗೆ ಲೇಸು ಬಯಸಿದ್ದರಿಂದ, ಶ್ರೇಣೀಕೃತ ಮಿಶ್ರ ಸಂಸ್ಕೃತಿಯ ಭಿನ್ನಸಂಸ್ಕಾರಗಳ ಸಮುದಾಯಗಳ ಕೀಳರಿಮೆಯನ್ನು ಕಿತ್ತೊಗೆದು ಎಲ್ಲರನ್ನೂ 'ಕೂಡಲಸಂಗನ' ಮನೆಯ ಮಗನೆಂದು ಆತ್ಮಪೂರ್ವಕವಾಗಿ ಅಪ್ಪಿಕೊಳ್ಳುವುದನ್ನು ಮಾಡಿದ ಕಾರಣಕ್ಕಾಗಿಯೇ ಅಂದು ಅಂತಹ ಒಂದು ಆದರ್ಶ ಸಮಾಜ ನಿರ್ಮಾಣಗೊಂಡಿತು. ಅನಂತರ ಏನಾಯಿತು? ಇದು

ಬೇರೆಯವರನ್ನು ಕುರಿತು ಕೇಳುವ ಪ್ರಶ್ನೆಯಲ್ಲ, ಸಮಾಜವು ತನ್ನನ್ನು ತಾನೇ ಕೇಳಿಕೊಳ್ಳಬೇಕಾದ ಪ್ರಶ್ನೆ. ಮೇಲುನೋಟಕ್ಕೆ ವೀರಶೈವ ಸಮಾಜ ಒಂದೇ ಎಂದುಕೊಂಡು ಬಂದರೂ, ಒಳಹೊಕ್ಕು ನೋಡಿದರೆ ಅಲ್ಲಿ ಎಷ್ಟು ಒಳಸುಳಿಗಳಿವೆ ಎನ್ನುವುದು ನಿಜಕ್ಕೂ ಅನೂಹ್ಯವಾದದ್ದು. ಒಟ್ಟಿಗೆ ಕುಳಿತುಕೊಳ್ಳುತ್ತಾರೆ, ಮಾತನಾಡುತ್ತಾರೆ, ಮೆರವಣಿಗೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ, ಜೈಕಾರ ಹಾಕುತ್ತಾರೆ, ಆದರೆ ಎದೆ ತೆರೆದು ನೋಡಿದರೆ, ಅಲ್ಲಿ ಕೇವಲ ಕಾಣುವುದು ಬತ್ತಿಹೋದ ಕೆರೆ ಹಳ್ಳ ಬಾವಿಗಳು ಮಾತ್ರ; ಬಸವವಾರಿಧಿಯ ಮುತ್ತುರತ್ನಗಳು ಗ್ರಂಥಗಳಲ್ಲಿ ವರ್ಣನೆಗೆ ಮಾತ್ರ ಸೀಮಿತ ವಾಗಿವೆ; ವಿದ್ವಾಂಸರೆನಿಸಿಕೊಂಡವರ ಮಾತುಗಳೂ ವೇದಿಕೆಯಲ್ಲಿ ಶೋಭಿಸುತ್ತವೆ. ಸಾಮಾಜಿಕ ನಡಾವಳಿಯಲ್ಲಿ ಸೋಲುತ್ತವೆ. ಬಸವಣ್ಣನವರು 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ' ಎಂದಿದ್ದಾರೆ, 'ಕೀಳಾಗಲೊಲ್ಲೆ ಮೇಲಾಗಲೊಲ್ಲದೆ' ಎಂದು ನಾವು ಒಳಗೊಳಗೆ ಕನವರಿಸುತ್ತಿದ್ದೇವೆ. ವೃತ್ತಪತ್ರಿಕೆಗಳ ವಧೂವರರ ಜಾಹಿರಾತುಗಳಲ್ಲಿಯೂ ಉಪಪಂಗಡಗಳನ್ನು ಯಾವ ಸಂಕೋಚವೂ ಇಲ್ಲದೆ ನಮೂದಿಸುವ ಮಟ್ಟದಿಂದ ನಾವು ಮೇಲಕ್ಕೆ ಏರಲೇ ಇಲ್ಲ. ಅದೂ ವಿದ್ಯಾವಂತ ವರ್ಗದಲ್ಲಿ!

ಇಂತಹ ಸನ್ನಿವೇಶ ಪ್ರಸ್ತುತ ಸಮಾಜದಲ್ಲಿ ಇರುವುದರ ಬಗ್ಗೆ ನೇತಾರರೆನಿಸಿ ಕೊಂಡವರು ಇದರ ನಿರ್ಮೂಲನೆಗೆ ಏನು ಕ್ರಿಯಾಯೋಜನೆಯನ್ನು ರೂಪಿಸಿಕೊಂಡಿ ದ್ದಾರೆ, ಅದು ಎಷ್ಟರಮಟ್ಟಿಗೆ ಫಲ ಕೊಟ್ಟಿದೆ, ಅಥವಾ ಕೇವಲ ಹೇಳಿಕೆಗಳ ಮಟ್ಟ ದಲ್ಲಿಯೇ ಸಾರ್ಥಕತೆಯನ್ನು ಕಂಡುಕೊಂಡಿದೆಯೇ? ಇಂತಹ ಹತ್ತು ಹಲವು ಪ್ರಶ್ನೆಗಳು ಎಲ್ಲರನ್ನೂ ಕಾಡುತ್ತಿವೆ. ವಚನಸಾಹಿತ್ಯದ ಪ್ರಸಾರದ ಕೆಲಸ ಸಾಕಷ್ಟು ವ್ಯಾಪಕವಾಗಿ ನಡೆಯುತ್ತಿರುವುದನ್ನು ಶ್ಲಾಘಿಸುತ್ತಲೇ, ಅವುಗಳ ಆಚರಣೆಯ ಆಯಾಮಗಳ ಬಗ್ಗೆ ಎಷ್ಟು ಗಂಭೀರ ಪ್ರಯತ್ನಗಳು ನಡೆದಿವೆ ಎನ್ನುವುದರ ಪರಾಮರ್ಶನೆ ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ನನ್ನ ಸ್ನೇಹಿತರು ತಮ್ಮ ಮೂಲ ಜಾತಿಯ ಬಗ್ಗೆ ಹೇಳಿದ ಮಾತು ಗಳನ್ನು ಸಂಪೂರ್ಣ ಒಪ್ಪಲಾಗದಿದ್ದರೂ, ಅದನ್ನು ಇಡಿಯಾಗಿ ನಿರಾಕರಿಸುವುದಕ್ಕೂ ಸಾಧ್ಯವಿಲ್ಲ ಎನ್ನುವುದನ್ನು ಅರಿತು, ಈ ದಿಸೆಯಲ್ಲಿ ನಾವೆಲ್ಲರೂ ಇನ್ನು ಮುಂದಾದರೂ ಒಂದೇ ಎಂದು ಗುರುತಿಸಿ ಕೊಳ್ಳೋಣ – ಕೂಡಲಸಂಗನ ಪಾದಸಾಕ್ಷಿಯಾಗಿ!

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

**ಜ**ಗತ್ತಿನಲ್ಲಿರುವ ಜೀವರಾಶಿಗಳಲ್ಲೆಲ್ಲಾ ಮಾನವಜನ್ಮ ಬಹಳ ಶ್ರೇಷ್ಠವಾದುದೆಂದು ಪ್ರಪಂಚದ ಎಲ್ಲ ತತ್ತ್ವಜ್ಞಾನಿಗಳೂ, ದಾರ್ಶನಿಕರೂ, ಧರ್ಮಾಚಾರ್ಯರೂ ಹೇಳಿದ್ದಾರೆ. ಧಾರ್ಮಿಕ ನಂಬಿಕೆ, ಆಚರಣೆ, ಸಿದ್ಧಾಂತಗಳ ಬಗ್ಗೆ ಅನೇಕ ರೀತಿಯ ಚರ್ಚೆಗಳು ನಡೆದಿದ್ದರೂ ಈ ವಿಚಾರದಲ್ಲಿ ಮಾತ್ರ ಏಕಾಭಿಪ್ರಾಯವಿರುವುದು ಕಂಡುಬರುತ್ತದೆ. ದೃಗ್ಗೋಚರವಲ್ಲದ ಕ್ರಿಮಿಕೀಟಾದಿಗಳಿಂದ ಹಿಡಿದು ತಿಮಿಂಗಿಲಗಳಂತಹ ಬೃಹತ್ ಕಾಯದ ಜೀವಜಾಲಗಳ ನಡುವೆ ಮನುಷ್ಯ ವಿಶೇಷವಾಗಿ ಕಂಡುಬರುತ್ತಾನೆ. ಉಳಿದ ಎಲ್ಲ ಪ್ರಾಣಿಗಳಲ್ಲಿಯೂ ಸಮಾನವಾಗಿ ಕಂಡುಬರುವ ಕಾಯಪ್ರಜ್ಞೆಯ ಅರ್ಥಾತ್ ಕಾಯಕೇಂದ್ರಿತವಾದ ಆಹಾರ, ನಿದ್ರೆ, ಭಯ, ಮೈಥುನಗಳಾಚೆಗೂ ಈ ಬ್ರಹ್ಮಾಂಡವನ್ನು ಪರಿಭಾವಿಸುವ ಶಕ್ತಿ ಇರುವುದು ಮನುಷ್ಯನಿಗೆ ಮಾತ್ರ. ಬುದ್ಧಿ ಮತ್ತು ಭಾವಸಂಬಂಧಿ ಅಂಶಗಳು, ತನ್ನನ್ನು ಶತ್ರುವಿನಿಂದ ರಕ್ಷಿಸಿಕೊಳ್ಳುವ ತಂತ್ರಗಳು, ತನ್ನ ಕರುಳಕುಡಿಗಳನ್ನು ಜೋಪಾನಿಸುವ, ಪೋಷಿಸುವ ಭಾವಸ್ತರ, ಪ್ರಾಣಿಪಕ್ಷಿಗಳಲ್ಲಿ ಅಷ್ಟಿಷ್ಟು ಕಂಡುಬಂದರೂ, ಅದರಾಚೆಗಿನ ಹೆಚ್ಚಿನ ಬುದ್ಧಿಪೂರ್ವಕ ಕ್ರಿಯಾಶೀಲತೆ ಅವುಗಳಲ್ಲಿ ಕಂಡುಬರುವುದಿಲ್ಲ. ಸೌಂದರ್ಯದಲ್ಲಿ, ಬಣ್ಣದಲ್ಲಿ, ದೇಹಶಕ್ತಿಗಳಲ್ಲಿ, ಆಕಾರದಲ್ಲಿ, ಆಯುಸ್ಸಿನಲ್ಲಿ ಮನುಷ್ಯನಿಗೆ ಹತ್ತು ಹಲವು ಪಟ್ಟು ಮಿಗಿಲಾದ ಪ್ರಾಣಿಪಕ್ಷಿಗಳು ಪ್ರಕೃತಿಯಲ್ಲಿ ಕಂಡುಬರುತ್ತವೆ. ಸಸ್ಯಲೋಕದಲ್ಲಂತೂ ಊಹೆಗೂ ನಿಲುಕದ ಅನೇಕ ಅಚ್ಚರಿಯ ಅಂಶಗಳು ಗೋಚರಿಸುತ್ತವೆ. ಇಷ್ಟೆಲ್ಲಾ ಇದ್ದರೂ ಸಹ ಇವುಗಳ ನಡುವೆ ಮನುಷ್ಯನಿಗೊಂದು ವಿಶೇಷ ಸ್ಥಾನವಿದೆ. ಅದಕ್ಕೆ ಪ್ರಮುಖ ಕಾರಣ ಯಾವುದೇ ಬಾಹ್ಯ ಪರಿಕರಗಳ ಅಳತೆಗೂ ದಕ್ಕದ, ಯಾವುದೇ ಸಾಂಪ್ರದಾಯಿಕ ಪ್ರಯೋಗಗಳಿಂದಲೂ ನಿಷ್ಕರ್ಷೆ ಮಾಡಲಾಗದ 'ಆತ್ಮ' ಎನ್ನುವುದೊಂದು ಅವನಲ್ಲಿ ಅಂತರ್ಗತವಾಗಿರುವುದು. ಅದರ ಸ್ವರೂಪವನ್ನು ಇದುವರೆವಿಗೆ ಯಾರೂ ಸ್ಥಿರೀಕರಿಸಲು ಸಾಧ್ಯವಾಗಿಲ್ಲ. ಗ್ರಹತಾರೆ ನೀಹಾರಿಕೆಗಳ ನಿಗೂಢತೆಯನ್ನು ಬೋಧಿಸಲು ಸಮರ್ಥನಾಗಿರುವ ಮನುಷ್ಯ ತನ್ನೊಳಗಿನ ಈ ಅನೂಹ್ಯ ಶಕ್ತಿ ಕೇಂದ್ರದ ಸ್ವರೂಪವನ್ನು ಕಂಡುಕೊಳ್ಳಲು ಇನ್ನೂ ಸಾಧ್ಯ ವಾಗದಿರುವುದು ನಿಜಕ್ಕೂ ಅಚ್ಚರಿ ತರುವಂತದು.

ಏಕೆಂದರೆ, ಆತ್ಮನನ್ನು ಅರಿಯುವ ಸಾಧನಾಮಾರ್ಗದ ಸ್ವರೂಪ, ಕೇವಲ ಕಾಯಪ್ರಜ್ಞೆಯ ಮಾರ್ಗದ್ದಲ್ಲ. ದೇಹಸಂಬಂಧಿಯಾದ, ಬುದ್ಧಿಸಂಬಂಧಿಯಾದ ಶಕ್ತಿಸಾಮರ್ಥ್ಯಗಳನ್ನು ಎಷ್ಟೇ ಹೆಚ್ಚಿಸಿಕೊಂಡರೂ, ಅದು ಆತ್ಮಸಾಮರ್ಥ್ಯದ

ಅನುಭವಕ್ಕೆ ಕಿಂಚಿತ್ತೂ ಸಹಕಾರಿಯಾಗುವುದಿಲ್ಲ. ಏಕೆಂದರೆ ದೇಹ ಬುದ್ಧಿಗಳಿಂದ ಸೃಷ್ಟಿಯಾದ ಅಥವಾ ಸಂಶೋಧಿಸಲ್ಪಟ್ಟ ಯಾವುದೇ ವಸ್ತುವಿಗೆ ಕೊನೆಗೊಂದು ದಿನ 'ನಾಶ' ಉಂಟಾಗುತ್ತದೆ. ಆದರೆ ದೇಹದೊಳಗೇ ಇದ್ದರೂ 'ಆತ್ಮ'ದ ಅಸ್ತಿತ್ವಕ್ಕೆ ನಾಶವಿಲ್ಲ.

ಅಚ್ಛೇದ್ಯೋಽಯಮದಾಹ್ಯೋಽಯಂ ಅಕ್ಲೇದ್ಯೋಽಶೋಷ್ಯ ಏವ ಚ |
ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ ||

ಎಂದು ಗೀತೆಯಲ್ಲಿ ಹೇಳಿರುವಂತೆ ಆತ್ಮವು ಕತ್ತರಿಸಲ್ಪಡತಕ್ಕದ್ದಲ್ಲ, ಸುಡಲ್ಪಡತಕ್ಕದ್ದಲ್ಲ, ನೆನೆಯತಕ್ಕದ್ದಲ್ಲ, ಒಣಗತಕ್ಕದ್ದಲ್ಲ. ಅಂತಹ ನಿತ್ಯವಾದ, ಸರ್ವಾಂತರ್ಗತವಾದ, ಸ್ಥಾಣುವಾದ, ಅಚಲವಾದ, ಸನಾತನ ವಸ್ತುವೇ ಆತ್ಮ.

ಮನುಷ್ಯ 'ನಾನು' ಎನ್ನುವ ಪದವನ್ನು ಬಳಸುವಾಗ, ಆ 'ನಾನು' ಎನ್ನುವುದು 'ನನ್ನ ಆತ್ಮ' ಎನ್ನುವ ಮಾತನ್ನು ಸೂಕ್ಷ್ಮವಾಗಿ ಧ್ವನಿಸುತ್ತದೆಯೇ ಹೊರತು ಆತ ಧರಿಸಿರುವ ಪಂಚೇಂದ್ರಿಯ ಕವಚವನ್ನಲ್ಲ. ಆದ್ದರಿಂದ ಇಂತಹ ಶಾಶ್ವತವಾದ ಶಕ್ತಿಯನ್ನು ನಿರಂತರವಾಗಿ ಪೋಷಿಸುತ್ತಾ, ಈ ಭವಬಂಧನಗಳಿಂದ - ತಾತ್ಕಾಲಿಕವಾದ ದೈಹಿಕ ಯಾತನೆಗಳು, ಸಾಮಾಜಿಕ ಸಮಸ್ಯೆಗಳು ಮುಂತಾದವು - ಬಿಡುಗಡೆಯನ್ನು ಪಡೆಯುವುದನ್ನೇ ನಮ್ಮವರು ಆತ್ಮೋದ್ಧಾರ, ಮೋಕ್ಷ ಎಂದು ಕರೆದರು. ಇಂತಹ ಆತ್ಮೋದ್ಧಾರದ ಹಾದಿ ತೆರೆದಿರುವುದು ಮನುಷ್ಯನಿಗೆ ಮಾತ್ರ. ಮತ್ತಾವುದೇ 'ಜೀವಿ'ಗೆ ಇಂತಹ ಒಂದು 'ಮಹತ್' ಅವಕಾಶ ಕಲ್ಪನೆಗೂ ಲಭ್ಯವಿರುವುದಿಲ್ಲ.

ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ |
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ||

ಮಹತ್ತನ್ನು ಸಾಧಿಸುವುದಕ್ಕೆ ಮಹಾಪುರುಷರ ಅರ್ಥಾತ್ 'ಮಹಾಗುರು'ವಿನ ಆಶ್ರಯವನ್ನು ಪಡೆಯುವುದು ಅನಿವಾರ್ಯ. ಮಹಾಗುರುವಿನ ಹುಡುಕಾಟದ ಮೊದಲನೆಯ ಹಂತವೆಂದರೆ 'ಅಹಂಕಾರನಿರಸನ' ಹಾಗೂ 'ಸರ್ವಸಮರ್ಪಣಭಾವ'. ಈ ಎರಡೂ ಅಂಶಗಳು ಅಭಿನ್ನವಾಗಿ ಸಾಧಕನ ಒಳಗೆ ಹರಳುಗಟ್ಟದಿದ್ದರೆ, ಇನ್ನಾವುದೇ ಬಾಹ್ಯ ಸಾಧನಗಳು ಬಿಡುಗಡೆಯ ಹಾದಿಯನ್ನು ತೋರಿಸಲಾರವು. 'ಕಾಯಪ್ರಜ್ಞೆ' ಕಾಡಿದಷ್ಟೂ ಹೊತ್ತು ಅಲ್ಲಿ 'ಬಯಲಪ್ರಜ್ಞೆ' ಬೇರೂರುವುದಿಲ್ಲ. ಅಂಗುಲಿಮಾಲ ಬುದ್ಧನಿಗೆ ಶರಣಾದದ್ದು, ಗೋರಕ್ಷ ಅಲ್ಲಮನ ಮುಂದೆ ಬಾಗಿದ್ದು ಯಾವ ಕಾರಣಕ್ಕೆ ಎನ್ನುವುದು ಎಲ್ಲರಿಗೂ ತಿಳಿದದ್ದೇ. ಆಧುನಿಕ ಸಮಾಜ ತನ್ನೆಲ್ಲಾ ಸ್ವಯಂಕೃತ ಹಿಂಸೆಗಳಿಂದ ಬಿಡುಗಡೆ ಪಡೆಯಬೇಕಾದರೆ ಇರುವ ಏಕೈಕ ಮಾರ್ಗ 'ಆತ್ಮೋದ್ಧಾರದ' ಮಾರ್ಗ. ಕಾಯಪ್ರಜ್ಞೆಯನ್ನು ಆತ್ಮಪ್ರಜ್ಞೆಗೊಳಿಸಿಕೊಳ್ಳುವ ಪ್ರಕ್ರಿಯೆಯೇ ಸಮಗ್ರ ಜೀವ ಕ್ರಾಂತಿಯ ಮೊದಲನೆಯ ಮೆಟ್ಟಿಲು; ಅದೇ ಮಾನವ ಜನಾಂಗದ ನಿಜವಾದ ಕ್ರಾಂತಿ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಕೋಲಶಾಂತಯ್ಯನ ವಚನಗಳು: ಅಭಿವ್ಯಕ್ತಿ - ವಿಶ್ಲೇಷಣೆ

**ಡಾ. ಜಿ.ಆರ್. ತಿಪ್ಪೇಸ್ವಾಮಿ**

ಹತ್ತನೆಯ ಶತಮಾನದ ಸಾಹಿತ್ಯದಲ್ಲಿ ಕಥನ ಪ್ರಮುಖವಾಗಿತ್ತು. ಹನ್ನೆರಡನೇ ಶತಮಾನದ ಹೊತ್ತಿಗೆ ಅದು ಮರೆಯಾಗಿ ವೈಯಕ್ತಿಕ ಅನುಭವಪ್ರಧಾನವಾದ ವಚನಗಳು ಮುಂಚೂಣಿಗೆ ಬಂದವು. ಧರ್ಮಕ್ಕಿಂತ ಭಕ್ತಿಗೆ ಪ್ರಾಧಾನ್ಯ ದೊರೆಯಿತು. ವ್ಯಕ್ತಿ ಮತ್ತು ಸಮಾಜದ ಸಂಬಂಧ ಯಾವ ರೀತಿ ಇರಬೇಕು ಎಂಬುದೇ ವಚನ ಸಾಹಿತ್ಯದ ಪ್ರಮುಖ ಆಶಯವಾಯಿತು. ದುಡಿಮೆ ಮತ್ತು ಭಕ್ತಿ ಸಾಮಾಜಿಕ ಮೌಲ್ಯಗಳಾದುವು. ಹಾಗಾಗಿ ವಚನಗಳು ತಮ್ಮ ಕಾಲದ ಧಾರ್ಮಿಕ, ರಾಜಕೀಯ ಅಭಿವ್ಯಕ್ತಿಯಾಗಿಯೂ ಗೋಚರವಾದವು. ವಚನಕಾರರು ಆಂತರಂಗಿಕವಾದ ಅಭಿಪ್ರಾಯಗಳನ್ನು ಹೊರಹಾಕಲು ಪ್ರಕೃತಿಸಹಜ ಸಂಗತಿಗಳನ್ನು ಮಾಧ್ಯಮವಾಗಿಸಿಕೊಂಡರು. ಪರಿಣಾಮಕಾರಿಯಾಗಿಸಲು ಉಪಮೆ, ರೂಪಕ, ಪ್ರತಿಮೆಗಳನ್ನು ಬಳಸಿಕೊಂಡರು. ಆದ್ದರಿಂದ ವಚನಗಳು ಸಹ 'ಸಾಹಿತ್ಯವೇ' ಎಂದು ಖಚಿತವಾಗಿ ಹೇಳಲು ಸಮರ್ಥ ಆಕರಗಳಾದವು. ಈ ವಿಚಾರದಲ್ಲಿ ಒಬ್ಬೊಬ್ಬರದು ಒಂದೊಂದು ರೀತಿಯ ಪ್ರತಿಭೆಯೆನ್ನಬಹುದು. ಕೋಲಶಾಂತಯ್ಯ ಸಹ ಈ ಮಾತಿಗೆ ಹೊರತಾಗಿಲ್ಲ.

**ಸಾಹಿತ್ಯಕ ನೆಲೆ**

ದೃಷ್ಟಾಂತಗಳ ಸರಮಾಲೆಯ ಮೂಲಕವೇ ಗುರುಕಾರುಣ್ಯದ ಮಹಿಮೆಯನ್ನು ನೀಡುತ್ತಾನೆ ಕೋಲಶಾಂತಯ್ಯ.

ಬಿಸಿಲ ಮುಂದಣ ಮಂಜಿನಂತಾಯಿತ್ತು
ದಿಟದ ಮುಂದಣ ಸಟೆಯಂತಾಯಿತ್ತು
ಪುಣ್ಯದ ಮುಂದಣ ಪಾಪದಂತಾಯಿತ್ತು
ಯೋಗಿಯ ಮುಂದಣ ಸಂಸಾರದಂತಾಯಿತ್ತು
ಧೀರನ ಮುಂದಣ ಹೇಡಿಯಂತಾಯಿತ್ತು
ಉರಗನ ಮುಂದಣ ಭೇಕನಂತಾಯಿತ್ತು

ಡಾ. ಜಿ.ಆರ್. ತಿಪ್ಪೇಸ್ವಾಮಿ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಹರಿಯ ಮುಂದಣ ಕರಿಯಂತಾಯಿತ್ತು
ವಿವೇಕಿಯ ಮುಂದಣ ದುಃಖದಂತಾಯಿತ್ತು
ಪುಣ್ಯಾರಣ್ಯದಹನ ಭೀಮೇಶ್ವರನೆಂಬ
ಸದ್ಗುರು ಕಾರುಣ್ಯವಾಗಲೊಡನೆ
ಎನ್ನ ಸುತ್ತಿಹ ಪ್ರಪಂಚು ಸರ್ವವೂ ಓಡಿದವಯ್ಯಾ!

ಬಿಸಿಲು, ದಿಟ, ಪುಣ್ಯ, ಯೋಗಿ, ಧೀರ, ಉರಗ, ಹರಿ, ವಿವೇಕಿ - ಇವು ಪ್ರಬಲ ಹಾಗೂ ಉದಾತ್ತವಾದಂಥವು. ಇವುಗಳಿಗೆ ಅಭಿಮುಖವಾಗಿರುವ ಮಂಜು, ಸಟೆ, ಪಾಪ, ಸಂಸಾರ, ಹೇಡಿ, ಭೇಕ (ಕಪ್ಪೆ), ಕರಿ (ಆನೆ), ದುಃಖ - ಇವೆಲ್ಲ ಸಮರ್ಥವಾಗಿ ಮುಖಾಮುಖಿ ಯಾಗಲಾರವು. ಅವುಗಳಷ್ಟು ಪ್ರಬಲವೂ ಅಲ್ಲ ಉದಾತ್ತವೂ ಅಲ್ಲ. ಇವೆರಡು ನಮ್ಮ ಬದುಕಿನ ವೈರುಧ್ಯಗಳು. ಇವುಗಳ ಮೂಲಕ ಕೋಲಶಾಂತಯ್ಯ ಬದುಕಿನ ಸತ್ಯವನ್ನು ಹೇಳತೊಡಗುತ್ತಾನೆ. ಇವುಗಳ ಹಾಗೆಯೇ ಮನುಷ್ಯನನ್ನು ಆವರಿಸಿರುವ 'ಪ್ರಪಂಚಕ್ಕು' ಒಂದು ಅಸ್ತಿತ್ವವಿದೆ. ಆದರೆ ಅದೇ ಅಂತಿಮವಲ್ಲ, ಇದರಿಂದ ಬಿಡುಗಡೆ ಹೊಂದಲು 'ಭೀಮೇಶ್ವರನೆಂಬ' ಸತ್ಯವನ್ನು ಅರಿಯಬೇಕು. ನಮ್ಮನ್ನಾವರಿಸಿರುವ 'ಪ್ರಪಂಚು' ನಿವಾರಣೆ ಯಾಗಬೇಕಾದರೆ 'ಭೀಮೇಶ್ವರನೆಂಬ ಸದ್ಗುರು ಕಾರುಣ್ಯ'ವಿರಬೇಕು ಎನ್ನುತ್ತಾನೆ.

ಉಪಮೆ, ರೂಪಕ, ವಿಶೇಷ ಮಾತುಗಾರಿಕೆ, ನುಡಿಗಟ್ಟು - ಇತ್ಯಾದಿಗಳನ್ನು ಒಳಗೊಂಡ ಸಾಹಿತ್ಯಕಾಂಶವಿರುವ ವಚನಗಳೇ ಹೆಚ್ಚು. ಸದ್ಗುರುವಿನ ಇರವನ್ನು ಸಾರುವ ವಚನವೊಂದರಲ್ಲಿ ಹೆಚ್ಚು ಸಾದೃಶ್ಯಗಳಿವೆ. ಗುರುವಿನ ಸ್ಥಿತಿ ಕರ್ಪೂರ ತುಂಬಿದ ಭರಣಿ ಹೇಗೆ ಕರ್ಪೂರದ ವಾಸನೆಯಿಂದ ಕೂಡಿರುತ್ತದೋ ಹಾಗಿರಬೇಕು. ಕನ್ನಡಿಯೊಳಗಿನ ಪ್ರತಿಬಿಂಬದಂತೆ, ಕಮಲಪತ್ರೆ (ತಾವರೆ ಎಲೆ) ನೀರಿನಲ್ಲಿದ್ದು ಅಂಟಿಯೂ ಅಂಟದಂತಿರುವಂತೆ ಧೂಳು ಗಾಳಿಯೊಂದಿಗೆ ಸೇರಿದರೂ ಸೇರದಂತಿರುವಂತೆ, ಕುಡಿವೆಳಗಿನ ಬುಡದ ಬೆಳಗಿನಂತೆ ಗುರುವಿನ ಸ್ಥಿತಿ ಇರಬೇಕೆಂದು ಹೇಳುವಾಗ ಕೋಲಶಾಂತಯ್ಯ ನೀಡುವ ಹೋಲಿಕೆಗಳು ಸಾಮಾನ್ಯವಾಗಿ ಪರಿಚಿತವಾಗಿರುವಂಥವೇ ಆಗಿವೆ.

ಸದ್ಗುರು ಮೂರ್ತಿಯ ಇರವು ಕರ್ಪುರವ ತಾಳಿರ್ದಕರಡದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು
ಕಮಲಪತ್ರದ ಬೆಂಬಳಿಯ ಅಂಟುವಿನಂತಿರಬೇಕು
ಪುಡಿ ಸಂಗದ ಸಂಚಾರದ ಸಂಗದಂತಿರಬೇಕು
ಕುಡಿವೆಳಗಿನ ಬುಡದ ಬೆಳಗಿನಂತಿರಬೇಕು

ಸದ್ಗುರುಮೂರ್ತಿ ಪ್ರಪಂಚದಲ್ಲಿ ಇದ್ದೂ ಇಲ್ಲದಂತಿರಬೇಕು ಎಂಬುದನ್ನು ಕರ್ಪೂರ



ತಾಳಿರ್ದ ಕರಡ, ದರ್ಪಣದೊಳಗಿನ ಪ್ರತಿಬಿಂಬ, ಕಮಲದೆಲೆಯ ಮೇಲಿನ ನೀರು - ಈ ಹೋಲಿಕೆಗಳ ಮೂಲಕ ವ್ಯಕ್ತಗೊಳಿಸಿರುವುದು ಆತನ ಪ್ರತಿಭೆಗೆ ಸಾಕ್ಷಿಯಾಗಿದೆ.

ಸದ್ಗತಿಯನ್ನು ತೋರಿಸುವವನಿಗೆ ರಾಜಸ ತಾಮಸ ಗುಣಗಳಿರಬಾರದು. ಕೆಡದ ದೀಪಕ್ಕೆ ಅಳತೆಮಾಡಿ ಎಣ್ಣೆ ಹಾಕುವ ಅವಶ್ಯಕತೆಯಿರುವುದಿಲ್ಲ. ಅದು ಬಿಚ್ಚಿದ ಮುಡಿಯಿದ್ದಂತೆ. ಅದನ್ನು ಗಂಟುಹಾಕಿ ಇಡಬಾರದು. ತಿಳುವಳಿಕೆ ಪಡೆದಂತೆಲ್ಲ ಬೆಳವಣಿಗೆ ಹೆಚ್ಚುತ್ತಾ ಹೋಗುತ್ತದೆ. ಜ್ಞಾನವೆಂಬುದು ಸದಾ ಬೆಳಗುತ್ತಿರಬೇಕು. ಅದನ್ನು ಬೆಳಗಿಸುವ ಶಕ್ತಿ ಗುರುವಿಗೆ ಮಾತ್ರ ಇರುತ್ತದಂತೆ. ಅವನ ವೇಷಭೂಷಣಗಳು ಹೇಗಾದರೂ ಇರಬಹುದು. ಆತನ ನಡೆನುಡಿ ಸರಿಯಾಗಿರಬೇಕು. ಉತ್ತಮ ಮಾರ್ಗದರ್ಶನ ನೀಡುವ ಗುರುವಿನ ಬಗೆಗೆ ಹೀಗೆ ಹೇಳಿದ್ದಾನೆ:

ಸದ್ಗತಿ ತೋರುವ ಗುರುವಿಂಗೆ ರಾಜಸ ತಾಮಸವುಂಟೆ?
ಕೆಡದ ಜ್ಯೋತಿಗೆ ಪಡಿಕುಡಿಕೆ ಎಣ್ಣೆ ಉಂಟೆ?
ಆ ಬಿಡುಮುಡಿಯ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

'ಜಡೆಮುಡಿ ಬೋಳು ಹೇಗಾದಡಾಗಲಿ ನಡೆನುಡಿ ಸಿದ್ಧಾಂತವಾದಡೆ ಸಾಕು' ಅಂತಹವನು ಮಾತ್ರ 'ಪರಂಜ್ಯೋತಿ ಗುರುವಹನು?' ಎನ್ನುತ್ತಾನೆ. ನಡೆ-ನುಡಿ ಸಿದ್ಧಾಂತ ವಾದವನು ಅಂದರೆ ಒಂದಾದವನು ಪರಂಜ್ಯೋತಿಸ್ವರೂಪನಾದ ಗುರುವೆನಿಸಿ ಕೊಳ್ಳುವನು.

ಕೋಲಶಾಂತಯ್ಯನ ಬಹುಪಾಲು ವಚನಗಳು ಅಷ್ಟಾವರಣಕ್ಕೆ ಸಂಬಂಧಿಸಿದವು. ಅದರಲ್ಲೂ ಗುರು ಲಿಂಗ ಜಂಗಮಕ್ಕೆ ಸಂಬಂಧಿಸಿದವಾಗಿವೆ. ಗುರು ಸರಿಯಾದ ತಿಳುವಳಿಕೆ ಹೊಂದಿರಬೇಕು. ಕ್ರಮವನ್ನರಿಯದ ಗುರು ಶಿಷ್ಯನಿಗೆ ಇಷ್ಟಲಿಂಗವನ್ನು ಕೊಟ್ಟರೆ ಏನಾಗಬಹುದೆಂಬುದನ್ನು ಕೋಲಶಾಂತಯ್ಯ ಹೋಲಿಕೆಗಳ ಮೂಲಕ ವರ್ಣಿಸಿದ್ದಾನೆ:

ಪಥವನರಿಯದೆ ಇಷ್ಟವ ಕಟ್ಟುವ ಗುರು
ಬೆಳಕಿಗೆ ಸಿಕ್ಕಿದ ಪತಂಗನಂತಾದ
ಗುರುವಿನ ಕೈಯಲ್ಲಿ ಕಟ್ಟಿದ ಶಿಷ್ಯ
ಕೀಟಕನ ಕೈಯಲ್ಲಿ ಸಿಕ್ಕಿದ ಮಕ್ಷಿಕನಂತಾದ
ಚೇಟಿದಾಸನ ಕೂಟದಂತಾಯಿತು

ಶಿವಪಥವನರಿಯದ ಗುರು ಇಷ್ಟಲಿಂಗವನ್ನು ಕಟ್ಟಲು ಹೋದರೆ ಬೆಳಕಿಗೆ ಸಿಕ್ಕ ಪತಂಗದಂತಾಗುತ್ತಾನೆ. ಸ್ವತಃ ಶಿವಪಥವನರಿಯದ ಗುರುವಿನ ಕೈಗೆ ಸಿಲುಕಿದ ಶಿಷ್ಯ ಕೀಟಕನ ಕೈಯಲ್ಲಿ ಸಿಕ್ಕಿದ ಮಕ್ಷಿಕ(ನೊಣ)ನಂತಾಗುತ್ತಾನೆ. ಅಂದರೆ ಇಬ್ಬರಿಗೂ ತೊಂದರೆಯೆಂಬುದು ಕಟ್ಟಿಟ್ಟ ಬುತ್ತಿ. ಗುರು ಶಿಷ್ಯರಿಬ್ಬರ ಪರಿಸ್ಥಿತಿ 'ಚೇಟಿ ದಾಸನ

ಕೂಟ'ದಂತಾಗುತ್ತದೆ (ಸೇವಕಿ, ಸೇವಕ). ಇವೆಲ್ಲವೂ ಅರ್ಥವತ್ತಾದ ಹೋಲಿಕೆಗಳು.

ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಅದು ಅರ್ಥವಾದಾಗ ಮಾತ್ರ ಗುರು-ಶಿಷ್ಯ ಸಂಬಂಧವೆಂಬುದು ಅರ್ಥವಾಗುತ್ತದೆ ಎಂದಿದ್ದಾನೆ ಕೋಲಶಾಂತಯ್ಯ. ಆತನ ವಿಡಂಬನೆ ಮಾರ್ಮಿಕವಾಗಿದೆ. ಸತ್ಪಾತ್ರರಿಗೆ ಮಾತ್ರ ಅನುಗ್ರಹ ನೀಡಬೇಕಾಗುತ್ತದೆ. ಇದರಲ್ಲಿ ಗುರುವಿನ ಪಾತ್ರವೂ ಬಹಳ ಮುಖ್ಯ. ಕಂಡಕಂಡವರಿಗೆಲ್ಲ ದೀಕ್ಷೆ ಕೊಡಬಾರದು.

ಕಂಡವರಿಗೆ ದೇವರ ಕಟ್ಟುವ ಭಂಡ ಗುರುವಿನ ಇರವು
ಜಗಭಂಡೆ ಎದೆಯಕೊಟ್ಟು ಕಂಡವರ ಕೈಯಲ್ಲಿ ಎದೆಯ ಹೆಟ್ಟಿಸಿಕೊಂಬಂತೆ
ಅಗಲಿ ಬೀಳುವ ಕಲ್ಲಿಗೆ ಹರಿದು ತಲೆನೊಡ್ಡಿಸುವನಂತೆ
ಆ ಬರಿಕಾಯನಲ್ಲಿ ಕಟ್ಟಿದ ಇಷ್ಟ
ಅದು ಭ್ರಷ್ಟನ ಕೈಯ ಕಟ್ಟುಗೂಳು, ಉತ್ತಮರೊಲ್ಲರು
ಆ ಚಿತ್ತವ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗ ಸಂಗ

ಗುರುವಿನ ಬಗೆಗಿನ ಕಟುವಿಡಂಬನೆ ಇದರ ವಸ್ತುವಾಗಿದೆ. "ವಚನದ ಅಭಿವ್ಯಕ್ತಿಯಲ್ಲಿ ನಾಲ್ಕು ಸಾದೃಶ್ಯಗಳು ಪರಿಣಾಮಕಾರಿಯಾಗಿ ಬಳಕೆಗೊಂಡಿರುವುದು ಗಮನಿಸಬೇಕಾದ ಸಂಗತಿ. ಮೊದಲನೆಯ ಸಾದೃಶ್ಯ ಜಗಭಂಡೆ (ನಾಚಿಕೆಯಿಲ್ಲದ) ಹೆಣ್ಣಿನದು. ಅವಳು ವಿಟರು ಕೊಡುವ ಹಣಕ್ಕಾಗಿ ತನ್ನ ದೇಹವನ್ನು ಒಪ್ಪಿಸಿಕೊಳ್ಳುವಳು. ತನ್ನ ಸ್ಥಾನದ ಹಿರಿಮೆಯನ್ನು ಹಣಕ್ಕಾಗಿ ಮಾರಿಕೊಳ್ಳುವ ಗುರುವು ಕಂಡಕಂಡವರಿಗೆಲ್ಲ ದೀಕ್ಷೆ ಕೊಡುವನು. ಹಣಕ್ಕಾಗಿ ವೇಶ್ಯೆ ತನ್ನ ದೇಹವನ್ನು ಯಾರುಯಾರಿಗೋ ಒಪ್ಪಿಸುವಳು. 'ಜಗಭಂಡೆ ಎದೆಯ ಕೊಟ್ಟು ಕಂಡವರ ಕೈಯಲ್ಲಿ ಹೆಟ್ಟಿಸಿಕೊಂಬಂತೆ' ಎಂಬುದು ಅಶ್ಲೀಲ ಹೋಲಿಕೆ. ಆದರೆ ಅದು ವಚನದ ಮೊದಲನೆ ಸಾಲಿಗೆ, ಪರಿಣಾಮದ ದೃಷ್ಟಿಯಿಂದ ಅನಿವಾರ್ಯ. ಬಸವಣ್ಣನವರು ಲಿಂಗವಂತರಾಗಿ ಅನ್ಯದೇವತೆಗಳನ್ನು ಪೂಜಿಸುವವರನ್ನು ವಿಡಂಬಿಸುವ ಸಂದರ್ಭದಲ್ಲಿ 'ಕಂಡ ಕಂಡವರೆಲ್ಲರ ಗಂಡರೆಂದೆಂಬ ದುಂಡೆಯನವಳ ಸಜ್ಜನೆ ಎಂದೆನ್ನಬಹುದೆ?' ಎಂದು ಗೇಲಿಮಾಡುವರು (ವ. ೬೧೫). ಅದರ ಮುಂದುವರಿಕೆಯಾಗಿ ಇನ್ನೊಂದು ವಚನದಲ್ಲಿ 'ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯಕೊಂಡಡೆ ಕೂಸಿಂಗಲ್ಲ; ಬೊಜಗಂಗಲ್ಲ ! ಕೂಸನೊಮ್ಮೆ ಸಂತೈಸುವಳು; ಬೊಜಗನನೊಮ್ಮೆ ನೆರೆವಳು. ಧನದಾಸೆ ಬಿಡದು ಕೂಡಲ ಸಂಗಮದೇವಾ!' ಎಂದಿರುವರು. ಬಸವಣ್ಣನವರಲ್ಲೂ ವಿಷಯ ಪ್ರತಿಪಾದನೆ ಮಾಡುವ ಸಂದರ್ಭದಲ್ಲಿ ಅಶ್ಲೀಲತೆ ತಲೆಹಾಕುತ್ತದೆ. ಭೋಗಲಾಲಸೆಯುಳ್ಳವನು ಲಿಂಗಸುಖವನ್ನು ಅನುಭವಿಸಲಾರ ಎಂಬುದನ್ನು ಹೇಳಲು 'ಸಂತವಿದ್ದ ಮನೆಗೆ ಕೊಂತವ ತಂದಂತೆ ಇದನೆಂತು ಸಂತೈಸುವೆನು? ಸಂತೆಯ ಗುಡಿಲ ಸೂಳೆಗೆ ಕೊಂತವಳವಡುವುದೆ? ಕೂಡಲಸಂಗಮದೇವರ ಮಹತ್ವ ಆರಿಗೆಯೂ ಅಳವಡದು' ಎಂದು ತೀರಾ ವಾಚ್ಯರೂಪದ ಅಶ್ಲೀಲದ ಹೋಲಿಕೆ ಕೊಡುವರು. ಮಡಿವಂತರಿಗೆ ಅದು ಅಶ್ಲೀಲವೆನ್ನಿಸಬಹುದು. ಆದರೆ ಸಂದರ್ಭಕ್ಕೆ ಪರಿಣಾಮದ ದೃಷ್ಟಿಯಿಂದ ಅದು ಅಶ್ಲೀಲ ಪ್ರಯೋಗವಾಗುವುದಿಲ್ಲ. ಶಿವಶರಣರಿಗೆ ಶೀಲ-ಅಶ್ಲೀಲವೆಂಬುದು ಮಹತ್ವದ್ದಾಗುವುದಿಲ್ಲ. ವೇಶ್ಯೆಯ/ಜಗಭಂಡೆ/ದುಂಡೆ ವರ್ತನೆ ಲೋಕಸತ್ಯ. ಅದನ್ನು ವಿಷಯವೊಂದರ ಪ್ರತಿಪಾದನೆಗೆ ಸಾಂದರ್ಭಿಕವಾಗಿ ಬಳಸಿಕೊಳ್ಳುವುದು ಅಪರಾಧವೇನಲ್ಲ. ಬಸವಣ್ಣ ಹಾಗೂ ಕೋಲಶಾಂತಯ್ಯ ಕೊಡುವ ಹೋಲಿಕೆಗಳು ಸಂದರ್ಭವೊಂದಕ್ಕೆ ಪರಿಣಾಮದ ದೃಷ್ಟಿಯಿಂದ ಅಸಹಜ ಅಶ್ಲೀಲವೆನ್ನಿಸುವುದಿಲ್ಲ, ಗುರುವೂ ಸಹ ಯಾರು ಯಾರಿಗೋ ಲಿಂಗವನ್ನು ವಿಕ್ರಯಿಸುವನು. ಇಬ್ಬರೂ ಹಣಕ್ಕೆ ದಾಸರು; ನೀತಿ ನಿಯಮಗಳನ್ನು ಮೀರಿದವರು".



"ಗುರುವಿನ ಇಂತಹ ವರ್ತನೆ ಎಷ್ಟರಮಟ್ಟಿಗೆ ಅಪಾಯಕಾರಿಯೆಂದರೆ, ತಾನಾಗಿಯೇ ಕಳಚಿಬೀಳುತ್ತಿರುವ ಕಲ್ಲಿಗೆ ಓಡಿಹೋಗಿ ತಲೆಯನ್ನು ಒಡ್ಡುವ ಮೂರ್ಖನ ರೀತಿಯದು. ಮೇಲಿನ ಎರಡು ಹೋಲಿಕೆ ಗುರುವಿಗೆ ಸಂಬಂಧಿಸಿದುದು. ವಚನದ ಉತ್ತರಾರ್ಧ ಭಕ್ತನಿಗೆ ಸಂಬಂಧಿಸಿದುದು. ಗುರು ಕೊಟ್ಟ ಇಷ್ಟಲಿಂಗವನ್ನು ಧರಿಸಿದ ಭಕ್ತನಾದವನ ಶರೀರದ ಮೇಲಿನ ಆ ಇಷ್ಟಲಿಂಗ ಕೇವಲ ಕಲ್ಲು-ಪ್ರಯೋಜನಕ್ಕೆ ಬಾರದ್ದು. ಅಷ್ಟೇ ಅಲ್ಲ ಅದು ನೀರಿನ ತೊಟ್ಟಿಯ ಹುದುರಿನಲ್ಲಿ (ಬಿಲದಲ್ಲಿ) ಕಲ್ಲನ್ನು ಸಿಕ್ಕಿಸಿದಂತೆ, ಅದು ಭ್ರಷ್ಟನ ಕೈಯ ಕಟ್ಟುಗೂಳು (ಕಟ್ಟಿಕೊಟ್ಟ ಅನ್ನ) ಅದನ್ನು ಉತ್ತಮರು ಸ್ವೀಕಾರಕ್ಕೆ ಅರ್ಹವೆಂದು ಭಾವಿಸುವುದಿಲ್ಲ. ವಚನದ ಉತ್ತರಾರ್ಧದ ಎರಡೂ ಹೋಲಿಕೆಗಳು ಆ ಸಂದರ್ಭಕ್ಕೆ ಹೊಂದುವಂಥವು. ವಚನದ ಕೊನೆಯ ಸಾಲು 'ಆ ಚಿತ್ತವ' ಅಂದರೆ ಗುರು-ಶಿಷ್ಯರ ಶುದ್ಧವಿಲ್ಲದ ಮನಸ್ಸನ್ನು ನೀನು ಗ್ರಹಿಸು. ಹಾಗೆಯೇ 'ನಿನ್ನ ನೀನರಿ' ನಿನ್ನೊಳಗಿನ ಅಂತರಾತ್ಮನನ್ನು ತಿಳಿಯಲು ಪ್ರಯತ್ನಿಸು; ನಿನ್ನನ್ನು ನೀನು ತಿಳಿಯಲು ಪ್ರಯತ್ನಿಸು ಎಂದು ಮುಕ್ತಾಯಗೊಳ್ಳುತ್ತದೆ. ಇಲ್ಲಿ ಎರಡು ಅಂಶಗಳು ಕೇಂದ್ರ ನೆಲೆಯಲ್ಲಿವೆ: ೧. ಸಾಮಾಜಿಕ ನೆಲೆಯಲ್ಲಿ ಉತ್ತಮೀಕರಣಗೊಳ್ಳಲು ಭ್ರಷ್ಟ ವ್ಯವಸ್ಥೆಯ ಲಾಭ ಪಡೆದುಕೊಳ್ಳಲು ಹೊರಟ ಗುರು-ಶಿಷ್ಯರ ಪ್ರಯತ್ನ "ನಿನ್ನಲ್ಲಿ ಗುಪ್ತವಾಗಿರುವ ಪರಮಾತ್ಮನನ್ನು ತಿಳಿಯಲು ಪ್ರಯತ್ನಿಸು ಎನ್ನುವ ಆಶಯ" (ಡಾ. ಎಸ್. ವಿದ್ಯಾಶಂಕರ್, ವೀರಶೈವ ಸಾಹಿತ್ಯ ಚರಿತ್ರೆ, ಪು. ೨೪೩-೨೪೪).

ಕೋಲಶಾಂತಯ್ಯ ವೇದ ಪುರಾಣ ಶಾಸ್ತ್ರಗಳನ್ನು ಸಂಪೂರ್ಣವಾಗಿ ಅಲ್ಲಗಳೆಯಲಿಲ್ಲ. ಅದರಲ್ಲಿನ ಉತ್ತಮಾಂಶಗಳನ್ನು ಸ್ವೀಕರಿಸಿದ್ದಾನೆ ಮತ್ತು ಅವಕ್ಕೆ ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಿ ನೀಡಿದ್ದಾನೆ.

ಶಾಸ್ತ್ರವೆ ಅಡ್ಡಣಿಗೆಯಾಗಿ, ಆಗಮವೆ ಹರಿವಾಣವಾಗಿ
ಪುರಾಣವೆ ಓಗರವಾಗಿ, ಉಂಬಾತ ವೇದವಾಗಿ
ಸಕಲ ರುಚಿಯನರಿದು ಭೋಗಿಸುವ ಪ್ರಣವ ತಾನಾಗಿ
ಅದರ ಭೇದ ಏತರಿಂದ ಅಳಿವು ಉಳಿವು? ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಊಟದ ಪರಿಭಾಷೆಯಲ್ಲಿ ಲೌಕಿಕ ಅಲೌಕಿಕದ ಭೇದವನ್ನು ಅಳಿವು ಉಳಿವಿನ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಬಗೆ ಇಲ್ಲಿಯದಾಗಿದೆ. ಶಾಸ್ತ್ರ, ಆಗಮ, ಪುರಾಣ, ವೇದ - ಇವುಗಳನ್ನು ಊಟದ ಕ್ರಿಯೆಗೆ ಹೋಲಿಸಿ ಅಗೋಚರವಾದ ಸತ್ಯವನ್ನು ಕಂಡುಕೊಳ್ಳುವ ಪ್ರಕ್ರಿಯೆ ಇದಾಗಿದೆ. ಶಾಸ್ತ್ರವೆಂಬುದು ಅಡ್ಡಣಿಗೆ (ಮೂರು ಕಾಲಿನ ಮಣೆ), ಆಗಮವೆಂಬುದು ಹರಿವಾಣ (ಅಗಲವಾದ ತಟ್ಟೆ) ಪುರಾಣವೆಂಬುದು ಓಗರ (ಅನ್ನ), ಈ ಓಗರವನ್ನು ಉಣ್ಣುವಾತ ವೇದವಾಗಿ, ಸಕಲ ರುಚಿಗಳನ್ನರಿತು ಅನುಭವಿಸುವವನಾಗಿ ಪ್ರಣವವೇ (ಓಂಕಾರ) ತಾನಾಗುವ ರಹಸ್ಯವನ್ನು ಅರಿಯಬೇಕಾಗುತ್ತದೆ.

ಶರೀರಕ್ಕೆ ಯಾವುದನ್ನು ಸ್ವೀಕರಿಸಿದರೆ ಆರೋಗ್ಯವುಂಟಾಗುತ್ತದೆ, ಯಾವುದನ್ನು ಸ್ವೀಕರಿಸದಿದ್ದರೆ ಒಳ್ಳೆಯದು, ಅಳಿವು ಉಳಿವು ಯಾವುದರಿಂದ ಎಂಬುದರ ತಿಳುವಳಿಕೆ ಅತ್ಯಗತ್ಯ. ಇದನ್ನರಿತರೆ ಭೇದವೇತರಿಂದ ಎಂಬುದು ಮನವರಿಕೆಯಾಗುತ್ತದೆ. ಕೋಲಶಾಂತಯ್ಯ ನಿರೂಪಿಸುವ ಊಟ ಯಾವುದೆಂದರೆ ಅದು ಲೌಕಿಕ ಅಲೌಕಿಕಗಳ ಹಸಿವಿಗೆ ಸಂಬಂಧಿಸಿದ್ದು. ಲೌಕಿಕದ ಬದುಕಿನಲ್ಲಿ ಹಸಿವನ್ನು ಇಂಗಿಸಿಕೊಳ್ಳುವುದೇ ಒಂದು ಹೋರಾಟ. ಅದು ಇಂಗಿದ ಕೂಡಲೆ ಜೀವ ತೃಪ್ತಿಯನ್ನು ಪಡೆಯುತ್ತದೆ. ಆದರೆ ಕಾಣದ ಲೋಕದ ಹಸಿವು ಇದಕ್ಕಿಂತ ಭಿನ್ನರೀತಿಯದು. ಅದಕ್ಕೆ ಮಿತಿ ಎಂಬುದಿಲ್ಲ. ಅಜೀರ್ಣದ ಭಯವೂ ಅದಕ್ಕಿರುವುದಿಲ್ಲ. ಈ ಹಸಿವು ಜಾಸ್ತಿಯಾದಷ್ಟು ಬುದ್ಧಿ, ಜ್ಞಾನ ಬೆಳೆಯುತ್ತಾ ಹೋಗುತ್ತದೆ. ಇದರ ತಿಳುವಳಿಕೆ ಅಗತ್ಯ ಎಂಬುದು ಇಲ್ಲಿಯ ಆಶಯ.

ಭೂಮಿ, ನೀರು, ಗಾಳಿ, ಸೂರ್ಯ, ಚಂದ್ರ ಇವುಗಳಿಂದಲೇ ಪ್ರಪಂಚ ಬದುಕುತ್ತಿರುವುದು. ಇವಿಲ್ಲದೆ ಯಾವುದೇ ಜೀವರಾಶಿಗಳ ಬದುಕು ಸಾಗದು. ದ್ಯುತಿಸಂಶ್ಲೇಷಣೆಗೆ ಸೂರ್ಯ ಕಾರಣನಾದರೆ ರಾತ್ರಿಯ ಆಹ್ಲಾದಕರ ವಾತಾವರಣಕ್ಕೆ ಚಂದ್ರ ಕಾರಣನಾಗುತ್ತಾನೆ. ಉಳಿದವುಗಳೂ ಸಹ ಜೀವನಕ್ಕೆ ಅತ್ಯಗತ್ಯ, ನಿಸರ್ಗದತ್ತವಾದವು. ಜೀವಸಂಕುಲದ ಸೂತ್ರವೇ ಪಂಚಭೂತಗಳ ವಶದಲ್ಲಿರುತ್ತದೆ. ಹಾಗಾಗಿ ಇವುಗಳ ಅರಿವು ಅಗತ್ಯ. ಈ ತಿಳುವಳಿಕೆಯನ್ನು ಯಾರು ಪಡೆಯುತ್ತಾರೋ ಅಂಥವರು ಒಳ್ಳೆಯ ಮಾರ್ಗದಲ್ಲಿ ನಡೆಯುತ್ತಾರೆ. ಅಂಥವರ ಮನಸ್ಸು ಪರಿಶುದ್ಧವಾಗಿದ್ದು ಸಕಲ ಜೀವರಾಶಿಗಳಿಗೂ ಒಳಿತನ್ನೇ ಬಯಸುವವರಾಗಿರುತ್ತಾರೆ; ಸಮಾನತಾಭಾವವನ್ನು ಹೊಂದಿದವರಾಗಿರುತ್ತಾರೆ.



ತನ್ನನ್ನೇ ತಾನು ಅರಿತುಕೊಳ್ಳದಿರುವವರು ಪ್ರೀತಿ, ದಯೆ, ವಿಶ್ವಾಸ ಎಂಬುದನ್ನರಿಯರು. ಹಾಗೆಯೇ ಅವರು ಮಾನಸಿಕವಾಗಿಯೂ ಸಮಾಧಾನಿಯಾಗಿರರು. ಇಂಥ ಅಸ್ವಸ್ಥ ಮನಸ್ಥಿತಿಯವರ ಸಂಖ್ಯೆಯೇ ಹೆಚ್ಚಾಗಿದೆ. ಹಾಗಾಗಿ ಪ್ರೀತಿ, ದಯೆ, ವಿಶ್ವಾಸ ಮುಂತಾದ ಪದಗಳೆಲ್ಲ ಕೇವಲ ಕೃತಕವಾಗಿ ಕೇಳಿಸಬಲ್ಲವು. ಆದ್ದರಿಂದ ಇದನ್ನು ಅರಿಯಬೇಕು ಎಂದು ಹೇಳುವಾಗ ರೂಪಕದ ಪರಿಭಾಷೆಯಲ್ಲಿ ಕೋಲಶಾಂತಯ್ಯ ವಿವರಿಸಿದ್ದಾನೆ:

ಧರೆ ಸಲಿಲ ಅನಲ ರವಿ ಶಶಿ ಜಗಸೂತ್ರವೆಲ್ಲಕ್ಕೂ ಸರಿ
ಅರಿದವನ ಚಿತ್ತದ ದಯ ಸರ್ವ ಪ್ರಾಣಿಗಳಿಗೂ ಸರಿ
ದಯ ವಿಶ್ರಾಂತಿ ಇದು ಮಿಥ್ಯವಲ್ಲದೆ ತಥ್ಯವಲ್ಲದ
ದಂತಶೂಕ ಶಿಲೆಯಲ್ಲಿ ನಿಂದಂತಾಗಬೇಡ, ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

'ದಂತಶೂಕ ಶಿಲೆಯಲ್ಲಿ ನಿಂದಂತಾಗಬೇಡ' ಎಂದಿದ್ದಾನೆ. ಹಾವಿನ ಚಿತ್ರ ಬಿಡಿಸಿರುವ ಶಿಲೆಯ ಮೇಲೆ ಕಾಲಿಟ್ಟರೆ ಯಾವುದೇ ಅಪಾಯವಿಲ್ಲ. ಆದರೆ ನಿಜವಾದ ಹಾವಿನ ಮೇಲೆ ಕಾಲಿಟ್ಟರೆ ಅಪಾಯ ಖಂಡಿತ. ಈ ವಾಸ್ತವ ಸ್ಥಿತಿಯನ್ನು ತಿಳಿದುಕೊಳ್ಳಬೇಕು ಎಂಬುದು ಆತನ ಇಂಗಿತ. ಇಚ್ಛೆ, ಕ್ರಿಯಾ, ಜ್ಞಾನ ಈ ಮೂರು ಶಕ್ತಿಗಳು ಸರಿಯಾಗಿ ವರ್ತಿಸದಿದ್ದಾಗ ಆಗಬಹುದಾದ ಅನಾಹುತದ ತಿಳುವಳಿಕೆ ಈ ವಚನಕಾರನಿಗಿದೆ.

ಇಚ್ಛಾಶಕ್ತಿ ಹೋತಿಂಗೆ ಸತಿಯಾಹಲ್ಲಿ
ಕ್ರಿಯಾಶಕ್ತಿ ಕೋಡಗಕ್ಕೆ ಸತಿಯಾಹಲ್ಲಿ
ಜ್ಞಾನಶಕ್ತಿ ಬಳ್ಳುವಿನ ಬಾಗಿಲು ಕಾವಲ್ಲಿ
ಇವರೆಲ್ಲರ ನೀ ನೋಡುತ್ತಿದ್ದೆ
ನೀ ನೋಡುವ ನೋಟ ತ್ರಿವಿಧ ನಾಶ
ಕೋಲಿನ ಶಾಂತನ ವೇಷ, ನಿನ್ನ ಕಾರುಣ್ಯವಾಸ
ಎನ್ನಯ ಭ್ರಾಂತಿನ ವೇಷ ನಾಶವಾಯಿತ್ತು
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಇದೊಂದು ಒಗಟಿನ ರೂಪದ ವಚನ. ಇಚ್ಛೆಯನ್ನು ಹೋತಿಂಗೆ ಕ್ರಿಯಾಶಕ್ತಿಯನ್ನು ಕೋಡಗಕ್ಕೆ ಮದುವೆ ಮಾಡಿಸಿದ್ದರೆ, ಜ್ಞಾನವನ್ನು ಬಾಗಿಲು ಕಾಯಲು ನಿಯಮಿಸಿದ್ದಾನೆ. ಲಿಂಗಭೇದವಿಲ್ಲದೆ ಎಲ್ಲರಲ್ಲೂ ಇದ್ದಿರಬಹುದಾದಂಥವರು ಈ ಮೂವರು ಅವರವರ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದಿದ್ದಾಗ ಯಾರ ಕೈಹಿಡಿಯಬೇಕಾಗುವ ಸ್ಥಿತಿಯೊದಗುತ್ತದೆಂಬುದನ್ನು (ಹೋತು, ಕೋಡಗ, ಬಾಗಿಲು) ಮಾರ್ಮಿಕವಾಗಿ ಸೂಚಿಸಲಾಗಿದೆ. ಸಾತ್ವಿಕಕ್ಕೆ ಮಾನ್ಯತೆ ನೀಡದಿದ್ದರೆ ಅಪಾಯಗಳು ಬಂದೊದಗುತ್ತವೆ. ಜ್ಞಾನಕ್ಕೆ ಅವಕಾಶ ಬಂದೊದಗುವುದಿಲ್ಲ. ಲಿಂಗಕಾರುಣ್ಯವಾಸದಿಂದ ಮಾತ್ರ ನಿಜವಾದ ಮನುಷ್ಯನಾಗಲು ಸಾಧ್ಯ ಎಂಬುದನ್ನು ಒಗಟಿನ ರೂಪದಲ್ಲಿ ಕೋಲಶಾಂತಯ್ಯ ನುಡಿದಿದ್ದಾನೆ.

ಅಂಧಕನಿಗೆ ಕೋಲು ಅತ್ಯಗತ್ಯ. ಕೋಲು ಇದ್ದಮಾತ್ರಕ್ಕೆ ಆತ ಸುರಕ್ಷಿತನೆಂದು ಭಾವಿಸಬೇಕಾಗಿಲ್ಲ. ಯಾಕೆಂದರೆ ಅವನನ್ನು ಹೊರುವವನು ಹೆಳವ, ಹೊರುವವನಿಗೆ ಕಾಲಿಲ್ಲ, ಮೇಲೆ ಕುಳಿತವಗೆ ಕಣ್ಣಿಲ್ಲ, ಇಬ್ಬರೂ ಅಂಗವಿಕಲರೇ. ಅವರ ಪ್ರಯತ್ನವಂತೂ ಸಾಗುತ್ತಲೇ ಇರುತ್ತದೆ.

ಕೋಲ ಬಳಿಯ ಅಂಧಕನಂತೆ
ವಾಹನದ ಪಂಗುಳನಂತೆ
ಗಹನದಲ್ಲಿ ಸಿಕ್ಕಿದ ಶಿಶುವಿನಂತೆ
ಸ್ಥಾನದಪ್ಪಿ ಹೊಲಬುದಪ್ಪಿದ್ದೇನೆ
ಹೊಲದ ಹೊಲಬ ಹೇಳು
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಕೊಂಡೊಯ್ಯುವ ವಾಹನಕ್ಕೆ ಚಕ್ರ ಎಷ್ಟರಮಟ್ಟಿಗೆ ಅವಶ್ಯಕವೋ ದೇಹಕ್ಕೂ ಕಾಲು ಅಗತ್ಯ. ಆಗ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸಲು ಸಾಧ್ಯ. ತಾನೇ ಇನ್ನೊಬ್ಬರನ್ನು ಅವಲಂಬಿಸಿರುವಾಗ ತಾನು ಇನ್ನೊಬ್ಬರಿಗೆ ಸಹಾಯ ಮಾಡುತ್ತೇನೆ ಎಂಬುದು ಔಪಚಾರಿಕ ಮಾತಾಗುತ್ತದೆ. ಅರಣ್ಯದಲ್ಲಿ ಸಿಲುಕಿಕೊಂಡ ಮಗುವಿನಂತೆ ಸ್ಥಿತಿ ಚಿಂತಾಜನಕ. ಅಂಧಕ, ಹೆಳವ, ಶಿಶು - ಇವೆಲ್ಲ ಅಸಹಾಯಕತೆಯ ಅಸುರಕ್ಷಿತತೆಯ ಸಂಕೇತಗಳು. ಆದರೆ ಅನೇಕರು ಕಣ್ಣು, ಕಾಲು ಇದ್ದೂ ಇಲ್ಲವಾದಂತೆ ಇರುತ್ತಾರೆ. ನಾಡಿನಲ್ಲಿದ್ದೂ ಅನಾಥರಂತಿರುತ್ತಾರೆ. ಅದನ್ನು ಕೋಲಶಾಂತಯ್ಯ 'ಸ್ಥಾನದಪ್ಪಿ ಹೊಲಬುದಪ್ಪಿದ್ದೇನೆ ಹೊಲದ ಹೊಲಬು ಹೇಳು' ಎಂದಿದ್ದಾನೆ. ಅಂದರೆ ತನ್ನನ್ನು ತಾನು ಅರಿಯುವ ರೀತಿಯನ್ನು ತಿಳಿಸು ಎಂದು ಕೋರಿದ್ದಾನೆ.

ಉದಕ ನಾನಾ ವರ್ಣದ ರೂಪಿನಲ್ಲಿ ಬೆರಸಿ
ಅವರ ಛಾಯಕ್ಕೆ ಭಿನ್ನಭಾವವಿಲ್ಲದೆ
ಈ ರೂಪಿಂಗೆ ತಾ ದ್ರವವೊಡಲಾಗಿ ತೋರುವಂತೆ
ಎನ್ನ ಸರ್ವಾಂಗದಲ್ಲಿ ತೋರುವ ಕೋರಿಕೆ ನೀನಾಗಿ
ಮುಕುರವ ನೋಡುವ ನೋಟದಂತೆ ಒಳಗೆ ತೋರುವ ಇರವು
ಹೊರಗಳವನ ಪ್ರತಿರೂಪಿನಂತೆ
ಎಲ್ಲಿಯೂ ನೀನಾಗಿ ನಾನರಿದು ಮರೆವುದಕ್ಕೆ ತೆರಪಿಲ್ಲ
ಹಾಗೆಂದಲ್ಲಿಯ ನಿನ್ನ ಉಳುಮೆ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಸಹಜವಾಗಿ ನೀರಿಗೆ ಬಣ್ಣವಿಲ್ಲ. ಅದಕ್ಕೆ ಯಾವ ಬಣ್ಣ ಬೆರೆಸುತ್ತೇವೆಯೋ ಆ ಬಣ್ಣದ ನೀರಾಗಿ ಕಾಣಿಸುತ್ತದೆ. ಬಣ್ಣ ಒಂದು ರೂಪವಾಗಿದ್ದರೆ ನೀರು ಅದರ ಒಡಲಾಗಿರುತ್ತದೆ. ಹಾಗೆಯೇ ಆತ್ಮಕ್ಕೆ ಆಕಾರವಿಲ್ಲದಿದ್ದರೂ ಅದು ಸಕಲ ಜೀವರಾಶಿಗಳಲ್ಲಿದೆ. ಹಾಗಾಗಿ ಜೀವಸಂಕುಲಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಅದು 'ಮುಕುರವ



ನೋಡುವ ನೋಟದಂತೆ' ಎಲ್ಲೆಲ್ಲಿಯೂ ನೀನಿರುವುದರಿಂದ ಮರೆಯುವುದಕ್ಕೆ ಸಾಧ್ಯವಿಲ್ಲ. ಇಂಥ ಚಿಂತನೆಯಲ್ಲಿಯೇ 'ನಿನ್ನ ಉಳುಮೆ' ಇದೆ ಎಂಬುದು ಇಲ್ಲಿಯ ಭಾವ.

**ಸಾಮಾಜಿಕ ನೆಲೆ**

ಕಾಲದಿಂದ ಕಾಲಕ್ಕೆ ಸಮಾಜದಲ್ಲಿ ಬದಲಾವಣೆಗಳಾಗುತ್ತಿರುತ್ತವೆ. ಸಾಮಾಜಿಕ ಬದುಕನ್ನು ಅಲ್ಲಿಯ ಧರ್ಮ ಮತ್ತು ರಾಜಕೀಯ ನಿಯಂತ್ರಿಸುತ್ತಲೇ ಇರುತ್ತದೆ. ಮಧ್ಯಕಾಲೀನ ಸಮಾಜವೂ ಇದರಿಂದ ಹೊರತಾಗಿರಲಿಲ್ಲ. ಹಲವಾರು ಕಟ್ಟುಪಾಡುಗಳಿಂದಲೇ ಕೂಡಿತ್ತು. ಪ್ರಭುತ್ವವೂ ಇದಕ್ಕೆ ಬೆಂಬಲವಾಗಿತ್ತು. ಇದನ್ನು ಕಂಡ ಶರಣರು ಈ ವ್ಯವಸ್ಥೆಯನ್ನು ಟೀಕಿಸಿದರು; ಅರ್ಥ ಕಳೆದುಕೊಂಡ ಮೌಲ್ಯಗಳಿಂದ ಆಗುತ್ತಿದ್ದ ತೊಂದರೆಗಳನ್ನು ಗುರುತಿಸಿದರು. ಸಮಾಜದಲ್ಲಿನ ತಾರತಮ್ಯಗಳನ್ನು, ಎಲ್ಲಾ ರೀತಿಯ ಶೋಷಣೆಗಳನ್ನು, ಅವಮಾನಕ್ಕೆ ಕಾರಣವಾಗುವ ಸಂಗತಿಗಳನ್ನು ಶೋಧಿಸಿದರು. ಇವುಗಳನ್ನು ನಿವಾರಿಸಲು, ಬೇರುಸಹಿತ ಕಿತ್ತೊಗೆಯಲು ವೈಚಾರಿಕ ಸಂಘರ್ಷಕ್ಕೆ ತೊಡಗಿದರು. ಏಕದೇವೋಪಾಸನೆಯ ಮೂಲಕ, ಸರಳ ಭಕ್ತಿಯ ಮೂಲಕ ಪ್ರಗತಿಯ ಹೆಜ್ಜೆ ಹಾಕಿದರು. ಹೋರಾಟದ ಹಾದಿ ಹಿಡಿದರು. ಆ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದರು. ಹೊಸ ರೀತಿಯ ಚಿಂತನ ಮಂಥನಗಳಿಗೂ ಕಾರಣರಾದರು. ಇಂಥ ಕೆಲವು ಸಂಗತಿಗಳು ಕೋಲಶಾಂತಯ್ಯನ ವಚನಗಳಲ್ಲೂ ಅಭಿವ್ಯಕ್ತಗೊಂಡಿರುವುದನ್ನು ಗುರುತಿಸಬಹುದು.

ಮಾತನ್ನು ಸುಮ್ಮನೆ ಆಡುವುದರಿಂದ ಯಾವುದೇ ಪ್ರಯೋಜನವಿರುವುದಿಲ್ಲ. ಹಾಗಾಗಿ ಸರ್ವ ಜೀವನದ ನೀತಿಯನರಿದು ಮಾತನಾಡಬೇಕು. ಹೀಗೆ ಮಾತನಾಡಬೇಕಾದರೆ ನಡೆ ನುಡಿ ಒಂದಾಗಿದ್ದಾಗ ಮಾತ್ರ ಸಾಧ್ಯವಾಗುತ್ತದೆ. ಸಮಾಜವನ್ನು ಸರಿಪಡಿಸಬಹುದು. ಹಾಗೆಯೇ ಯಾವುದಾದರೂ ತಿಳಿಯಬೇಕಾದ ವಿಷಯವನ್ನು, ಜ್ಞಾನವನ್ನು ತಿಳಿದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸುವವನು ಮೊದಲು ಆ ವಿಷಯದ ಹಿಂದಿನ ವಿಷಯದ ಒಳಿತನ್ನು ತಿಳಿದುಕೊಂಡಾಗ ಮಾತ್ರ ಹೊಸ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅಂದರೆ ಯಾವುದೇ ವಿಷಯದ ಮಹತ್ವ ಅದರ ಇತಿಹಾಸದಿಂದ ತಿಳಿಯುತ್ತದೆ ಎಂಬುದನ್ನು ಈ ವಚನ ತಿಳಿಸುತ್ತದೆ. ನಂತರ ಉತ್ತಮವಾದ ಜ್ಞಾನ ಪಡೆಯಬೇಕಾದರೆ ಹುಟ್ಟು ಬಂಧಗಳ ಗೋಡೆಯನರಿಯಬೇಕು. ಇವುಗಳನ್ನು ತಿಳಿಯುವ ಮೂಲಕ ತನ್ನನ್ನು ತಾನು ಅರಿತುಕೊಳ್ಳಬೇಕು.

ಮಾತು ಬಲ್ಲವನಾದಡೆ ಸರ್ವಜೀವದ ನೀತಿಯನರಿಯಬೇಕು
ಜ್ಞಾತೃ ಜ್ಞಾನ ಜ್ಞೇಯ ಭಾವನೆ ಬಲ್ಲಡೆ
ಇದಿರ ಭೂತಹಿತವ ಬಲ್ಲವನಾಗಿ ಇರಬೇಕು

ಸಜ್ಞಾನವರಿತಡೆ ಭವಪಾಶ ಪಾಕುಳರನರಿಯಬೇಕು
ಇದೆಲ್ಲವನರಿತು ತನ್ನನರಿಯಬೇಕು
ಆ ಅನ್ಯ ಭಿನ್ನವ ತಿಳಿ ನಿನ್ನ ನೀನೆ

ಅಂದರೆ ಈ ವಚನವು ಪ್ರತಿಯೊಂದು ವಿಷಯದ ಭಿನ್ನವನ್ನು ತಿಳಿಯುವ ಮೂಲಕ ತನ್ನನ್ನು ಪರಿಪೂರ್ಣವಾಗಿ ಅರಿತುಕೊಳ್ಳಬಹುದೆಂದು ಹೇಳುತ್ತದೆ. 'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' 'ಮಾತು ಬಲ್ಲವ ಮಾಣಿಕ್ಯ ತಂದ ಮಾತರಿಯದವ ಜಗಳ ತಂದ' ಎಂಬಂತಹ ಗಾದೆ ಮಾತುಗಳಿವೆ.

ದೇಹ ಕೊಳೆಯಾದರೆ ನೀರಿನಿಂದ ಶುಚಿಗೊಳಿಸುವುದುಂಟು. ಅದು 'ಜಲದೊಲುಮೆ'. ಮನಸ್ಸೇ ಕೊಳಕಾಗಿಬಿಟ್ಟರೆ ಅದನ್ನು ಶುಚಿಗೊಳಿಸುವುದು ಕಷ್ಟ. ಮನಸ್ಸು ಹರಿಯುವ ನೀರಿದ್ದಂತೆ. ಹೊರಗಿನ ಕೊಳಕನ್ನು ತೊಳೆಯಲು ನೀರನ್ನು ಬಳಸುತ್ತೇವೆ ನಿಜ. ಮನಸ್ಸಿನ ಕೊಳಕನ್ನು ತೆಗೆಯಬೇಕಾದರೆ 'ಜಲದೊಲುಮೆ'ಯಂತೆ 'ಅರಿವಿನೊಲುಮೆ' ಬೇಕು, 'ಒಳ ಮತ್ತು ಹೊರಗು ನಿರ್ಮಲವಾಗದಿದ್ದಾಗ ಮನಸ್ಸಿಗೆ ಮರವೆ ಆವರಿಸಿದಾಗ, ಅದನ್ನು ಹೋಗಲಾಡಿಸಲು 'ಮಹಾಶರಣರ ಸಂಗದೊಲುಮೆ' ಬೇಕಾಗುತ್ತದೆ.

ಅಂಗ ಮಾಸಿದಲ್ಲಿ ಜಲದೊಲುಮೆ
ಮನ ಮರೆದಲ್ಲಿ ಅರಿವಿನೊಲುಮೆ
ಈ ಉಭಯವು ಮರೆದಲ್ಲಿ ಮಹಾಶರಣರ ಸಂಗದೊಲುಮೆ
ಒಲುಮೆಯ ಒಲವರವ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಈ 'ಒಲುಮೆಯ ಒಲವರವು' ಅನ್ಯರಿಂದ ಪ್ರಜ್ಞಾಪೂರ್ವಕವಾಗಿ ಕೇಳಿ ಕಲಿಯುವಂಥದ್ದಲ್ಲ. ಆಂತರಂಗಿಕ ಜಾಗೃತಿಯಿಂದ ತಿಳಿಯುವಂಥದ್ದು.

ತಡಿಮಡುವಾದಡೆ ಮೊಗೆವ ಠಾವೆಲ್ಲಿಯದು?
ಜಗದೆಲ್ಲವನರಿದ ಮತ್ತೆ ಬಲ್ಲವನಿನ್ನಾರು?
ಸ್ವಪ್ನದ ತೆರದಂತೆ ಎತ್ತಾನಕ್ಕೆ ಇಪ್ಪವನೊಬ್ಬ
ಆತನ ಚಿತ್ತವನರಿ ನಿನ್ನ ನೀನೆ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ತಡಿ(ದಡ)ಯೇ ಆಳವಾದ ನೀರಿರುವ ಪ್ರದೇಶ. ಅಲ್ಲಿಯೇ ಸಾಕಷ್ಟು ನೀರಿದೆ. 'ಮೊಗೆವ ಠಾವೆಲ್ಲಿಯದು' ಆ ನೀರನ್ನು ಎತ್ತಿ ಚೆಲ್ಲುವುದಾದರೂ ಎಲ್ಲಿಗೆ? ಹಾಗೆಯೇ ಜಗದೆಲ್ಲವನ್ನರಿತವ ನನ್ನ ಅರಿತುಕೊಳ್ಳುವರಾರು? ಸ್ವಪ್ನದ ರೀತಿಯಂತೆ ಕಂಡು ಮಾಯವಾಗುವಂತೆ ಶಕ್ತಿ ಆಂತರ್ಯದಲ್ಲಿಯೇ ಸುಪ್ತವಾಗಿರುತ್ತದೆ. ಅದನ್ನು ತಿಳಿಯುವ ಬೌದ್ಧಿಕತೆ ಬೇಕು. ಅಂಥ ಚಿಂತನ ಶಕ್ತಿಯಿಂದಲೇ ಅವನ ಉದ್ಧಾರ, ಮೇಲಕ್ಕೆತ್ತುವ ಕ್ರಿಯೆ ಸಾಧ್ಯವಾಗುತ್ತದೆ. ಶರಣರ ಸಹವಾಸದಿಂದಾಗುವ ಲಾಭವನ್ನು ಲೌಕಿಕ ದೃಷ್ಟಾಂತಗಳ ಮೂಲಕ ನಿರೂಪಿಸಿದ್ದಾನೆ.



ವೇಸಿಯ ಸಂಗ ದ್ರವ್ಯದ ಕೇಡು
ದಾಸಿಯ ಸಂಗ ಮಾನಹಾನಿಗೆ ಮೊದಲು
ನಿಮ್ಮ ಶರಣರ ಸಂಗ ಕರಣಂಗಳ ಕೇಡು
ಇಂತೀ ಆಗುಚೇಗೆಯನರಿ ನಿನ್ನ ನೀ

ಈ ವಚನವು ಎಂತಹ ವ್ಯಕ್ತಿಗಳ ಸಂಗವನ್ನು ಬಯಸಬೇಕು ಎಂಬ ವಿಷಯದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಉತ್ತಮರ ಸಂಗವನ್ನು ಬಯಸಿದಾಗ ಜ್ಞಾನಿಗಳಾಗುತ್ತೇವೆ. ಹಾಗೆಯೇ ಕೆಟ್ಟವರ ಸಂಗವನ್ನು ಬಯಸಿದಾಗ ಸಂಪೂರ್ಣವಾಗಿ ನಾಶವಾಗುವುದಲ್ಲದೆ ನಮ್ಮಲ್ಲಿರುವ ಸಂಪತ್ತು ಹಾಗೂ ಗೌರವವನ್ನು ಸಹ ಕಳೆದುಕೊಳ್ಳುತ್ತೇವೆ ಎಂಬುದನ್ನು ತಿಳಿಸುತ್ತದೆ. ಅಂತಹ ಸಂಗದ ಸಂಕೇತವಾಗಿ ಈ ವಚನದಲ್ಲಿ ವೇಸಿಯ ಸಂಗ ಮತ್ತು ದಾಸಿಯ ಸಂಗವನ್ನು ಕಾಣಬಹುದು. ವೇಸಿಯ ಸಂಗದಿಂದ ನಮ್ಮಲ್ಲಿರುವ ಸಂಪತ್ತು ನಾಶವಾದರೆ, ದಾಸಿಯ ಸಂಗದಿಂದ ನಮ್ಮ ಗೌರವವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅಂತಹವರ ಸಂಗವನ್ನು ಎಂದೆಂದಿಗೂ ಮಾಡಬಾರದು ಎಂದು ಹೇಳುತ್ತಾ ಶರಣರ ಸಂಗವು ಇಂದ್ರಿಯಗಳಿಗೆ ಕೇಡನ್ನುಂಟುಮಾಡುವ ಮೂಲಕ ನಮ್ಮನ್ನು ಒಳ್ಳೆಯ ಹವ್ಯಾಸಗಳ ಕಡೆ ಮನಸ್ಸನ್ನು ತಿರುಗಿಸುವಂತೆ ಮಾಡುತ್ತದೆ. ಆದ್ದರಿಂದ ಯಾವಾಗಲೂ ಸ್ಥಿತಿ, ಲಯ, ಆಗುಹೋಗುಗಳನ್ನು ಅರಿಯುವ ಮೂಲಕ ನಮ್ಮನ್ನು ಅರಿತುಕೊಳ್ಳ ಬೇಕು ಎಂಬುದನ್ನು ತಿಳಿಸುತ್ತದೆ.

ಶರಣರ ಸಹವಾಸ ವಿಶಿಷ್ಟವಾದರೂ ಇಂಥವರ ಸಂಗದಿಂದ ಐಂದ್ರಿಕ ವ್ಯಾಮೋಹಗಳು ನಿಯಂತ್ರಣದಲ್ಲಿರುತ್ತವೆ. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಕೊಂಡವರು ಗೌರವಕ್ಕೆ ಪಾತ್ರರಾಗುತ್ತಾರೆ. ಕೆಟ್ಟವರಿಂದಾಗುವ ಕೇಡನ್ನು ಒಳ್ಳೆಯವರ ಸಹವಾಸದಿಂದಾಗುವ ಒಳಿತನ್ನು ಅರ್ಥಮಾಡಿಕೊಳ್ಳಬೇಕು.

ಸುಖ ದುಃಖ ಸತಿ ಪುರುಷರಿಗೂ ಸರಿ
ಗತಿ ಭೇದ ಕರ್ತೃ ಭೃತ್ಯರಿಗೂ ಸರಿ
ನೀರು ನೆಲದಂತೆ, ಸೀರ ಸುಧೆಯಂತೆ ಭಕ್ತಜಂಗಮದ ಇರವು
ಕರ್ಪೂರ ಉರಿಯಂತೆ ಇದು ನಿಶ್ಚಯ

ಈ ವಚನವು ಸುಖ ದುಃಖಗಳು ಪ್ರತಿಯೊಬ್ಬರಲ್ಲಿಯೂ ಇರುತ್ತವೆ. ಇವುಗಳನ್ನು ಮುಕ್ತದಿಂದ ಸ್ವಾಗತಿಸಬೇಕು. ಹಾಗೆಯೇ ಕೇವಲ ಸುಖವನ್ನು ಬಯಸಿ ದುಃಖಕ್ಕೆ ಆಹ್ವಾನಿಸದೆ ಇದ್ದರೆ ಅದು ಪರಿಪೂರ್ಣವಾದ ಜೀವನವಲ್ಲ. ಆದ್ದರಿಂದ ಸುಖ ದುಃಖ ಗಳನ್ನು ಸಮನಾಗಿ ನೋಡುವ ಮುಕ್ತಜೀವಿಗಳು ನಾವಾಗಬೇಕು ಎಂಬುದನ್ನು ತಿಳಿಸುತ್ತದೆ. ಹಾಗಾಗಿ ಸುಖ ದುಃಖಗಳು ಹೆಂಗಸು ಗಂಡಸು ಇವರಿಬ್ಬರಲ್ಲಿಯೂ ಸಮಪ್ರಮಾಣದಲ್ಲಿ ಇರುತ್ತವೆ. ಹಾಗೆಯೇ ನಡಗೆಯಲ್ಲಿನ ವ್ಯತ್ಯಾಸವನ್ನು ಕರ್ತೃ ಮತ್ತು ಸೇವಕರಲ್ಲಿಯೂ ಸರಿಯಾಗಿ ಗುರ್ತಿಸಬಹುದು. ನೀರು ನೆಲದ ಆಳದಲ್ಲಿ ಸಿಗುವ ಹಾಗೆ, ನೇಗಿಲ ಕೃಷಿ

ಮೂಲಕ ಅಮೃತ ಸವಿಯುವ ಹಾಗೆ ಪರಸ್ಪರ ಭಕ್ತ ಜಂಗಮದ ಇರುವು ಇರುತ್ತದೆ. ಹೇಗೆ ಕರ್ಪೂರದಲ್ಲಿನ ಉರಿಯು ಶಾಶ್ವತವೊ ಹಾಗೆ ಭಕ್ತ ಜಂಗಮದ ಇರುವು ಶಾಶ್ವತ ವೆಂಬುದನ್ನು ಈ ವಚನ ನಿಶ್ಚಯಿಸುತ್ತದೆ. ಹೀಗೆ ಪರಸ್ಪರ ಹೋಲಿಕೆಯನ್ನು ನೀಡುವ ಮೂಲಕ ಭಕ್ತ ಜಂಗಮನ ಸಂಬಂಧ ಎಂತಹ ಮಹತ್ವದ್ದು ಎಂಬುದನ್ನು ತಿಳಿಸುತ್ತದೆ. ನೀರು ನೆಲದಂತೆ, ಸಾರಸುಧೆಯಂತೆ, ಕರ್ಪೂರ ಉರಿಯಂತೆ ಭಕ್ತಜಂಗಮದ ಇರುವು ಇರುತ್ತದೆ. ಈ ಉಪಮೆಗಳು ಹಾಗೂ ಅವುಗಳ ಸಂಬಂಧವೇ ತುಂಬಾ ವಿಶಿಷ್ಟವಾದುದು. ಯೋಚಿಸಿದಷ್ಟು ಒಳಹುಗಳು ಮೂಡುತ್ತವೆ. ಕರ್ಪೂರ ಉರಿಯಂತೆ ಇದು ನಿಶ್ಚಯ. ಅವಿನಾಭಾವ ಸಂಬಂಧ ಸೂಚಿಸುವ ಇದರಲ್ಲಿ ತನ್ನತಾನರಿಯಬೇಕೆಂಬುದೇ ಪ್ರಮುಖ ಅರ್ಥವಾಗಿದೆ.

ಹಸು ಮೊದಲಾದ ನಾಲ್ಕು ಕಾಲಿನ ಜೀವರಾಶಿಗಳು ವಾಸನಾಬಲದಿಂದ ಮತ್ತೆ ತಮ್ಮ ಬೀಡಿಗೆ ಹೋಗುತ್ತವೆ. ಆದರೆ ಪಶುವಿನ ಮತಿಗೆ ಇರುವ ಗತಿ ಮನುಷ್ಯನಿಗೆ ಇಲ್ಲ. ಹೀಗೆ ತನ್ನ ಹುಟ್ಟನ್ನು, ತನ್ನ ನೆಲೆಯನ್ನು ಮರೆತು ಈ ಬದುಕಿನ ಬಂಧದಲ್ಲಿ ನೆಲೆಗೊಂಡಿರುವ ಮನುಷ್ಯನ ಜೀವದ, ಕಾಯದ ಸಂದನ್ನು ಬಿಡಿಸಬೇಕೆಂಬ ಮೊರೆ ಇಲ್ಲಿ ಪ್ರಕಟಗೊಂಡಿದೆ.

ಗೋವು ಮೊದಲು ಚತುಃಪಾದಿ ಜೀವಂಗಳು
ತಾವು ಬಂದ ಹಾದಿಯ ಮೂಸಿ ನೋಡಿ ತಮ್ಮಯ
ಬೀಡಿಂಗೆ ಹೋಹಂತೆ
ಆ ಪರಿ ನಿನಗಿಲ್ಲ, ಪಶುವಿನ ಮತಿಯಷ್ಟು ಗತಿಯಿಲ್ಲ
ಬಂದುದ ಮರೆದ ಬಂಧ ಜೀವಿಗ ನಾನಾಗಿ
ಜೀವಕಾಯದ ಸಂದ ಬಿಡಿಸು
ಬಿಂದು ನಿಲುವ ಅಂದವ ಹೇಳು
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಪ್ರಾಣಿ ಮತ್ತು ಮನುಷ್ಯನ ನೆಲೆಗಳಲ್ಲಿನ ಬಂಧ ಮತ್ತು ಮುಕ್ತಸ್ಥಿತಿಯ ನಿಲುವುಗಳನ್ನು ಕೋಲಶಾಂತಯ್ಯನ ಈ ವಚನದಲ್ಲಿ ವಿವೇಚನೆಗೆ ಗುರಿಪಡಿಸಲಾಗಿದೆ. ಚತುಷ್ಪಾದಿಗಳು ತಮ್ಮ ನಿವಾಸ ಸ್ಥಾನ ಅರಿಯಬಲ್ಲವು, ಅವಕ್ಕೆ ವಾಸನಾಗ್ರಹಣ ಶಕ್ತಿ ಜಾಸ್ತಿ ಇರುತ್ತದೆ. ಮನುಷ್ಯನು ತಿಳುವಳಿಕಸ್ಥನಾಗಿದ್ದರೂ ತಿಳುವಳಿಕೆ ಇಲ್ಲದವನಂತೆ ವರ್ತಿಸುತ್ತಿರುತ್ತಾನೆ. ಚತುಷ್ಪಾದಿಗಳಿಗಿರುವಂತಹ ಮತಿ ಮನುಷ್ಯನಿಗಿಲ್ಲದಿರುವುದು ಸೋಜಿಗದ ಸಂಗತಿ. ಮನುಷ್ಯ ತಾನು ಬಂದ ದಾರಿಯನ್ನೇ ಮರೆಯುತ್ತಾನೆ. ಜೀವಕಾಯದ ಸಂದಬಿಡಿಸುವ ಈ ರಹಸ್ಯವನ್ನು ಭೇದಿಸಲು ಪ್ರಯತ್ನಿಸಬೇಕು.

ಮದ್ದಿಗೆ ರುಜೆಯಡಸಿ, ನೀರಿಗೆ ಬಾಯಾರಿ
ಹಾಲಿಗೆ ಹಲ್ಲಿಲ್ಲದೆ ವಿಷವುಂಟಾಯಿತ್ತು
ಬೇವಿನ ಮರದಲ್ಲಿ ಮಾವಿನ ಹಣ್ಣಾಗಿ ಆ ಮರನ ಏರಿ ಮೆದ್ದವರನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ



ರೋಗ ಆವರಿಸಿದ ಶರೀರಕ್ಕೆ ಔಷಧಿ ಕೊಡುವ ವಿಚಾರ ಸಾಮಾನ್ಯವಾದುದು. ಆದರೆ ರೋಗವನ್ನು ನಿವಾರಿಸುವ ಔಷಧಿಗೇ ರೋಗ ಬಂದರೆ ಮಾಡುವುದಾದರೂ ಏನು? ಅದೇ ರೀತಿ ಬಾಯಾರಿಕೆಯಾದರೆ ನೀರು ಕುಡಿಯಬಹುದು, ಆದರೆ ನೀರಿಗೇ ಬಾಯಾರಿಕೆಯಾದರೆ ನಿವಾರಣೆ ಹೇಗೆ? ಹಾಗೆಯೇ ಹಾವಿಗೆ ವಿಷವಿರುವುದು ಹಲ್ಲಿನಲ್ಲಿ. ಹಲ್ಲನ್ನು ಕಿತ್ತ ಮೇಲೆ ಭಯವಿರುವುದಿಲ್ಲವೆನ್ನುತ್ತಾರೆ. ವಿಚಿತ್ರವೆಂದರೆ ಹಲ್ಲಿಲ್ಲದೆಯೂ ವಿಷವುಂಟಾದರೆ ಮಾಡುವುದೇನು? ಬೇವಿನ ಮರದಲ್ಲಿ ಬೇವಿನ ಹಣ್ಣು ಬಿಡಬೇಕು, ವಿಚಿತ್ರವೆಂದರೆ ಮಾವಿನ ಹಣ್ಣು ಬಿಟ್ಟರೆ ವಿಚಿತ್ರವಲ್ಲವೆ? ಇವೆಲ್ಲ ನಿಸರ್ಗದಲ್ಲಿನ ವಿಚಿತ್ರಗಳು, ಅದ್ಭುತಗಳು. ಇಂಥ ಅಪರೂಪದ ಹಣ್ಣನ್ನು ಸವಿಯಲು, ರುಚಿ ನೋಡಲು ಸೃಷ್ಟಿಯ ರಹಸ್ಯ ತಿಳಿದವರಾಗಿರಬೇಕು. ಆ ಫಲವನ್ನು ಪಡೆಯಲು ಅದು ಇರುವ ಜಾಗವನ್ನು (ಮರ) ತಲುಪುವ ಕಲೆಯನ್ನು ತಿಳಿದಿರಬೇಕು. ಇಂಥ ತಿಳುವಳಿಕೆ ರಣರಿಗೆ ಮಾತ್ರ ಇದೆಯೆಂಬುದು ಕೋಲಶಾಂತಯ್ಯನ ಅಭಿಮತ. ಇದಕ್ಕೆ ಸಿಂಗಳದ ಸಿದ್ಧಬಸವರಾಜ ಹೀಗೆ ವ್ಯಾಖ್ಯಾನ ನೀಡಿದ್ದಾನೆ :

"ದೇಹಸಂಬಂಧಿಯಾದ ಆತ್ಮನಲ್ಲಿರ್ದ ಶಿವಜ್ಞಾನ ಪ್ರಕಾಶವ ಭವರೋಗವಾವರಿಸಿತ್ತು. ಭವರೋಗವೆಡೆಗೊಂಡ ಮನದಲ್ಲಿ ಆಶಾತೃಷ್ಣೆ ಹೆಚ್ಚಿತ್ತು. ಶಂಖಾವಿಷಸಂಬಂಧಿಯಪ್ಪ ಜೀವಂಗೆ ಶಿವಜ್ಞಾನೋದಯವಾದಲ್ಲಿ ಸಕಲಕರಣಂಗಳು ನಾಸ್ತಿಯಾದವು. ಆ ಕರಣಂಗಳು ನಿವೃತ್ತಿಯಾದಲ್ಲಿ ಶಿವಜ್ಞಾನಾಮೃತರಸ ಉಂಟಾಗಿರ್ದಿತ್ತು. ಆ ಜ್ಞಾನಾಮೃತರಸವ ನೊಳಕೊಂಡಿರ್ಪ ಶರಣನ ಶರೀರವೆಂಬ ವೃಕ್ಷದಲ್ಲಿರ್ದ ಮುಕ್ತಿಫಲಸ್ವರೂಪವಾದ ಚಿದ್ಘನಲಿಂಗವು ಗುರು ಕರುಣದಿಂದ ಪ್ರತ್ಯಕ್ಷವಾಯಿತು. ಅಂತಪ್ಪ ಲಿಂಗಸಂಬಂಧವಾದ ಆಚಾರಲಿಂಗವನ್ನು ಶರಣನು ಆಶ್ರಯಿಸಿ ನಿಂದನು. ಅಂತಪ್ಪ ಅಖಂಡ ಚಿದಾಮೃತ ಫಲಸ್ವರೂಪವಾದ ಚಿದ್ಘನಲಿಂಗ ವನು ಸದ್ವಿವೇಕಮುಖದಿಂದರಿಯಬೇಕು" (ಸಿಂಗಳದ ಸಿದ್ಧಬಸವರಾಜದೇವರು ವ್ಯಾಖ್ಯಾನಿಸಿದ ಸಕಲ ಪುರಾತನರ ಬೆಡಗಿನ ವಚನಗಳು, ಸಂ. ಡಾ. ಎಂ.ಎಸ್. ಸುಂಕಾಪುರ, ಪು. ೧೯-೨೦).

ವ್ರತ ನೇಮವ ತೋರಿ
ಗದಕದಲ್ಲಿ ಮಾಡುವ ಭಕ್ತಿ
ಪಶುವ ಕೊಂದು ಹಸಿಯ ಭಕ್ಷಿಸುವವನ ದೆಸೆ ಲೇಸು
ಪಶುಪತಿಯ ಭಕ್ತನಾಗಿದ್ದು ಹುಸಿದು ಸರ್ವರ ವಂಚಿಸಿ
ಪಿಸುಣತನದಿಂದ ಕಾಡಿ ಬೇಡಿ ತಂದವನ ಮನೆಯನ್ನು ಕಿಸುಕುಳಕೆ ಸರಿ
ಅದು ಹುಸಿಯಲ್ಲ, ನಿನ್ನ ನೀ ತಿಳಿದು ನೋಡು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಕಾಪಟ್ಯವುಳ್ಳವನೊಬ್ಬ ವ್ರತಾಚರಣೆಯಲ್ಲಿ ತೊಡಗುವ ಮೂಲಕ ತಾನೊಬ್ಬ ಭಕ್ತನೆಂದು ತೋರಿಸಿಕೊಂಡರೆ ಎಂದಿಗೂ ನಿಜಭಕ್ತನೆನಿಸಲಾರ. ಅವನಿಗಿಂತ ಪಶುವನ್ನು

ಕೊಂದು ಅದರ ಮಾಂಸವನ್ನು ತಿನ್ನುವವನು ಉತ್ತಮ. ಡಂಬಾಚಾರದವನಿಗಿಂತ ಪ್ರಾಮಾಣಿಕವಾಗಿ ತನ್ನ ಕುಲಕಸುಬನ್ನು ನೆರವೇರಿಸಿಕೊಂಡು ಹೋಗುವವನು ಉತ್ತಮವಾಗಿ ಕಾಣಿಸುತ್ತಾನೆ. ಯಾಕೆಂದರೆ ಆತ ತನ್ನ ಕಾಯಕದಲ್ಲಿ ನಿಷ್ಠನಾಗಿರುತ್ತಾನೆ. ಡಂಬಾಚಾರವೆಸಗುವುದಿಲ್ಲ. ತನು ಮನ ಶುದ್ಧಿಯ ಇವನ ಕಾಯಕ ಮೇಲ್ನೋಟದಲ್ಲಿ ಹಿಂಸಾವೃತ್ತಿಯದೆನಿಸಿದರೂ ವ್ಯಕ್ತಿತ್ವ ಮುಕ್ತವಾಗಿದೆ. ಪ್ರಾಮಾಣಿಕನೆಲೆಯದಾಗಿದೆ. ಆದರೆ ಪಶುಪತಿಯ ಭಕ್ತನೆನಿಸಿಕೊಂಡು ಸುಳ್ಳು ಹೇಳುತ್ತ ಸರ್ವರನ್ನು ವಂಚಿಸುವುದು ತಪ್ಪು. 'ಪಿಸುಣತನದಿಂದ ಕಾಡಿ ಬೇಡಿ ತಂದವನ ಮನೆಯನ್ನು ಕಿಸುಕುಳಕೆ ಸರಿ', ಕಾಡಿ ಬೇಡಿ ತಂದದ್ದು ಅನ್ನಾಗದೆ ಹೊಲಸಿಗೆ ಸಮನಾಗಿಬಿಡುತ್ತದೆ. ಆದ್ದರಿಂದ ತನ್ನನ್ನು ತಾನು ಅರಿಯುವ ಪ್ರಯತ್ನ ಮಾಡಬೇಕು. ಇದು ಪೂರ್ಣವಾಗಿ ಅಂತರಂಗ ಬಹಿರಂಗ ಶುದ್ಧಿಯನ್ನು ಕುರಿತದ್ದೇ ಆಗಿದೆ.

ಬಾಹ್ಯದ ನೀತಿ ಅಂತರಂಗದ ಅರಿವು ಸರ್ವರಲ್ಲಿ ಕ್ಷಮೆ
ಒಳ ಹೊರಗಾಗುವ ವರ್ತಕ ತ್ರಿವಿಧ ಶುದ್ಧವಾಗಿಯಿಪ್ಪ
ಭಕ್ತನ ಜಂಗಮದ ಹೃತ್ಕಮಲವೆ ವಿರಕ್ತವಾಸ
ಇಷ್ಟನರಿದು ಮರೆದವಂಗಲ್ಲದೆ ತೆರಪಿಲ್ಲ; ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಹೊರಗಿನ ಕೆಲಸಗಳು ಯಾವಾಗಲೂ ಒಳಗಿನ ಅರಿವಿನಿಂದಲೇ ರೂಪುಗೊಳ್ಳುತ್ತಿರುತ್ತವೆ. ಒಳಹೊರಗಿನ ವ್ಯವಹಾರ ಪರಿಶುದ್ಧವಾಗಿದ್ದರೆ ಅದರಿಂದ ಪ್ರೇರಿತವಾದ ಕ್ರಿಯೆಗೆ ಬೆಲೆ ಬರುತ್ತದೆ. ಆಂತರಂಗಿಕ ಶುದ್ಧಿಯಿಂದ ಮಾತ್ರ ಬಹಿರಂಗದ ಕಾರ್ಯಚಟುವಟಿಕೆಗಳಿಗೆ ಮಾನ್ಯತೆ ದೊರಕುವುದು. ಇದಕ್ಕೆ ತನು ಮನ ಶುದ್ಧವಾಗಿರಬೇಕು. ಹೀಗಿದ್ದಾಗ ಮಾತ್ರ 'ಭಕ್ತನ ಜಂಗಮದ ಹೃತ್ಕಮಲವೆ ವಿರಕ್ತವಾಸ'ವಾಗುತ್ತದೆ. ಇದನ್ನೆಲ್ಲ ಅರಿತವರು ತಪ್ಪು ದಾರಿ ಹಿಡಿಯುವುದಿಲ್ಲ. 'ಇಷ್ಟನರಿದು ಮರೆದವರಿಗಲ್ಲದೆ ತೆರಪಿಲ್ಲ'.

ಮನುಷ್ಯನು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದರೆ ಸಂಸ್ಕಾರಗೊಳ್ಳಬೇಕು. ನಡವಳಿಕೆ ಉತ್ತಮಗೊಳ್ಳಬೇಕು. ಉತ್ತಮ ನಡವಳಿಕೆಯ ವ್ಯಕ್ತಿತ್ವದಿಂದಾಗಿ ತನ್ನ ಸುತ್ತಮುತ್ತಿನ ಸಮಾಜವೂ ಒಳ್ಳೆಯ ಹಾದಿಯನ್ನು ಹಿಡಿಯುತ್ತದೆ. ಸನ್ಮಾರ್ಗದಲ್ಲಿ ನಡೆಯುತ್ತದೆ. ಒಳಗಿನ ಮನಸ್ಸು ಸರಿಹೋಗದಿದ್ದರೆ ಕೊಲೆ, ಹೊಲೆ, ಪಾರದ್ವಾರ, ಪಾತಕ ಮುಂತಾದವುಗಳ ಆಗರವಾಗಿ ದೇಹ ಬೆಳೆಯುತ್ತದೆ. ಇಂಥವುಗಳನ್ನು ಒಳಗಿಟ್ಟುಕೊಂಡು ಹೊರಗೆ ಘನಲಿಂಗದ ಮುದ್ರೆಯನ್ನು ಧರಿಸಿದರೆ ಏನೇನೂ ಪ್ರಯೋಜನವಿಲ್ಲ. ಒಳಗೆ ಬದಲಾಗದ ಹೊರತು ಹೊರಗಿನ ಲಿಂಗಮುದ್ರೆಗೆ ಅರ್ಥ ಬರುವುದಿಲ್ಲ. ವಿನಾಕಾರಣ ಜಗಳಕ್ಕೆ ಬರುವವರಿಗೆ 'ಪ್ರಣವ ಮಂತ್ರ' ಅರ್ಥವಾಗುವುದಿಲ್ಲ; ಅದರ ಮೇಲೆ ಪ್ರೀತಿಯಾಗಲೀ, ಗೌರವವಾಗಲೀ ಹುಟ್ಟುವುದಿಲ್ಲ. ಆದ್ದರಿಂದಲೇ



ಕೋಲಶಾಂತಯ್ಯ 'ಕಲಹಕ್ಕೆ ಇದಿರಹ ಕುಲುಮೆಗಾರರಿಗೇಕೆ ಮೂರಕ್ಷರದ ಒಲರವ?' ಎಂದ. ಆದ್ದರಿಂದ ಇಂಥ ಸ್ವಭಾವವುಳ್ಳವರಿಗೆ 'ಲಿಂಗದರಿವು' ಲಭ್ಯವಾಗುವುದು ಕಷ್ಟವೆಂದ.

ಕೊಲೆ ಹೊಲೆ ಪಾರದ್ವಾರದ ಪಾತಕ ಮಾಡುವರೊಳಗಿಟ್ಟುಕೊಂಡು
ಘನಲಿಂಗದ ಮುದ್ರೆಯನಿಕ್ಕಿ ಹೊಲೆದೊಳೆದೆವೆಂದು
ಕಲಹಕ್ಕೆ ಇದಿರಹ ಕುಲುಮೆಗಾರರಿಗೇಕೆ ಮೂರಕ್ಷರದ ಒಲವರ?
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಇಲ್ಲಿ ಮೇಲಿಂದ ಮೇಲೆ ಜಗಳಕ್ಕೆ ಬರುವವರನ್ನು ಬೆಂಕಿಯುಗುಳುವ ಕುಲುಮೆಗೆ ಹೋಲಿಸಿರುವುದು ಸೊಗಸಾದ ಚಿತ್ರಣ. "ಕೋಲಶಾಂತಯ್ಯನ ಪ್ರಕಾರ ಹಳೆಯ ಸಂಸ್ಕಾರವನ್ನು ಕಳಚಿ 'ಪುನರ್ಜಾತ'ನಾದ ಬಳಿಕ (ಹೊಸ ಹುಟ್ಟು ಪಡೆದ ಬಳಿಕ) ಹೊಟ್ಟೆಪಾಡಿಗಾಗಿ ಬೇರೆ ಬೇರೆ ವೇಷ ಧರಿಸಿ ವಂಚನೆಯ ಬದುಕನ್ನು ನಡೆಸುವವರನ್ನು ("ಜಾತತ್ವಕ್ಕೆ ನಾನಾ ಭೌತಿಕವ ತೊಟ್ಟು ಪಿಷ್ಟದವರ ಅಭೀಷ್ಟನಾಗಿ ಮತ್ತೆ ಪುನರ್ಜಾತನಾದ ಪರಿಯಿನ್ನೆಂತೋ?"), ಟೀಕಿಸುವುದಲ್ಲದೆ ಅವರಿಗೆ ಪುನರ್ಜಾತತ್ವವನ್ನು ಕೊಡುವ ಗುರುವು ಅವರ ತಂದೆ ತಾಯಿಗಳ ಜಾತಿಯನ್ನು ವಿಚಾರಿಸದೆ, ತನ್ನ ಕರ್ತವ್ಯವನ್ನು ತಾವು ಅರಿತು ತನ್ನನ್ನು ಮುಟ್ಟಿದ ಭಕ್ತರಿಗೆ ಅನುಗ್ರಹಿಸಬೇಕೆಂದು ಸೂಚಿಸುತ್ತಾನೆ. ಭಕ್ತನನ್ನು ಮುಟ್ಟದೆ ದೂರದಿಂದಲೇ ಅವನಿಗೆ ಭಸ್ಮ ಲಿಂಗಗಳನ್ನು ಕೊಡುವುದಲ್ಲ ಅವನಿಂದ ಮುಟ್ಟಿಸಿಕೊಳ್ಳಬೇಕು. ಅವನಿಗೆ ಮುಟ್ಟಿ ಲಾಂಛನಗಳನ್ನು ಅನುಗ್ರಹಿಸಬೇಕು" (ಸಕಲ ಪುರಾತನರ ವಚನಗಳು, ಪುಟ ೧೬), ಇಲ್ಲಿ ಕೆಲವಾದರೂ ಗುರುಗಳು ಮಡಿಮೈಲಿಗೆ ಭಾವನೆಗಳನ್ನು ಕೆಳವರ್ಗದ ಅದರಲ್ಲೂ ಅಸ್ಪೃಶ್ಯ ಭಕ್ತರ ಬಗ್ಗೆ ತೋರುತ್ತಿರಬಹುದೆಂಬುದರ ಸೂಚನೆಯಿದೆ". (ಎಂ. ಚಿದಾನಂದಮೂರ್ತಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು. ೮೭)

ಪಂಚವಳಯ ವಿಸ್ತೀರ್ಣದಲ್ಲಿ ಕಟ್ಟಿದವು ಮೂರು ಪಟ್ಟಣ
ಕೆಲದಲ್ಲಿ ಹೊಲಗೇರಿ, ಬಲದಲ್ಲಿ ಮಾದಿಗರ ಮನೆ
ನಡುವೆ ಹೆಬ್ಬಾರುವರ ಮಹಾಜನಂಗಳ ಗುಡಿವಾಡ
ಹೊಲೆಯರ ಗೋವಧೆಯ ಮಾದಿಗರ ಮನೆಯ ನಾತ
ಹಾರುವರೂಟದ ಸುಖ ಲೇಸಾಯ್ತು
ಜಗದ ಕೀಳುಮೇಲಿನ ಕೂಟ
ಅದೇತರಿಂದಾಯಿತ್ತು ಎಂಬುದು ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಹೊಲಗೇರಿ, ಮಾದಿಗರ ಮನೆಗಳು ಎಲ್ಲೆಲ್ಲಿ ಇರುತ್ತಿದ್ದವೆಂಬುದರ ಬಗೆಗೆ ಹಾಗೂ ಜಗದ ಕೀಳು ಮೇಲಿನ ಕೂಟವನ್ನು ಅರಿಯುವುದರ ಬಗೆಗೆ ಸೂಚನೆಗಳಿರುವುದನ್ನು

ಗಮನಿಸಬಹುದು. ವೇಷಧಾರಿ ಜಂಗಮನ ಬಗೆಗೆ ಹಲವಾರು ಟೀಕೆಗಳನ್ನು ಕೋಲಶಾಂತಯ್ಯ ಮಾಡಿದ್ದಾನೆ :

ಕೋಲು ಕಪ್ಪರವ ಹಿಡಿದು
ಭಾಳಾಂಬಕನ ಲೀಲೆಯ ತೊಟ್ಟು
ಅಶನದಾಪ್ಯಾಯನಕ್ಕೆ ತಿರುಗುವ ಬಾಲಲೀಲೆಯಲ್ಲದೆ
ಭಾಳಾಂಬಕನ ನೆಲೆಯಲ್ಲ
ಜಾಳುಮಾತಬಿಟ್ಟು ಮೂರಕ್ಷರದ ನೆಲೆಯನರಿ

ಕೋಲು ಕಪ್ಪರ ಹಿಡಿದು ಶಿವನಲೀಲೆ ಧರಿಸಿ 'ಅಶನದಾಪ್ಯಾಯನಕ್ಕೆ' ತಿರುಗುವುದು ಆತನಿಗೆ ಶಿವಲೀಲೆ ಎನಿಸದೆ ಬಾಲಲೀಲೆಯಾಗಿ ಕಾಣಿಸುತ್ತದೆ. ಬೇಡುವ ಜಂಗಮರನ್ನು 'ಧಾತಮಾಡುವ ತೆರಪನರಿಯದೆ ಕಾಡುವ ಕಮ್ಮಟದೇಹಿಗಳು' ಎಂದು ಕರೆದ. 'ಮರಿಪಕ್ಷಿ ಕುಟುಕಿಂಗೆ ಬಾಯಬಿಡುವಂತೆ ಕೈ ಬಾಯಾನುವ ದರುಶನ ದಾರಿಗಳ್ಳರಿಗೇಕೆ ಮೂರಕ್ಷರ?' ಎಂದು ಪ್ರಶ್ನಿಸುತ್ತಾ ಸುತ್ತಾಡಿ ಬೇಡುವ ಜಂಗಮನನ್ನು ಕುರಿತಂತೆ ವ್ಯಂಗ್ಯವೊಂದು ಹೀಗಿದೆ :

ಜ ಎಂದಲ್ಲಿ ಜನನ ನಾಸ್ತಿಯಾಗಿ
ಗ ಎಂದಲ್ಲಿ ಗಮನ ನಾಸ್ತಿಯಾಗಿ
ಮ ಎಂದಲ್ಲಿ ಮರಣ ನಾಸ್ತಿಯಾಗಿ
ಅರಿತು ತಿರುಗುವುದು ಸ್ವಯ ಚರಪರವಲ್ಲದೆ
ಕೂಟಕ್ಕೆ ನೆರೆದ ಅಗುಳಾಸೆಯ ವಿಹಂಗನಂತಾಗಬೇಡ

"ಜಂಗಮನಾದ ಮೇಲೆ ಜನನ-ಜೀವನ-ಮರಣರಹಿತನಾಗಿ, ಸುಖ ದುಃಖ ದೂರವಾಗಿ ಜಗತ್ತಿನ ಕಲ್ಯಾಣಕ್ಕಾಗಿ ಅರಿತು ಸಂಚರಿಸುತ್ತಿರಬೇಕು. ಜಂಗಮದಲ್ಲಿನ ತ್ರಿವಿಧ ತತ್ತ್ವಗಳಾದ ಸ್ವಯ ಚರ ಪರನಾಗಿರಬೇಕು. ಸ್ವಯವೆಂದರೆ ಅಂತರಂಗ, ಅದು ಇದೆಂದು ಹೊರಗಿನ ತತ್ತ್ವಗಳ ತಿಳಿಯಲು ಮನ ಹರಿದಾಡದೆ ಮೊದಲು ಸ್ವಯ ತತ್ತ್ವ ತಿಳಿದುಕೊಂಡಿರಬೇಕು. ಬಹಿರಂಗದಲ್ಲಿಯೂ ಸಹ ಅತ್ತಿತ್ತ ಸುಳಿಯದಂತೆ ನಿಂತ ನೆಲೆಯಲ್ಲಿರಬೇಕು. ಚರ ಜಂಗಮವೆಂದರೆ ತನ್ನತಾ ಗೆಲಿದು ಜಗದ ಜನರನ್ನು ಭಕ್ತಿಯಿಂದ ಗೆಡಿಸಲು ಸಂಚರಿಸುವಾತನು. ಕೊನೆಯದಾಗಿ ಪರಜಂಗಮನೆಂದರೆ ಇಹದ ಇರುವಿಕೆ ಚರಿಸುವಿಕೆಗಳ ಮೀರಿ ಇದ್ದೂ ಇಲ್ಲದ, ಹೊದ್ದಿಯೂ ಹೊದ್ದದ ಸ್ಥಿತಿಗೆ ಸೇರಿ ಪರದಲ್ಲಿ ಪರಿಣಾಮಿಯಾದಾತನು. ಈ ತ್ರಿವಿಧ ಜಂಗಮ ರಹಸ್ಯವನ್ನರಿದಾತನೆ ನಿಜವಾದ ಜಂಗಮ" (ಉದ್ಧೃತ: ಎಂ. ಶಿವಕುಮಾರಸ್ವಾಮಿ (ಸಂ) ಶರಣ ಜಗತ್ತು, ಪುಟ. ೭೯). ಭಕ್ತಂಗಲ್ಲದೆ ಸೋಂಕು ಬೇರಾರಿಗೂ ಬಾರದು. ಆದ್ದರಿಂದ ಭಕ್ತನಾದವನು 'ಆವ ಸೋಂಕು ಬಂದರೂ ಭಾವ ಶುದ್ಧವಾಗಿರಬೇಕು'. ಆದ್ದರಿಂದ ಮೊದಲು ತನ್ನನ್ನು ತಾನು ಅರಿಯಬೇಕು ಎಂಬುದು ಕೋಲಶಾಂತಯ್ಯನ ನಿಲುವು. □

# ವಿವೇಕಶೂನ್ಯ ಸೃಷ್ಟಿಯ ಸಮಸ್ಯೆಗಳು ಮತ್ತು ಪರಿಹಾರ

**ಡಾ. ರುದ್ರಣ್ಣ ಚಿಲಮಿ**

ವಿವೇಕವೆಂದರೆ ಬುದ್ಧಿಯುಳ್ಳವರು, ವೈಚಾರಿಕತೆ, ಚಿಂತನೆ ಮಾಡುವವರು ಎಂದರ್ಥ. ಸದ್ಗುಣಿಯಾಗಿದ್ದುಕೊಂಡು ಒಳ್ಳೆಯದನ್ನೇ ಬಯಸಿ ಆಲೋಚಿಸುವುದು ಕ್ರಿಯೆಯಲ್ಲಿ ತರುವುದಾಗಿದೆ. ಬಸವಾದಿ ಶಿವಶರಣರು ಹೇಳಿರುವಂತೆ ನಡೆ-ನುಡಿ ಒಂದಾಗಿಸಿಕೊಂಡು ಬದುಕುವುದೇ ಸುಖಿಜೀವನ; ಸಂಸ್ಕಾರದಲ್ಲಿದ್ದುಕೊಂಡು ಸದ್ಗತಿ ಹೊಂದಲು ಸಾಧ್ಯವಿದೆ ಎಂದು ಶರಣರು ಆಚರಿಸಿ ತೋರಿದ ಋಜುಮಾರ್ಗ, ರಾಜಮಾರ್ಗವಾಗಿದೆ. ಆದರೆ ನಾವು ಇಂದು ಸಪ್ತವ್ಯಸನ, ಅರಿಷಡ್ವರ್ಗಗಳನ್ನು ಒಡಲಲ್ಲಿ ತುಂಬಿಕೊಂಡು ಮನ ಬಂದತ್ತ ಸಾಗುತ್ತಲಿದ್ದೇವೆ. ಅದರಲ್ಲೂ ಧನಮದದ ಮತ್ತು ನೆತ್ತಿಗೇರಿದಂತೆ ಬಹುಸಂಖ್ಯಾತರ ವರ್ತನೆಯಾಗಿದೆ. 'ಕಕಾಕಿ' ಈ ಮೂರಕ್ಷರಗಳ ದಾಸರಾಗಿ ಬೆನ್ನುಹತ್ತಿದ್ದೇವೆ 'ಕ' ಅಂದರೆ ಕಾಂಚಾಣ, 'ಕಾ' ಎಂದರೆ ಕಾಮನೆಗಳು, 'ಕಿ' ಎಂದರೆ ಕೀರ್ತಿ. ಈ ಮೂರರ ಬೆನ್ನುಬಿದ್ದವ ಬಿದ್ದೇ ಹೋಗುತ್ತಾನೆ. ಇವುಗಳನ್ನಳಿದವನೇ ಗೆದ್ದು ಬರುತ್ತಾನೆ. ನಮ್ಮ ಈ ಇರವನ್ನು ಕಂಡೇ ಅಲ್ಲಮಪ್ರಭುದೇವರು 'ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ' ಎಂದಿದ್ದಾರೆಂದೆನಿಸುತ್ತದೆ. ಅವರಂತೂ ವೈರಾಗ್ಯಚಕ್ರವರ್ತಿಗಳು. ಅವರಂತಾಗುವುದು ಕರಕಷ್ಟ, ಕಾಣಾ ಶಿವಯೋಗಿ!

ಮಾನವನ ದೇಹವೆಂಬುದು ಮಾಯಾ-ಮೋಹಗಳ ಪಿಂಡವೇ ಆಗಿದೆ. ದೇಹದಲ್ಲಿ ಮನಸ್ಸು; ಆತ್ಮಗಳಿವೆ. ಅದಕ್ಕೆ ಜೀವಾತ್ಮ ಮತ್ತು ಪರಮಾತ್ಮ ಎನ್ನಲಾಗಿದೆ. ಈ ಜೀವಾತ್ಮ-ಪರಮಾತ್ಮ ಒಂದೇ ಎರಡಲ್ಲ (ದ್ವೈತವಲ-ಅದ್ವೈತ). ಜೀವಾತ್ಮನೇ ಪರಮಾತ್ಮನಾಗುವ ಅವಕಾಶವಿದೆ, ಸುಯೋಗವಿದೆ. ಯೋಗಾಯೋಗವೇ ಸುಯೋಗ-ಕೂಡುವುದು, ಒಂದಾಗುವುದೇ ಯೋಗವಾಗಿದೆ. ದೇವರಾಗುವ ಶಕ್ತಿಯೇ ನಮ್ಮಲ್ಲಿರುವಾಗ ಮತ್ತೇಕೆ ಗುಡಿ- ಗುಂಡಾರಗಳಿಗೆ ಸುತ್ತುವುದು? ಶ್ರದ್ಧೆಯಿಂದ ಮಾಡುವ ಸೇವೆ, ಪೂಜೆಯೆಲ್ಲವೂ ಮಹಾದೇವನ ಪೂಜೆಯೇ! ಒಳಗೆ ಸ್ವಚ್ಛವಾದರೆ ಸಾಕು, ಆಗ ಮಾಡುವುದೆಲ್ಲವೂ ಮಹಾದೇವನ ಪೂಜೆಯಾಗುತ್ತದೆ. 'ದೇಹವೇ ದೇವಾಲಯ' ಎಂದಿರುವರು ಬಸವಣ್ಣ! ದೇಹವೇ ದೇಗುಲ- ಮೈಯೇ ಮಸೂಲೆ-

---

ಡಾ. ರುದ್ರಣ್ಣ ಚಿಲಮಿ, ಸಾಹಿತಿಗಳು, ಹೊಂಬೆಳಕು ಮ.ನಂ.3, ಓಂ ಸ್ಕೂಲ್ ಹತ್ತಿರ, ಜಲದರ್ಶಿನಿ ನಗರ, ಧಾರವಾಡ - 580003

ಶರೀರವೇ ಶಿವಾಲಯ, ಅರುಹು ಅನ್ನುವ ಅಲ್ಲಾ ಮೈ ಮಸೂಲೆಯಲ್ಲಿ ಮಲಗಿದ್ದಾನೆ ಎಂದು ಸಂತ ಶಿಶುನಾಳ ಶರೀಫರು ಹೇಳಿರುವುದನ್ನು ನಾವಿಂದು ಅರಿತುಕೊಳ್ಳಬೇಕು.

ಆಧುನಿಕ ವಚನಕಾರ ಮತ್ತು ದೇವನ ಮನೆ ಕವಿಯೆಂದೇ ಖ್ಯಾತಿ ಹೊಂದಿದ ಬ.ಗಿ. ಯಲ್ಲಟ್ಟಿಯವರು ತಮ್ಮದೊಂದು ವಚನದಲ್ಲಿ ಹೀಗೆಂದಿದ್ದಾರೆ:

ನಾವು ದೇವರಾದಲ್ಲದೆ
ದೇವರ ಕಾಣುವ ಬಗೆ ಯಾವುದಯ್ಯಾ!
ಕರಣೇಂದ್ರಿಯ ವಿಕಾರ ದೂರವಾದಲ್ಲದೆ
ಕಾಯವಿದು ನಿರ್ಮಲವಾಗುವ ಬಗೆ ಯಾವುದಯ್ಯಾ!

ಶರಣ ಯಲ್ಲಟ್ಟಿಯವರು ಹೇಳಿರುವಂತೆ ಮಾಯೆ-ಮೋಹ-ಮದ-ಮತ್ಸರ ಈ ಮುಂತಾದ ಕರಣೇಂದ್ರಿಯ ವಿಕಾರಗಳಿಂದ ದೂರವಾದರೆ, ಕಿತ್ತುಹಾಕಿದರೆ ದೇಹವು ನಿರ್ಮಲವಾಗುತ್ತದೆ. ಶುದ್ಧಾತ್ಮಿಯಾಗುವುದೇ ದೇವರ ಸ್ವರೂಪವಿದ್ದಂತೆ. ಆದರೆ ತನುವಿಗೆ ಮಲತ್ರಯಂಗಳು ಅಂಟಿಕೊಂಡಿರುವುದರಿಂದ ನಾನು ಬೇರೆ, ಪರಮಾತ್ಮ ಬೇರೆ ಎಂಬ ಭಾವ ಬಂದಿದೆ. ಇರುವ ದೇವನೊಬ್ಬನೇ ಒಬ್ಬ. ಆದರೆ ನಾಮವು ಹಲವು. ತನುವಿನಲ್ಲಿ ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚ ವಾಯುಗಳು, ಬುದ್ಧಿ-ಮನ-ಕಾಯ ಹೀಗೆ ಹದಿನೇಳು ತತ್ತ್ವಗಳಿಂದ ಕೂಡಿದುದು ಸ್ಥೂಲ ತನು. ಪಂಚಭೂತಮಯವಾಗಿ ನಮಗೆ ಕಾಣುವುದೇ ಅಸ್ತಿ-ಚರ್ಮಗಳ ಹೊದಿಕೆಯಿಂದ ಕೂಡಿದ ದೇಹ! ಆದರೆ ದೇಹವನ್ನು ಧರಿಸಿದ ಮಾನವನಲ್ಲಿ ಸಪ್ತವ್ಯಸನಗಳು, ಷಡೂರ್ಮಿಗಳು, ಅರಿಷಡ್ವರ್ಗಗಳು, ಷಡ್‌ಭ್ರಮೆಗಳು, ಅಷ್ಟಮದ ಮುಂತಾದವು ಯಾವುದೋ ಕಾರಣದಿಂದ, ಅಥವಾ ಸಂಪರ್ಕದಿಂದ ಜೀವಿಯೊಳಗೆ ಸೇರಿಕೊಳ್ಳುವುದರಿಂದ ಆತನ ವರ್ತನೆ ಶರಣರಿಗಿಂತಲೂ, ಸಂತ-ಮಹಂತರಿಗಿಂತಲೂ ಭಿನ್ನನಾಗಿರುತ್ತಾನೆ. ನಾನೇ ಬೇರೆ ಪರಮಾತ್ಮನೇ ಬೇರೆ. ಅಧ್ಯಾತ್ಮ ತೆಗೆದುಕೊಂಡು ನಾನೇನು ಮಾಡಲಿ ಎಂದು ಭೇದವೆನಿಸಿ ಸಿರಿ-ಸಂಪತ್ತಿನ ಬೆನ್ನುಹತ್ತಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಾನೆ. ಆದರೆ ಆತನ ಬದುಕು ಪರಿಪೂರ್ಣ ಸಾರ್ಥಕವಾಗಬೇಕಾದರೆ ಸಜ್ಜನರ, ಶರಣರ ಸಂಗದೊಡನಾಟವೇ ಸರ್ವೋತ್ತಮವಾದುದು. ಆದುದರಿಂದ ನಮಗಿಂದು ಶರಣರ ವಚನಗಳು ಮಾದರಿಯಾಗಿವೆ, ತೋರುದೀಪ-ದಾರಿದೀಪವಾಗಿವೆ. ಶರಣರು ಮತ್ತು ಅವರ ವಚನಗಳು ಬದುಕಿನ ಕೈಗನ್ನಡಿಯಾಗಿವೆ.

ದಯವೇ ಧರ್ಮದ ಮೂಲ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವಿಲ್ಲದವರ ಮೆಚ್ಚಲಾರ ಆ ಕೂಡಲಸಂಗಮದೇವನು ಎಂದಿದ್ದಾರೆ ಬಸವಣ್ಣ! ಅವರೇ ಮಾತು ಹೇಗಿರಬೇಕೆಂದು ಹೇಳಿದ್ದು- ನುಡಿದರೆ ಮುತ್ತಿನ ಹಾರ, ಸ್ಫಟಿಕದ ಸಲಾಕೆ, ಮಾಣಿಕ್ಯದ ದೀಪ್ತಿ, ಲಿಂಗದೇವನು ಮೆಚ್ಚಿ ಅಹುದಹುದು ಎನ್ನುವಂತಿರಬೇಕು!



ಇದುವೇ ನಡೆಯ ಸನ್ಮಾರ್ಗವೆಂದು ಸಾರಿದ ಬಸವಾದಿ ಶರಣರು ಅದರಂತೆ ನಡೆದರು. ಸಂಸಾರವೆಂಬುದು ತುಂಬಿದ ಬಂಡಿ, ರಥದ ಚಕ್ರವಿದ್ದಂತೆ. ಸಂಸಾರದಲ್ಲಿ ತಾಪತ್ರಯಗಳು, ಆಪತ್ತು-ವಿಪತ್ತುಗಳು ಲೋಭ-ಮೋಹಗಳು ಆವರಿಸಿದರೆ ವಿಪರೀತ ಪ್ರಮಾಣದಲ್ಲಿ ದಾಳಿ ಮಾಡುವವು. ಅದರಲ್ಲೂ ಧನಮದ, ವಿದ್ಯಾಮದ, ಅಧಿಕಾರ ಮದಗಳು ವಿಪರೀತ ಅಪಾಯಕಾರಿಗಳಿವು. ಇವುಗಳ ದಾಸನಾದರೆ ಆತನನ್ನು ಮೇಲೇಳಗೊಡುವುದಿಲ್ಲ. ಸತ್ಯಶುದ್ಧ ಕಾಯಕಜೀವಿಗೆ ಅಡೆತಡೆಗಳಿವು ಅಂದರೆ ರಸ್ತೆಯಲ್ಲಿರುವ (Speed Breakers) 'ಸ್ಪೀಡ್ ಬ್ರೇಕರ್ಸ್' ಇದ್ದಂತೆ. ಇಂತಹ ಅಡೆತಡೆಗಳನ್ನು ದಾಟಿ ಮೆಟ್ಟಿ ನಿಂತವನೇ ಶರಣನಾಗಬಲ್ಲ! ಶರಣನೆಂದರೆ ತನ್ನ ಅರಿವೇ ತನ್ನ ಗುರುವನ್ನಾಗಿ ಮಾಡಿಕೊಳ್ಳುವಿಕೆ. ಸಕಲ ಕರಣೇಂದ್ರಿಯಗಳನ್ನು ತೊರೆದವ. ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ
ಇವನೆನ್ನ ನಾಲಗೆಯ ಮೇಲಿಂದೆತ್ತ ತೆಗೆದು ಕಳೆಯಯ್ಯಾ!
ಅದೇಕೆಂದಡೆ ನಿಮ್ಮತ್ತಲೆನ್ನ ಬರಲೀಯದು
ಇದು ಕಾರಣ ಇವೆಲ್ಲವ ಕಳೆದು
ಎನ್ನ ಪಂಚಸೈವರ ಭಕ್ತರ ಮಾಡು ಕೂಡಲಸಂಗಮದೇವಾ!

ಮಾಡುವಲ್ಲಿ, ನೀಡುವಲ್ಲಿ ತ್ರಿಕರಣಶುದ್ಧಿಗೆ ಪ್ರಾಶಸ್ತ್ಯ ನೀಡಿದ್ದ ಬಸವಣ್ಣ ಆವೇಶಕ್ಕೆ, ಆಸೆಗೆ, ಉದ್ವೇಗಕ್ಕೆ ಒಳಗಾಗದಂತೆ ಬದುಕಿದವರು. ಮೇಲೆ ಹೇಳಿದಂತಹ ತಾಮಸ ಗುಣಗಳು ದೇಹದೊಳಕ್ಕೆ ಬರದಂತೆ ನಿಗಾ ವಹಿಸಿಕೊಂಡರೆ ಬದುಕು ಸ್ಫಟಿಕದಷ್ಟು ಪರಿಶುದ್ಧವಾಗುತ್ತದೆ. ಅವಗುಣಗಳನ್ನು ಕಳೆದುಕೊಳ್ಳುವ ಪ್ರಯತ್ನ ಮಾಡುವುದೇ ಮಾನವನ ಉನ್ನತಿಕೆಗೆ ಸಾಕ್ಷಿ! ಅವಗುಣಗಳ ನಿವಾರಣೆಗೆ ಅಣ್ಣನ ವಚನದಲ್ಲಿಂತಿದೆ:

ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ,
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ!

ಆಸೆ-ಆಮಿಷಕ್ಕೆ ಎನ್ನ ಮನ ಎಳಸದಿರಲೆಂದು ಬಸವಣ್ಣನವರು ಪ್ರಾರ್ಥಿಸಿಕೊಂಡ ಬಗೆ ಈ ವಚನದಲ್ಲಿ ಅನಾವರಣಗೊಂಡಿದೆ. ನಾವೂ ಅವರಂತೆ ಪ್ರಯತ್ನಿಸಬೇಕಲ್ಲವೆ? ಪ್ರಸ್ತುತ ವಿಷಯವನ್ನು ತಮ್ಮ ಮತ್ತೊಂದು ವಚನದಲ್ಲಿ ಹೀಗೆ ಪ್ರತಿಪಾದಿಸಿದ್ದಾರೆ:

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯಾ
ಪಶುವೇನು ಬಲ್ಲುದು ಹಸುರೆಂದೆಳಸುವುದು

ವಿಷಯರಹಿತನ ಮಾಡಿ ಭಕ್ತಿರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು,
ನೋಡಿ ಸಲಹಯ್ಯಾ ಕೂಡಲಸಂಗಮದೇವಾ!

ಇಂದ್ರಿಯಗಳ ಮೂಲ ಗುಣ ಚಂಚಲ, ಚಪಲ. ಮಂಗನಂತೆ ಗಿಡದಿಂದ ಗಿಡಕ್ಕೆ ಲಂಘಿಸುವವು. ಅವು ತಾತ್ತ್ವಿಕತೆಯತ್ತ ಹರಿಯಲಾರವು. ಇಂದು ನಡೆದಿರುವಂತಹ ಅನ್ಯಾಯ, ಭ್ರಷ್ಟಾಚಾರ-ಅತ್ಯಾಚಾರಗಳನ್ನು ಗಮನಿಸಿದರೆ ಪಶುವಿನಂತೆಯೇ ವರ್ತಿಸುವುದು ಕಾಣುತ್ತದೆ. ಇಂದ್ರಿಯಗಳು ಮನ ಬಂದತ್ತ ಹರಿಯದಂತೆ ನಿಗಾ ವಹಿಸುವುದು ಮುಖ್ಯ. ಅದಕ್ಕೆ ನಿಗ್ರಹ ಶಕ್ತಿಯ ಗಳಿಕೆಯೆನ್ನುತ್ತಾರೆ. ಸತ್ಸಂಗದಲ್ಲಿರುವುದು, ಕಾಯಕದಲ್ಲಿ ನಿರತರಾಗುವುದು, ಇದ್ದುದರಲ್ಲಿಯೇ ಬದುಕು ರೂಪಿಸಿಕೊಳ್ಳುವುದೇ ಬಸವಾದಿ ಶಿವಶರಣರ ಸಿದ್ಧಾಂತವಾಗಿದೆ. ಅದಕ್ಕೆ ಮಾನವನ ದೃಢನಿರ್ಧಾರವೇ ಮುಖ್ಯ. ಪ್ರಭುದೇವರ ವಚನದಲ್ಲಿ ಹೀಗಿದೆ:

ಕಾಯದ ಮೊದಲಿಂಗೆ ಬೀಜವು ಯಾವುದೆಂದರಿಯದೀ ಲೋಕವೆಲ್ಲ
ಇಂದ್ರಿಯಗಳು ಬೀಜವಲ್ಲ, ಆ ಕಳಾ ಭೇದವಲ್ಲ
ಸ್ವಪ್ನ ಬಂದೆರಗಿತಲ್ಲಾ!
ಇದಾರಿಂಗೆ ತಿಳಿಯಬಾರದಾಗಿ
ಶುದ್ಧ ಸುಯಿದಾನವಲ್ಲ ಕಾಣಾ ಗುಹೇಶ್ವರಾ!

ಸಂಸಾರ ಸಾಗರದೊಳಗೆ ಮುಳುಗಾಡುತ್ತಿದ್ದ ಪ್ರಾಣಿಗಳಿಗೆ ಸುಖ-ದುಃಖಗಳು ತಾಗದಿರ್ಪವೆ? ಎಂದು ಪ್ರಭುದೇವರು ಪ್ರಶ್ನಿಸಿದ್ದುದು ಅರ್ಥಪೂರ್ಣವಾಗಿದೆ. 'ಜ್ಞಾನವೇ ಕ್ರಿಯೆ-ಕ್ರಿಯೆಯೇ ಜ್ಞಾನ'ವೆಂಬುದು ಶರಣರ ಬದುಕಾಗಬೇಕೆಂದಿದ್ದಾರೆ. ಕಾಯ ದಂಡಿಸಿ, ದುಡಿದೇ ತಾನುಣ್ಣಬೇಕೆಂಬುದು ಶರಣರ ಸಿದ್ಧಾಂತ. ಕೇವಲ ಜ್ಞಾನಿಯಾದರೆ ನಡೆಯದು. ಜ್ಞಾನಿಯೂ ಆಗಬೇಕು. ಕಾಯಕವನ್ನು ಮಾಡಬೇಕು. ಎರಡನ್ನು ಮೈಗೂಡಿಸಿಕೊಂಡಿರಬೇಕೆಂಬ ಭಾವವಿದರಲ್ಲಿದೆ. ಕಾಯಕ ಮಾಡಿದವನು ನಾಯಕನಾಗುವನು-ಕಾಯಕ ಮಾಡಲಾರದವನು ನಾಲಾಯಕನಾಗುವನು ಎನ್ನಲಾಗಿದೆ. ಶರಣನಾದವನು ಸದ್ಗುಣಿಯಾಗಿದ್ದು; ಆಚಾರ-ವಿಚಾರ, ಕಾಯಕ-ದಾಸೋಹದೊಳಿರುವುದು 'ಅರಿವಿನ ಮನೆ ಈ ಮಾನವನ ದೇಹ.' ಅರಿವು-ಆಚಾರ-ವಿಚಾರ-ಅನುಭಾವ-ಕಾಯಕ ಮತ್ತು ದಾಸೋಹ ಈ ಪರಿಕರದೊಳಗಿರಬೇಕೆಂದಿದ್ದಾರೆ ಪ್ರಭುದೇವರು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಮನದ ಕೇಡು ನೋಡಯ್ಯಾ!



ಜ್ಞಾನಕ್ಕಿಂತ ಮಿಗಿಲಾದ ವಸ್ತು ಇನ್ನೊಂದಿಲ್ಲ. 'ನಹೀಜ್ಞಾನೇನ ಸದೃಶಂ, ಎಂಬಂತೆ. ಜ್ಞಾನಕ್ಕೆ ಕೊನೆಯೆಂಬುದಿಲ್ಲ. ಜ್ಞಾನ ಸಂಪಾದನೆಯಿಂದ ಅಜ್ಞಾನವೆಂಬ ಕತ್ತಲೆಯು ಓಡಿ ಹೋಗುತ್ತದೆ. ಸತ್ಯದ ಬಲವಿದ್ದರೆ ಅಸತ್ಯ ಸತ್ತುಹೋಗುತ್ತದೆ. ಇಂಥ ಹೀನ ಗುಣಗಳು ದೂರವಾದರೆ, ಆಸೆ-ಆಮಿಷಗಳು ದೂರವಾದರೆ, ಸಂಯಮದ ಬದುಕು ಸಂತೃಪ್ತಿಯ ಬದುಕು ಸಾಧಿತವಾಗುತ್ತದೆ. ಸಂಸಾರವು ತಿಳಿದುಕೊಂಡಷ್ಟು ಸಸಾರ ಸರಳವಲ್ಲ. ಸಮುದ್ರದ ನೆರೆತೆರೆಗಳಂತೆ ಕಷ್ಟಕಾರ್ಪಣ್ಯಗಳು ದಾಳಿ ಮಾಡುವುವು. ಅದಕ್ಕೆ ಅಧೀರರಾಗದೇ ಶರಣರ ಸಂದೇಶಗಳನ್ನು ಮೆಲುಕುಹಾಕುತ್ತ ಮುಂದಡಿಯಿಡಬೇಕು. ಅಂದಾಗ ಸಂಸಾರ ಸಸಾರವಾಗಬಲ್ಲುದು. ಸಂಸಾರವೆಂಬುದು ಒಂದು ಚಲಿಸುವ ಚಕ್ರವಿದ್ದಂತೆ. ಅಲ್ಲಮ ಪ್ರಭುದೇವರು ಹೇಳಿದಂತೆ:

ಸಂಸಾರವೆಂಬ ಹೆಣ ಬಿದ್ದಿರೆ
ತಿನ ಬಂದ ನಾಯಿ ಜಗಳವ ನೋಡಿರೆ!
ನಾಯ ಜಗಳವ ನೋಡಿ ಹೆಣ(ನೆದ್ದು) ನಗುತ್ತಿದೆ
ಗುಹೇಶ್ವರ ಲಿಂಗವಲ್ಲಿಲ್ಲ ಕಾಣಿರೋ!

ಸಂಸಾರವೆಂಬುದು ಶಿರದುದ್ದವೇ ಎಂದ ಬಸವ ವಾಣಿಯಂತೆ ಮಾನವನು ಬದುಕಿನೊಳಗೆ ನಿತ್ಯ ಗೊಂದಲ ಗೋಜಲುಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾನೆ. ಆದರೆ ಲಿಂಗಾಂಗ ಸಾಮರಸ್ಯದ ಕಡೆಗೆ ಗಮನವೀಯಲಾರರೆಂದಿದ್ದಾರೆ. ಅವರೇ ಮತ್ತೊಂದು ವಚನದಲ್ಲಿ:

ಕಾಲುಗಳೆಂಬಿವು ಗಾಲಿ ಕಂಡಯ್ಯ
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ
ಬಂಡಿಯ ಹೊಡೆವರ್ಯೆವರು ಮಾನಿಸರು
ಒಬ್ಬರಿಗೊಬ್ಬರು ಸಮವಿಲ್ಲವಯ್ಯಾ
ಅದರಿಚ್ಛೆಯನರಿದು ಹೊಡೆಯದಿರ್ದಡೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ!

ದೇಹವೆಂಬುದು ತುಂಬಿದ ಬಂಡಿಯೆಂಬುದನ್ನು ಸಂಕೇತಿಸಿ ಹೇಳುವಲ್ಲಿ ಬದುಕಿನ ಸಾರ್ಥಕತೆಯ ಮಹದರ್ಥ ತುಂಬಿಕೊಂಡಿದೆ. ಈ ಬಂಡಿಯಲ್ಲಿ ಸತ್ಯಶುದ್ಧಿ, ಶುಚಿತ್ವ ತುಂಬಿಕೊಂಡರೆ ದೇಹವೇ ದೇವಾಲಯವಾಗುತ್ತದೆಯೆಂದಿದ್ದಾರೆ. ಅದನ್ನು ಬಿಟ್ಟು ಈ ದೇಹದೊಳಗೆ ಮೋಹ-ವ್ಯಾಮೋಹ-ಲೋಭಗಳೆಂಬ ಕಸಕಡ್ಡಿ (ಕಲ್ಮಶ)ಗಳನ್ನು ತುಂಬಿಕೊಳ್ಳಬಾರದೆಂದು ಮನುಕುಲಕ್ಕೆ ಹಿತೋಕ್ತಿ ನೀಡಿದ್ದಾರೆ. ಈ ಮಾತಿಗೆ ಬಸವಣ್ಣನವರು:

ನೋಡಲಾಗದು ನುಡಿಯಲಾಗದು ಪರಸ್ತ್ರೀಯ ಬೇಡ ಕಾಣಿರೋ
ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ ಕಾಣಿರೋ
ಒಂದಾಸೆಗೆ ಸಾವಿರ ವರುಷ ನರಕದೊಳಗದ್ದುವನು
ಕೂಡಲಸಂಗಮದೇವಾ!

ಮನದೊಳಗೆ ತುಮುಲ-ರಾಗ-ದ್ವೇಷಗಳನ್ನು ತುಂಬಿಕೊಂಡು ಧಾರ್ಮಿಕ, ಅಧ್ಯಾತ್ಮಿಕ ನೆಲೆಯೊಳಗೆ ಈಜುವುದು ರಾದ್ಧಾಂತವೇ ಆಗಿದೆ. ಸಂಸಾರದೊಳಗೆ ದುಃಖ-ದುಮ್ಮಾನಗಳನ್ನು ಮನಕ್ಕೆ ಮನವೇ ಸಾಕ್ಷಿಯಾಗಿಟ್ಟುಕೊಂಡು ಛಲದಿಂದ ಹೋರಾಡಿ ಗೆಲ್ಲುವುದೇ ಆಗಿದೆಯೆಂದಿದ್ದಾರೆ ಬಸವಣ್ಣ!!

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಅಂಗ-ಜಂಗಮ ಒಂದೇ ಎಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ

ಇದು ಸತ್ಯ ಬದುಕಿನ ನಿಷ್ಠೆ ಮತ್ತು ಪಥ್ಯವಾಗಿದೆ. ಅವರು ಯಾರಿಗೂ ದ್ರೋಹ ಬಗೆಯದೇ ಬದುಕಿದ್ದು ಛಲಗಾರಿಕೆ, ಎದೆಗಾರಿಕೆ ಮತ್ತು ತ್ರಿಕರಣ ಶುದ್ಧಿಗೆ ಸಾಕ್ಷಿಯೂ ಆಗಿದೆ. ನಾವೂ ಏಕೆ ಆದ್ಯ ವಚನಕಾರ ಜೇಡರ ದಾಸಿಮಯ್ಯ ಹೇಳಿರುವಂತೆ 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬುದನ್ನು ಅನುಸರಿಸಬಾರದು? ದಾಸಿಮಯ್ಯ- ದುಗ್ಗಳೆಯರ ದಾಂಪತ್ಯದ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಶರಣರ ಬದುಕು ಸರ್ವ ದೃಷ್ಟಿಯಿಂದಲೂ ಮಾದರಿಯಾಗಿದೆ.ಇದಕ್ಕೆ ಪೂರಕವೆಂಬಂತೆ ಸರ್ವಜ್ಞನ ವಚನಗಳಲ್ಲಿ ಹೀಗೆ ಹೇಳಲ್ಪಟ್ಟಿದೆ:

ವಿಷಯಕ್ಕೆ ಕುದಿಯದಿರು, ಅಶನಕ್ಕೆ ಹರಿಯದಿರು
ಅಸಮಾಕ್ಷನಡಿಯ ಬಿಡದಿರು,-ಗುರುಕರಣ
ವಶವರ್ತಿಯಹುದು ಸರ್ವಜ್ಞ!

ವ್ಯಸನದಲಿ ದೇಹವು ಮಸಣವನು ಕಾಣುವುದು
ವ್ಯಸನವನು ಬಿಟ್ಟು ಹಸನಾಗಿ ದುಡಿದರೆ
ಅಶನ-ವಸನಗಳು ಲಭಿಸುವವು ಸರ್ವಜ್ಞ!

ಎಂಬುದಾಗಿ ಸರ್ವವನು ಬಲ್ಲ ಸರ್ವಜ್ಞನ ವಚನೋಕ್ತಿಗಳು ಸುಗಮ ಬಾಳಿನ ಸೂತ್ರಗಳಾಗಿವೆ.

ಸಂಸಾರವೆಂಬುದು ಗಾಳಿಗೊಡ್ಡಿದ ಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ



ಇದS ನೆಚ್ಚಿ ಕೆಡಬೇಡ
ಸಿರಿ ಎಂಬುದ ಮರೆತು ಪೂಜಿಸು ಕೂಡಲಸಂಗಮದೇವನ

ಬಸವಣ್ಣನವರ ಈ ಹೇಳಿಕೆ ಸತ್ಯದಾ ಬದುಕಿಗೊಂದು ಬೆಳಕಾಗಿದೆ. ಹಣದ ದಾಹಕ್ಕೆ ಸಿಲುಕಿ ಪೂಜಿಸುವುದನ್ನು ಬಿಡಬಾರದೆಂದಿದ್ದಾರೆ. ಆದುದರಿಂದ ಬಸವಣ್ಣನವರು ಸರಳ ವಚನದ ಸೂತ್ರಧಾರಿ! ಅವರ ವಚನಗಳು ನೇರ, ದಿಟ್ಟ, ಸುಲಭ-ಸರಳ, ಯಾರಿಗಾದರೂ ಅರ್ಥವಾಗುವಂತಿವೆ. ಬೆಡಗಿಲ್ಲದೆ, ತೊಡಕಿಲ್ಲದೆ ಶ್ರೀಸಾಮಾನ್ಯನಿಗೂ ತಿಳಿಯುವಂತಿವೆ.

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರ ಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನು ಆವಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮಫಲ
ಭೋಗವನೀ ಕೊಟ್ಟ ದ್ರವ್ಯವ ನಿಮಗಲ್ಲದೆ
ಮತ್ತೊಂದು ಕ್ರಿಯೆ ಮಾಡೆನು
ನಿಮ್ಮ ಸೊಮ್ಮು ನಿಮಗೆ ಸಲಿಸುವೆನು
ನಿಮ್ಮಾಣೆ ಕೂಡಲಸಂಗಮದೇವಾ!

ಎಂಬೀ ವಚನವನ್ನು ಗಮನಿಸಬೇಕು. ಕೃಷಿ, ಮಸಿ, ಅಸಿ, ಬೆವಹಾರ - ಆವಾವ ಕಾಯಕವ ಮಾಡಿದರೆಯೂ ನನ್ನ ಸ್ವಾರ್ಥಲಾಲಸೆಗಾಗಿ ಅಲ್ಲ; ಗುರುಪೂಜೆ, ಲಿಂಗಾರ್ಚನೆ ಮತ್ತು ದಾಸೋಹಗಳಿಗಾಗಿ ಎಂದು. 'ಪರೋಪಕಾರಾರ್ಥಾಯಮಿದಂ ಶರೀರಂ' ಎಂಬ ವಾಕ್ಯೋಕ್ತಿಯಂತೆ ನಡೆದುಕೊಳ್ಳುವುದೇ ನನ್ನ ಜೀವನದ ಪರಿಯಾಗಿದೆ ವಿನಾ ನನಗಾಗಿ ಅಲ್ಲವೆಂದಿದ್ದಾರೆ. ಅದೂ ತಾನು ನಂಬಿದ ಕೂಡಲಸಂಗನ ಮೇಲೆ ಆಣೆ-ಪ್ರಮಾಣ ಮಾಡಿ ಹೇಳಿದ್ದಾರೆ ಬಸವಣ್ಣ!! ಅದೆಂತಹ ಕಾಯಕವನು ಮಾಡಿ ಗಳಿಸಿದರೂ ಹಂಚಿಕೊಂಡು ತಿನ್ನುವ ಸಹ ಬಾಳ್ವೆ ನಮ್ಮದಾಗಬೇಕು ಎಂದಿದ್ದಾರೆ. ಅವರದೇ ವಚನವೊಂದರಲ್ಲಿ ಹೀಗಿದೆ:

ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಬಳಗವನು?
ಶಿವಭಕ್ತನಾಗಿರ್ದು ಬಳಿಕ ಭಕ್ತಿಪಕ್ಷವಿಲ್ಲದಿದ್ದೊಡೆ ಆ ಕಾಗೆ
ಕೋಳಿಗಳಿಗಿಂತ ಕರಕಷ್ಟ ಕಾಣಾ ಕೂಡಲಸಂಗಮದೇವಾ!

ಎಂತಹ ಸಹಬಾಳ್ವೆಯ ಪೂರಕ ಅಂಶ ಇದರಲ್ಲಿದೆ. ವಿಷಯವೆಂಬ ಪಿತ್ತವು ನೆತ್ತಿಗೇರಿದರೆ ವಿವೇಕವೆಂಬ ದೃಷ್ಟಿ ನಷ್ಟವಾಗುತ್ತದೆಯೆಂದಿದ್ದಾರೆ ಜೇಡರ ದಾಸಿಮಯ್ಯ! ಬಸವಣ್ಣನವರೆಂದಂತೆ:

ಏನು ಬಂದಿರಿ ಹದುಳವಿದ್ದಿರೆ ಎಂದರೇನು ನಿಮ್ಮ ಮೈಸಿರಿ ಹಾರಿ ಹೋಹುದೆ? ಕುಳ್ಳಿರೆಂದರೆ ನೆಲ ಕುಳಿ ಹೋಹುದೆ? ಒಡನೆ ನುಡಿದೊಡೆ ಸಿರ ಹೊಟ್ಟೆಯೊಡೆವುದೇ

ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದೊಡೆ ಕೆಡಹಿ ಮೂಗ ಕೊಯ್ಯದೆ ಮಾಣ್ಬನೇ ಕೂಡಲಸಂಗಮದೇವನು ಎಂದಿದ್ದಾರೆ.

**ಅಹಂ/ಅಹಂಕಾರ ನಿರಸನವೇ (ಪರಿಹಾರ) ಸೂತ್ರ**

'ದೇಹ'ವೆಂಬುದು ಮನುಷ್ಯನಿಗಿರುವ ಅತ್ಯಮೂಲ್ಯವಾದ ನಿಧಿ. ಇಂಥ ದೇಹವೆಂಬ ಸುಂದರ ದೇವಾಲಯದಲ್ಲಿ ಮೋಹ-ಲೋಭ-ವ್ಯಾಮೋಹಗಳೆಂಬ, ಅಹಂಕಾರಗಳೆಂಬ ಕಸಕಡ್ಡಿಗಳನ್ನು ತುಂಬಿಕೊಂಡಿದ್ದೇವೆ. ಅಹಂಕಾರವೇ ಅಲಂಕಾರವೆಂದು ಭಾವಿಸಿದ್ದೇವೆ. ಆದರದು ಸರಿಯಾದ ಮಾರ್ಗವಲ್ಲ, ಬದುಕೂ ಅಲ್ಲ.

ಅಹಂಕಾರ ಮನವನಿಂಬುಗೊಂಡಲ್ಲಿ
ಲಿಂಗ ತಾನೆಲ್ಲಿ ಬಪ್ಪುದೊ?
ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು
ಅಹಂಕಾರರಹಿತವಾದಲ್ಲಿ ಸನ್ನಿಹಿತ ಕಾಣಾ ಕೂಡಲಸಂಗಮದೇವ

ತನ್ನನ್ನು ತಾನು ಅರಿತುಕೊಂಡು, ಅಹಂಕಾರರಹಿತನಾಗಿ, ಅನ್ಯಕ್ಕೆ ಆಸೆ ಮಾಡದಿರುವುದೇ ಬದುಕಿನ ಮಹೋತ್ತಮ ಸಾಧನದ ಭಾಗವಾಗಿದೆ. ಅಹಂಕಾರ ನಿರಸನವೇ ತ್ರಿಕರಣಶುದ್ಧಿಗೆ ಸುಯೋಗ್ಯ ದಾರಿ. ಆದುದರಿಂದ ಅಣ್ಣನವರು ತಮ್ಮದೊಂದು ವಚನದ ಮೂಲಕ ಎಚ್ಚರಿಕೆ ನೀಡಿದ್ದಾರೆ.

ಆನೆಯನೇರಿಕೊಂಡು ಹೋದಿರೆ ನೀವು
ಕುದುರೆಯನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ನೀವು
ಸತ್ಯದ ನಿಲುವನರಿಯದೇ ಹೋದಿರಲ್ಲಾ?
ಸದ್ಗುಣವೆಂಬ ಬೀಜವ ಬಿತ್ತಿ, ಫಲವ ಬೆಳೆಯದೇ ಹೋದಿರಲ್ಲಾ?
ಅಹಂಕಾರವೆಂಬ ಮದಗಜವನೇರಿ ನೀವು ಹೋದಿರಲ್ಲಾ
ನಮ್ಮ ಕೂಡಲಸಂಗಮದೇವನನರಿಯದೇ ನರಕಕ್ಕೆ ಭಾಜನರಾದಿರಲ್ಲಾ?

'ಅಯ್ಯಾ ಎಂದಡೆ ಸ್ವರ್ಗ-ಎಲವೋ ಎಂದಡೆ ನರಕ' ಎಂದು ಬಸವಣ್ಣನವರು ಶ್ರೀಮಂತಿಕೆಯೆಂಬ ಅಹಂಕಾರ ತುಂಬಿಕೊಂಡಿರುವವರನ್ನು ಕಂಡು ಹೇಳಿದ ವಚನವಿದಾಗಿದೆ. ಅಹಂಕಾರದಿಂದ ಅನಾರೋಗ್ಯ, ಅನಾಹುತಕ್ಕೆ ದಾರಿಯೇ ವಿನಾ ಪರಮಾತ್ಮನನ್ನು ಕಾಣುವುದಕ್ಕಲ್ಲ. ಅಜ್ಞಾನ, ಆಲಸ್ಯ, ಕುರುಡು ನಂಬಿಕೆ, ಅಹಂಕಾರಗಳಿಂದ ತಮ್ಮನ್ನು ತಾವು ಸರ್ವನಾಶ ಮಾಡಿಕೊಳ್ಳುತ್ತಿದ್ದಾನೆ ಮಾನವ ಎನ್ನುತ್ತಾರೆ ಬಸವಣ್ಣ! ಅವರೇ ಮತ್ತೊಂದು ವಚನದಲ್ಲಿ ಹೀಗೆ ಪ್ರತಿಪಾದಿಸಿದ್ದಾರೆ:

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು



ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಡತನವೆಂಬ ಮಂತ್ರವಾದಿ ಹೊಗಲೊಡನೆ
ನುಡಿವರಯ್ಯಾ ಕೂಡಲಸಂಗಮದೇವಾ!

ಅಹಂಕಾರವೊಂದನ್ನುಳಿದರೆ ಬದುಕು ಸುಂದರವಾಗುತ್ತದೆ, ಸುಸಂಗತವೂ ಆಗುತ್ತದೆ. ಹಾಗೆಯೇ ಸತ್ಸಂಗದತ್ತ, ಶರಣರಿದ್ದೆಡೆಗೆ ಸಾಗಲು ಹವಣಿಸುತ್ತದೆ. ದೇಹವನ್ನು ದಂಡಿಸಿ, ದುಡಿದು, ಕಾಯಕ ಮಾಡಿಯೇ ಧನವ ಗಳಿಸಬೇಕು. ಅದರಲ್ಲಿಯೇ ಬಳಸಿ-ಉಳಿಸಿ ದಾಸೋಹ ಮಾಡಬೇಕು.

ತನು ಮನ ಧನವೆಂಬ ಮೂರು ಕತ್ತಿಯಿದೆ
ಸಲೆ ಮೂಗಿನ ಮೇಲೆ ಅಯ್ಯಾ!
ಗುರು-ಲಿಂಗ-ಜಂಗಮಕ್ಕೆ ಮಾಡಿದೆನೆಂಬವಂಗೆ!
ಇದು ಕಾರಣ ಕೂಡಲ ಸಂಗನ ಶರಣಂಗೆ ಅಂಜಲೇಬೇಕು.

ಪುಡ್ಡಿಗಾಗಿ, ಬ್ಲಡ್ಡಿಗಾಗಿ ದೇಹಕ್ಕೆ ದುಡ್ಡೇ ಮುಖ್ಯವಾಗಿ ಬೇಕು. ಆದರೆ ಅದನ್ನು ದುಡಿತದಿಂದ ತಂದು ಕಾಯಕ-ದಾಸೋಹಕ್ಕೆ ವಿನಿಯೋಗಿಸಿದರೆ ಮಾತ್ರ ಸಾರ್ಥಕದ ಬದುಕು; ಅದುವೇ ಶರಣರ ಬದುಕು. 'ಅರಿತರೆ ಶರಣ-ಮರೆತರೆ ಮಾನವ' ಎಂಬಂತೆ ಮನುಕುಲದ ಉದ್ಧಾರಕ್ಕೆ ಸಹಾಯ ಮಾಡಿದಂತಾಗುತ್ತದೆ. ಹಿತಮಿತ ಮತ್ತು ಸ್ವಾವಲಂಬನೆಯ ಬದುಕು, ದುರಾಸೆಯಿಂದ ದೂರವಿರುವುದೇ ಬದುಕಿನ ಸಾರವೆಂದು ಬಿಂಬಿಸಿದರಲ್ಲದೇ ಮಾಯೆಯ ನೈಜ ಅರ್ಥವನ್ನು ಜನರ ತಿಳುವಳಿಕೆಗೆ ಸಮೀಪಗೊಳಿಸಿದರು.

ಅಲ್ಲಮಪ್ರಭುದೇವರೆಂದಂತೆ :

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ!

'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ' ಎಂದ ಆಯ್ದಕ್ಕಿ ಲಕ್ಕಮ್ಮನ ಮಾತನ್ನಿಲ್ಲಿ ನೆನೆಯಬಹುದು. ಅದನ್ನೇ ಪ್ರಭು ಹೇಳುತ್ತಾರೆ:

ಆಸೆಗೆ ಸತ್ತುದು ಕೋಟಿ-ಆಮಿಷಕ್ಕೆ ಸತ್ತುದು ಕೋಟಿ
ಹೊನ್ನಿಗಾಗಿ ಸತ್ತುದು ಕೋಟಿ-ಮಣ್ಣಿಗಾಗಿ ಸತ್ತುದು ಕೋಟಿ
ಪರಮಾತ್ಮಾ ನಿನಗಾಗಿ ಸತ್ತವರಾರನೂ ಕಾಣೆ ಗುಹೇಶ್ವರಾ!

ಆಸೆಯೇ ಸರ್ವ ದುಃಖಕ್ಕೆ ಕಾರಣ. ನಡೆ-ನುಡಿಯಲ್ಲಿ ಒಂದೇಯಾಗಿರಬೇಕು ಮತ್ತು ಪವಿತ್ರ ಮನೋಭಾವನೆಯಿರಬೇಕು. ದುರಾಸೆ ಸತ್ತವರ ಖ್ಯಾತಿ. ನಿತ್ಯದ ವ್ಯಸನವನು

ತೊರೆದು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರಭುದೇವರು ಕರೆಕೊಟ್ಟ ಬಗೆಯಿದೆ. ಆಸೆ-ಆಮಿಷಕ್ಕೆ, ಧನ ದಾಹಕ್ಕೆ ಬೆನ್ನುಹತ್ತಿದರೆ ಜ್ಞಾನಸಂಪಾದನೆ ಮತ್ತು ದೇವನ ಸನ್ನಿಧಾನ ದೊರಕುವುದು ಬಲು ಕಷ್ಟವೆಂದಿದ್ದಾರೆ.

ನಾನೆಂಬಹಂಕಾರ ತಲೆದೋರಿದಲ್ಲಿ ಅಟಮಟ
ಕುಟಿಲ, ಕುಹಕವೆಂಬ ಬಿರುಗಾಳಿ ಹುಟ್ಟಿತ್ತು
ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನ ಜ್ಯೋತಿ ಕೆಟ್ಟಿತ್ತು
ಜ್ಞಾನ ಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ
ಅರು ಹಿರಿಯರೆಲ್ಲರು ತಾಮಸಕ್ಕೊಳಗಾಗಿ ಸೀಮೆತಪ್ಪಿ
ಕೆಟ್ಟರು ಕಾಣಾ ಗುಹೇಶ್ವರಾ!

ಎಂದ ಪ್ರಭುದೇವರ ವಾಣಿಯನ್ನು ನಾವಿಂದು ಗಮನಿಸಿ ಮುಂದಡಿಯಿಡಬೇಕು. ಅರ್ಥ ಪ್ರಾಪ್ತಿಗಾಗಿ ನಾವು ಮಾಡುವ ಕಾರ್ಯ-ಕಾಯಕ ಸರಿಯಾಗಿದೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಬಸವಣ್ಣನವರು ಹೀಗೆಂದಿದ್ದಾರೆ:

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ
ಆಯುಷ್ಯ ತೀರಿ ಪ್ರಳಯ ಬಂದಡೆ ಆ ಅರ್ಥವ ನಂಬುವರಿಲ್ಲ
ನೆಲನಗಿದು ಮಡುಗದಿರಾ, ನೆಲ ನುಂಗಿದಡುಗುಳೊದೆ?
ಕಣ್ಣಿನಲಿ ನೋಡಿ, ಮಣ್ಣಿನಲಿ ನೆರಹಿ ಉಣ್ಣದೇ ಹೋಗದಿರಾ!
ನಿನ್ನ ಮಡದಿ ಮಕ್ಕಳಿಗಿರಲೆಂದಡೆ, ಆ ಮಡದಿಯ ಕೃತಕ ಬೇರೆ
ನಿನ್ನ ಒಡಲು ಕಡೆಯಲು ಮತ್ತೊಬ್ಬನಲ್ಲಿ ಅಡಕದೆ ಮಾಣ್ಬಳೆ!
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ ಕೂಡಲಸಂಗನ
ಶರಣರಿಗೆ ಒಡನೆ ಸವೆಸೂದು.

ಗಳಿಸುವವರ ಸ್ವಭಾವ ಚಿತ್ರಣವಿದರಲ್ಲಿದೆ. ಬದುಕಿಗೆ ಹಣವು ಬೇಕೇನೋ ನಿಜ. ಅರ್ಥವಿಲ್ಲದ ಬದುಕೇ ವ್ಯರ್ಥನಿಜ. ಆದರೆ ಬದುಕಿಗೆ ಬೇಕಾಗುವಷ್ಟನ್ನು ಬಳಸಿಕೊಂಡು ಉಳಿದುದನ್ನು ಇಲ್ಲದವರಿಗೆ, ಜಂಗಮಕ್ಕೆ (ಸಮಾಜಕ್ಕೆ) ದಾಸೋಹವಗೈಯ್ಯಬೇಕು. ಗಳಿಕೆ-ಬಳಕೆ-ಉಳಿಕೆಯೊಂದಿಗೆ ಸಮಾಜಕ್ಕೆ ಧಾರೆಯೆರೆಯುವ ಗುಣವಿರಬೇಕೆಂದಿದ್ದಾರೆ ಬಸವಣ್ಣ!

ದೇವರು ಮಾನವನಿಗೆ ಏನೆಲ್ಲಾ ಕೊಡಮಾಡಿದ್ದರೂ ಆತ ಚಿಂತೆ ಮಾಡುವುದನ್ನೇ ಬಿಟ್ಟಿಲ್ಲ. ದೇಹವೆಂಬುದೊಂದು ಚಿಂತೆ ಕಾಂತೆಯ ಮನೆ | ಮಣಿಯಿದ್ದಂತೆ. ಅಂಬಿಗರ ಚೌಡಯ್ಯನೆಂಬ ನಿಜಶರಣ ಹೀಗೆ ಮಾನವನನ್ನು ವಿಡಂಬಿಸಿದ್ದಾನೆ.

ಬಡತನಕ್ಕೆ ಉಂಬುವ ಚಿಂತೆ; ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ; ಇಡಲಾದರೆ ಹೆಂಡಿರ ಚಿಂತೆ



ಹೆಂಡಿರಾದರೆ ಮಕ್ಕಳ ಚಿಂತೆ; ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ; ಕೇಡಾದರೆ ಮರಣದ ಚಿಂತೆ

ಹೀಗೆ ಹಲವು ಚಿಂತೆಯಲ್ಲಿದ್ದವರನು ಕಂಡಿದ್ದೇನೆ. ಆದರೆ ದೇವನ ಚಿಂತೆಯಲಿದ್ದವರನೊಬ್ಬರನೂ ಕಂಡಿಲ್ಲವೆಂದಿದ್ದಾರೆ. ದುಡಿಮೆಯಿಂದ ಅನ್ನ, ಬಟ್ಟೆ, ವಸತಿ, ಹೆಂಡತಿ, ಮಕ್ಕಳು, ಬದುಕು - ಹೀಗೆ ಒಂದೊಂದು ಈಡೇರಿಕೆಯಾಗುತ್ತಿರುವಂತೆ ಮತ್ತೊಂದು ಮತ್ತೊಂದು ಚಿಂತೆ ಧುತ್ತೆಂದು ಮುಂದೆ ಬಂದು ನಿಲ್ಲುತ್ತದೆ. ಆದರೆ ತಾಳ್ಮೆ-ಸ್ಮರಣೆಯ ಗುಣವಿರಬೇಕು. ಪ್ರಾಮಾಣಿಕ ದುಡಿಮೆಯಿಂದ ಧನವನ್ನು ಗಳಿಸಬೇಕೇ ವಿನಾ ವಾಮ ಮಾರ್ಗದಿಂದಲ್ಲ. ಅಂದಿನ ಶರಣರ ಬದುಕು ಹಸನು ಮತ್ತು ಪರಿಶುದ್ಧವಾಗಿತ್ತು ಎಂಬುದಕ್ಕೆ ಅವರು ರಚಿಸಿದ ವಚನಗಳೇ ಸಾಕ್ಷಿ! ಆದರೀಗ ಲಂಚವಂಚನೆಯಿಲ್ಲದೆ, ಭ್ರಷ್ಟಾಚಾರವಿಲ್ಲದೇ ಯಾವುದೇ ಕಾರ್ಯವು ಯಶಸ್ಸು ಕಾಣುವುದೇ ಇಲ್ಲ. ಇಂದಿನ ಅಧಿಕಾರಿ ವರ್ಗದವರು ಹನ್ನೆರಡನೆಯ ಶತಮಾನದ ಶಿವಶರಣೆ ಸತ್ಯಕ್ಕನ ವಚನವನ್ನರಿಯಬೇಕಾಗಿದೆ. ಆಕೆಯದು ಅನುಭವಮಂಟಪದ ಅಥವಾ ಶರಣರ ಮನೆಯಂಗಳದ ಕಸಗುಡಿಸುವ ಕಾಯಕ. ಆಕೆಯ ವಚನವೊಂದರಲ್ಲಿ ಹೀಗೆ ವ್ಯಕ್ತವಾಗಿದೆ. ಆಕೆಯ 27 ವಚನಗಳಲ್ಲಿಯೇ ಪ್ರಸಿದ್ಧವಾದ ವಚನ:

ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ; ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭು ಜಕ್ಕೇಶ್ವರಾ |

ಎಂಬ ಸತ್ಯಕ್ಕನ ವಚನವನ್ನು ನಾವಿಂದು ಲಕ್ಷಿಸಬೇಕು. ಒಮ್ಮೊಮ್ಮೆ ತಾನೇ ದುಡಿದು ಗಳಿಸಿದ್ದು ತನಗೇ ಆಗುವುದಿಲ್ಲ ಎಂಬ ಮಾತೊಂದಿದೆ. ಇನ್ನು ಅನ್ಯರದನ್ನು ಅಪಹರಿಸಿ ವಂಚಿಸುವುದೆಂದರೆ ತನಗದು ದಕ್ಕೀತೆ? ಸಾಧ್ಯವಿಲ್ಲ. ಇದೆಲ್ಲಾ ಗೊತ್ತಿದ್ದೂ ಇಂತಹ ಮೋಸ-ಲಂಚ-ವಂಚನೆ-ಭ್ರಷ್ಟಾಚಾರಗಳು ವಿಪರೀತ ಪ್ರಮಾಣದಲ್ಲಿ ಅಳತೆಗೆಟ್ಟು ನಡೆದಿವೆ. ಮೊನ್ನೆ ಮೊನ್ನೆ ಹದಿಮೂರು ಜನ ಲೋಕಾಯುಕ್ತರ ಬಲೆಗೆ ಸಿಲುಕಿದರು. ನಿತ್ಯವೂ ಈ ಕಾರ್ಯಾಚರಣೆ ನಡೆದೇ ಇದೆ. ಆದರೂ ಕಳ್ಳತನ ಮಾಡುವವರ ಸಂಖ್ಯೆಯೇ ಹೆಚ್ಚಾಗಿದೆ. ದುಡಿದುಣ್ಣುವವರ ಸಂಖ್ಯೆ ಕ್ಷೀಣಿಸಿದೆ. ಆದರೆ ದುಡಿದುದರಿಂದ ಬಂದದ್ದರಲ್ಲಿಯೇ ಬದುಕುವವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರವಿದ್ದುದು

ಗಮನಾರ್ಹ ಸಂಗತಿ. ಒಟ್ಟಿನಲ್ಲಿ ಮತ್ತೊಬ್ಬರ ಮನವನ್ನು ನೋಯಿಸದೆಯೇ, ದುಡಿತದಿಂದ ಬಂದುದರಲ್ಲಿಯೇ ತೃಪ್ತಿಪಡುವ, ಹಾಸಿಗೆಯಿದ್ದಷ್ಟು ಕಾಲು ಚಾಚುವಂತಹ ಗುಣವನ್ನು ಹೊಂದಿ ಬದುಕು ಸಾಗಿಸುವುದು ಉಚಿತವಾದ ಮಾರ್ಗ! 'ಗರ್ವದಿಂದ ಮಾಡುವ ಭಕ್ತಿ, ಪೂಜೆ, ಸೇವೆ ದ್ರವ್ಯದ ಕೇಡು' ಎಂದ ಆಯ್ದಕ್ಕಿ ಲಕ್ಕಮ್ಮನವರ ಮಾತು ನಿತ್ಯವೂ ಸತ್ಯ! ಅವಳದೊಂದು ವಚನದಲ್ಲಿ ಹೀಗಿದೆ:

> ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
> ಚಿತ್ತ ಶುದ್ಧದಲ್ಲಿ ಕಾಯಕವ ಮಾಡಿದಲ್ಲಿ
> ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮೀ ತಾನಾಗಿಪ್ಪಳು!
> ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ!

ಅಂದಿನ ಶರಣರು ಶ್ರಮ ಸಂಸ್ಕೃತಿಯನ್ನೇ ಮೂಲಾಧಾರವಿಟ್ಟುಕೊಂಡು ಬದುಕಿದವರು. ಅವರ ನಡೆ-ನುಡಿಯೇ ನಮಗಿಂದು ಶ್ರೀರಕ್ಷೆಯಾಗಿವೆ. ಆಚರಣೆಯ ಭಾಗ ನಮ್ಮದಾಗಬೇಕಷ್ಟೇ! ಅವರೇ ಹೇಳಿರುವಂತೆ ದೇವಲೋಕ ಮರ್ತ್ಯಲೋಕ ಬೇರೆ ಎಲ್ಲಿಯೂ ಇಲ್ಲ ಶಿವಲೋಕ ಶಿವಾಚಾರವಯ್ಯಾ ಭಕ್ತನಿದ್ದ ಠಾವೇ ದೇವಲೋಕ-ಭಕ್ತನಂಗವೇ ವಾರಣಾಸಿ, ಕಾಯವೇ ಕೈಲಾಸ ಇದು ಸತ್ಯ ಕೂಡಲಸಂಗಮದೇವಾ ಎಂದ ಬಸವ ವಾಣಿಯನ್ನು ನಾವು ಶಿರಸಾವಹಿಸಿ ಪಾಲಿಸಿ ಜೀವನವನ್ನು ಪಾವನವ ಮಾಡಿಕೊಳ್ಳೋಣ!!

□

## ಗ್ರಂಥಾಂತರಂಗ

**ಕೃತಿ: ಶ್ರೀಸಾಮಾನ್ಯರಿಗೆ ಶ್ರೀಚಕ್ರ ದರ್ಶನ**

**ಲೇ: ಕರ್ನಾಟಕ ಕಲಾಶ್ರೀ ವಿದ್ವಾನ್ ವಿ. ನಂಜುಂಡಸ್ವಾಮಿ**

---

**ವಿಮರ್ಶೆ: ಡಾ. ಕೂಡಲಿ ಜಗನ್ನಾಥ ಶಾಸ್ತ್ರಿ**

ಶ್ರೀಃ

ಗ್ರಂಥಕರ್ತನಿಗೆ ಮೊದಲನೆಯದಾಗಿ ತಾನು ತಿಳಿಸಲು ಉದ್ದೇಶಿಸಿರುವ ವಿಷಯದ ವಸ್ತು ಯಾವುದು ಎಂಬುದರ ಬಗ್ಗೆ ಇದಮಿತ್ಥಂ ಎಂಬ ನಿರ್ದಿಷ್ಟ ಅರಿವು; ಎರಡನೆಯದಾಗಿ ಯಾರಿಗೆ ಈ ವಿಷಯವನ್ನು ತಿಳಿಸುತ್ತಿದ್ದೇನೆ ಎಂಬ ನಿರ್ದಿಷ್ಟ ಪ್ರಜ್ಞೆ; ಮೂರನೆಯದಾಗಿ ತಾನು ತಿಳಿಸಲು ಉದ್ದೇಶಿಸಿರುವ ವಿಷಯದ ಬಗ್ಗೆ ಮಾಹಿತಿಗಳ ಸಂಗ್ರಹ; ನಾಲ್ಕನೆಯದಾಗಿ ತಾನು ಸಂಗ್ರಹಿಸಿದ ವಿಷಯವನ್ನು ಕುರಿತು ಸ್ವಯಂ ವಿಶ್ಲೇಷಣಾತ್ಮಕ ಚಿಂತನೆ; ಐದನೆಯದಾಗಿ ನಿರೂಪಣಾಕುಶಲತೆ ಇವು ಮುಖ್ಯವಾಗಿ ಇರಬೇಕು. ಇವೆಲ್ಲವೂ ಅಚ್ಚುಕಟ್ಟಾಗಿ ನಿರ್ವಹಣೆಗೊಂಡಾಗ ಕರ್ತೃವಿನ ಕಾರ್ಯವು ಯಶಸ್ವಿಯಾಗುತ್ತದೆ. ಪ್ರಕೃತ ವಿದ್ವಾನ್ ಶ್ರೀ ವಿ. ನಂಜುಂಡಸ್ವಾಮಿಯವರು ಬರೆದಿರುವ "ಶ್ರೀಸಾಮಾನ್ಯನಿಗೆ ಶ್ರೀಚಕ್ರ ದರ್ಶನ" ಎಂಬ ಗ್ರಂಥವನ್ನು ಮೇಲೆ ಹೇಳಿರುವ ಚೌಕಟ್ಟಿನಲ್ಲಿ ಚಿಂತನೆ ಮಾಡಿದಾಗ, ಇದೊಂದು ಯಶಸ್ವೀ ಗ್ರಂಥ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಭಾರತೀಯ ವೈದಿಕ ಸಂಪ್ರದಾಯದ ಸಗುಣಾರಾಧನಾ ಪ್ರತೀಕಗಳಲ್ಲಿ ಶ್ರೀಚಕ್ರದ ಪರಿಕಲ್ಪನೆ ವಿಶಿಷ್ಟವಾದದ್ದು. ಇದರಲ್ಲಿರುವ ದೈವೀತತ್ತ್ವಗಳ ಆರಾಧನೆ ಮತ್ತೂ ವಿಶೇಷವಾದದ್ದು. ಶ್ರೀಚಕ್ರದಲ್ಲಿರುವ ಆವರಣಗಳನ್ನು ಮತ್ತು ಆವರಣಗಳಲ್ಲಿರುವ ದೈವೀತತ್ತ್ವಗಳನ್ನು ಅರ್ಥಮಾಡಿಕೊಳ್ಳಲು ಘನ ವಿದ್ವಾಂಸರಿಗೂ ಕಠಿಣವಾದ ವಿಷಯವೇ ಆಗಿದೆ. ಅಂತಹ ಘನ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ, ಅವುಗಳನ್ನು ತಾವು ಸ್ವತಃ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಜನಸಾಮಾನ್ಯನ ತಿಳಿವಳಿಕೆಯ ಮಟ್ಟವನ್ನು ಅರ್ಥಮಾಡಿಕೊಂಡು, ಅಂಥವರಿಗೆ ಅರ್ಥವಾಗುವ ರೀತಿಯಲ್ಲಿ "ಶ್ರೀಸಾಮಾನ್ಯನಿಗೆ ಶ್ರೀಚಕ್ರ ದರ್ಶನ" ಎಂಬ ಗ್ರಂಥವನ್ನು ವಿದ್ವಾನ್ ಶ್ರೀ ವಿ. ನಂಜುಂಡಸ್ವಾಮಿಯವರು ರಚಿಸಿರುತ್ತಾರೆ. ಇದು ನಿಜವಾಗಿಯೂ ಪ್ರಶಂಸನೀಯವಾದ ಕಾರ್ಯವೇ ಆಗಿದೆ.

---

ಡಾ. ಕೂಡಲಿ ಜಗನ್ನಾಥ ಶಾಸ್ತ್ರಿ, 1ನೇ ಅಡ್ಡರಸ್ತೆ, ಎ.ಆರ್.ಬಿ. ಕಾಲೋನಿ, ಅಶೋಕನಗರ, ಶಿವಮೊಗ್ಗ- 577 205

ಶ್ರೀಯುತರು ಜನ್ಮತಃ ಬಹುಮುಖ ಪ್ರತಿಭಾನ್ವಿತ ವ್ಯಕ್ತಿತ್ವವುಳ್ಳವರು. ಅಷ್ಟೇ ಅಲ್ಲ, ತಮ್ಮ ಪ್ರತಿಭೆಯ ಮತ್ತು ಚಿಂತನೆಯ ಫಲಗಳನ್ನು ಪ್ರಾಯೋಗಿಕವಾಗಿ ಶೃುತಪಡಿಸಿ, ಆಸಕ್ತರಿಗೆ ಸಂಗೀತಶಾಸ್ತ್ರದ ಮಾಧ್ಯಮದಲ್ಲಿ ಕಲಿಸುವ ಮಹತ್ವಾಕಾಂಕ್ಷೆಯುಳ್ಳವರು. ಅವರು ಈ ಗ್ರಂಥವನ್ನು ಬರೆಯುವ ಮುನ್ನ ರೂಪಕಗಳನ್ನೂ, ಪ್ರಬಂಧಗಳನ್ನೂ ಗ್ರಂಥಗಳನ್ನೂ ಬರೆದು, ಲೇಖನಸಿದ್ಧಿಯನ್ನು ಪಡೆದವರಾಗಿದ್ದಾರೆ. ಅಲ್ಲದೆ ಅನೇಕ ಸ್ಥಳಗಳಲ್ಲಿ ಪ್ರದರ್ಶನಗಳ ಮೂಲಕ ಮತ್ತು ಆಕಾಶವಾಣಿ, ದೂರದರ್ಶನ ಮುಂತಾದ ಮಾಧ್ಯಮಗಳ ಮೂಲಕ ಶ್ರೀಚಕ್ರಕ್ಕೆ ಸಂಬಂಧಿಸಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೊಟ್ಟು, ಜನರ ಗೌರವಕ್ಕೆ ಪಾತ್ರರಾಗಿದ್ದಾರೆ. ಇದರ ಫಲಸ್ವರೂಪವಾಗಿ ಅವರಿಗೆ ಅನೇಕ ಪ್ರಶಸ್ತಿಗಳೂ, ಬಿರುದುಗಳೂ ಲಭಿಸಿವೆ ಮತ್ತು ಸನ್ಮಾನಗಳೂ ನೆರವೇರಿವೆ.

ಗ್ರಂಥಕರ್ತರು ಈ ಗ್ರಂಥದಲ್ಲಿ ತಾವು ತಿಳಿಸಲಿರುವ ವಿಷಯವನ್ನು ಹನ್ನೊಂದು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲನೆಯ ಅಧ್ಯಾಯದಲ್ಲಿ ಈ ಗ್ರಂಥರಚನೆಯ ಉದ್ದೇಶವನ್ನು ವಿವರಿಸಿ, ಎರಡನೆಯ ಅಧ್ಯಾಯದಲ್ಲಿ ಶ್ರೀಚಕ್ರದ ಸ್ವರೂಪ ಮತ್ತು ಮಹತ್ವವನ್ನು ಸೌಂದರ್ಯಲಹರಿಯ ಮೂಲಕ ಪ್ರಚುರಪಡಿಸಿದೆ ಮತ್ತು ಅನೇಕ ಕಡೆ ಶ್ರೀಚಕ್ರವನ್ನು ಸ್ಥಾಪಿಸಿ, ಅಲ್ಲಿ ದೇವತಾ ಸಾನ್ನಿಧ್ಯವನ್ನುಂಟುಮಾಡಿದೆ. ಶ್ರೀ ಶಂಕರಾಚಾರ್ಯರ ಜೀವನದ ಮುಖ್ಯ ಘಟನೆಗಳನ್ನು ಪರಿಚಯ ಮಾಡಿಕೊಟ್ಟು, ಮಧುರೆಯ ಶ್ರೀ ಮೀನಾಕ್ಷಿದೇವಿಯು ರೌದ್ರಾಂಶವನ್ನು ನೀಗಿ ಸೌಮ್ಯಾಂಶಭೂತಳಾದ ಘಟನೆಯ ಮೂಲಕ ಶ್ರೀಚಕ್ರದ ಮಹತ್ವವನ್ನು ತಿಳಿಸಿದ್ದಾರೆ. ಮೂರು ಮತ್ತು ನಾಲ್ಕನೆಯ ಅಧ್ಯಾಯಗಳಲ್ಲಿ ಕನ್ನಡ ಭಾಷೆಯನ್ನು ತಿಳಿಯದವರಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಶ್ರೀಚಕ್ರದ ಮಹತ್ವವನ್ನೂ, ಶ್ರೀ ಚಕ್ರ ಮತ್ತು ನಾಟ್ಯಶಾಸ್ತ್ರದ ಸಾಮ್ಯತೆಯನ್ನೂ ಹೇಳಿದ್ದಾರೆ. ಐದನೆಯ ಅಧ್ಯಾಯದಲ್ಲಿ ಶ್ರೀಚಕ್ರದ ಆವರಣಗಳ, ಚಕ್ರಗಳ, ಚಕ್ರೇಶ್ವರಿಯರ, ಯೋಗಿನಿಯರ ವಿವರಣೆಯನ್ನು ಕೊಡುವುದರೊಂದಿಗೆ, ಅವುಗಳಿಗೆ ಸಮನ್ವಯವಾಗುವ ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಈ ಅಧ್ಯಾಯದ ಮತ್ತೊಂದು ವಿಶೇಷವೆಂದರೆ, ನವರತ್ನಗಳು ಮತ್ತು ನವರತ್ನಗಳ ಪ್ರಿಯರಾದ ಚಕ್ರೇಶ್ವರಿಯರ ವಿವರವನ್ನೂ, ಮಾನವನ ದೇಹದಲ್ಲಿರುವ ಧಾತುಗಳೊಂದಿಗೆ ಈ ರತ್ನಗಳ ಸಂಬಂಧವನ್ನು ಹೇಳಿರುವುದು. ಇದಾದ ಮೇಲೆ ಈ ಅಧ್ಯಾಯದಲ್ಲಿ ಹನ್ನೆರಡು ಜನ ಉಪಾಸಕರ ಹೆಸರುಗಳನ್ನೂ, ಶ್ರೀಚಕ್ರದ ಪೂಜಾಕ್ರಮವನ್ನೂ, ಉಪಾಸನಾ ವಿಧಿಯನ್ನೂ ಹೇಳಿ, ಶ್ರೀ ಲಲಿತಾ ಸಹಸ್ರನಾಮದ ಮತ್ತು ಶ್ರೀ ಲಲಿತಾತ್ರಿಶತಿಯ ವೈಶಿಷ್ಟ್ಯಗಳು, ದೇವೀ ಖಡ್ಗಮಾಲಾ ಸ್ತೋತ್ರಕ್ಕೂ, ಶ್ರೀಚಕ್ರದ ನವಾವರಣಕ್ಕೂ ಇರುವ ಸಂಬಂಧ, ಶ್ರೀ ಶಂಕರಾಚಾರ್ಯರು ರಚಿಸಿರುವ ಸೌಂದರ್ಯಲಹರೀ ಶ್ಲೋಕಗಳಲ್ಲಿ ಹೇಳಿರುವ ಶ್ರೀಚಕ್ರದ ನಿರೂಪಣೆ ಮುಂತಾದುವನ್ನು ಹೇಳಿದ್ದಾರೆ.



ಆರನೆಯ ಅಧ್ಯಾಯದಲ್ಲಿ ಶ್ರೀ ವಿದ್ಯೆಗೆ ಸಂಬಂಧಿಸಿದ ಬಹು ವಿಸ್ತಾರವಾದ ಅನ್ಯತ್ರ ಸುಲಭವಾಗಿ ಸಿಗಲಾರದ ಮಾಹಿತಿಗಳನ್ನು ಸರಳ ಭಾಷೆಯಲ್ಲಿ ಮತ್ತು ಸಮಗ್ರ ನಿರೂಪಣೆಯಲ್ಲಿ ವಿವರಿಸಿದ್ದಾರೆ. ಏಳನೆಯ ಅಧ್ಯಾಯದಲ್ಲಿ ಶ್ರೀ ವಿದ್ಯೋಪಸಕರಾದ ಶ್ರೀ ಮುತ್ತುಸ್ವಾಮಿ ದೀಕ್ಷಿತರ ಜೀವನ ಚರಿತ್ರೆಯನ್ನು ಪರಿಚಯ ಮಾಡಿದ್ದಾರೆ. ಎಂಟನೆಯ ಅಧ್ಯಾಯದಲ್ಲಿ, ಶ್ರೀಚಕ್ರದ ಆವರಣಗಳಲ್ಲಿ ಅಷ್ಟ ದಳಗಳ ಮತ್ತು ಷೋಡಶ ದಳಗಳ ಪದ್ಮದ ವಿಚಾರ ಬರುತ್ತದೆ. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು, ಗ್ರಂಥಕರ್ತರು, ಪದ್ಮ ಅಥವಾ ಕಮಲ ಪುಷ್ಪಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ವಿಸ್ತಾರವಾಗಿ ಹೇಳಿದ್ದಾರೆ. ಒಂಬತ್ತನೆಯ ಅಧ್ಯಾಯದಲ್ಲಿ ಶ್ರೀಚಕ್ರ ಮತ್ತು ಮುತ್ತುಸ್ವಾಮಿ ದೀಕ್ಷಿತರ ಶ್ರೀ ಕಮಲಾಂಬಾ ನವಾವರಣ ಕೀರ್ತನೆಗಳ ವಿಶ್ಲೇಷಣೆಯನ್ನು ಸಂಗೀತಶಾಸ್ತ್ರದ ಹಿನ್ನೆಲೆಯಲ್ಲಿ, ಶ್ರೀ ದೇವೀ ಖಡ್ಗಮಾಲಾ ಸ್ತೋತ್ರದೊಂದಿಗೆ ತುಲನಾತ್ಮಕ ಚಿಂತನೆಯನ್ನು ಮಾಡಿರುವುದು, ಗ್ರಂಥಕರ್ತರ ವಿಶ್ಲೇಷಣಾತ್ಮಕ ಪ್ರವೃತ್ತಿಯ ಆಳವನ್ನು ಪ್ರತಿನಿಧಿಸುತ್ತದೆ. ಒಂಬತ್ತನೆಯ ಅಧ್ಯಾಯದಲ್ಲಿ ಗ್ರಂಥರಚಯಿತರಾದ ವಿದ್ವಾನ್ ಶ್ರೀ ವಿ. ನಂಜುಂಡಸ್ವಾಮಿಯವರು ತಮ್ಮ ವಿಶೇಷ ಪ್ರೌಢಿಮೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಅವರು ಸಂಗೀತಶಾಸ್ತ್ರವನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಹೊಸ ಅನುಭವಗಳನ್ನು ಕೃತಿಗಳಲ್ಲಿ ಅಳವಡಿಸಿ ಸ್ವತಃ ಕೃತಿಗಳನ್ನು ರಚಿಸುವ ಸಾಮರ್ಥ್ಯವುಳ್ಳವರು. ಶ್ರೀ ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಶಿವಾನಂದಲಹರಿ ಮುಂತಾದ ಸ್ತೋತ್ರ ಸಾಹಿತ್ಯದಲ್ಲಿ ಸಂವಾದಿಯಾಗಿರುವ ಅಂಶಗಳನ್ನು ದೀಕ್ಷಿತರ ಕೃತಿಗೆ ಅನ್ವಯಿಸಿ ಚಿಂತನೆ ಮಾಡಿರುವುದು ಒಂಬತ್ತನೆಯ ಅಧ್ಯಾಯದ ವಿಶೇಷ.

ಈ ಅಧ್ಯಾಯದಲ್ಲಿ ಶ್ರೀಚಕ್ರ ಮತ್ತು ಮುತ್ತುಸ್ವಾಮಿ ದೀಕ್ಷಿತರ ಶ್ರೀ ಕಮಲಾಂಬಾ ನವಾವರಣ ಕೀರ್ತನೆಗಳ ವಿಶ್ಲೇಷಣೆಯನ್ನು ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿ ಶ್ರೀದೇವಿ ಖಡ್ಗಮಾಲಾ ಸ್ತೋತ್ರ ಸಾಹಿತ್ಯದೊಂದಿಗೆ ತೌಲನಿಕ ಅಧ್ಯಯನವನ್ನು ಮಾಡಿರುವುದು, ಗ್ರಂಥಕರ್ತರ ವಿಶ್ಲೇಷಣಾತ್ಮಕ ಚಿಂತನೆಯ ಕೌಶಲವನ್ನು ಶೃುತಪಡಿಸುತ್ತದೆ. ಹತ್ತನೆಯ ಅಧ್ಯಾಯದಲ್ಲಿ ಶ್ರೀಚಕ್ರದ ನೆನಪಿನಲ್ಲಿ ಶ್ರೀ ಲಲಿತಾ ಸಹಸ್ರನಾಮದ ಸ್ತೋತ್ರವನ್ನು ಇಪ್ಪತ್ತು ರಾಗಗಳಿಗೆ ಅಳವಡಿಸಿ, ವೀಣೆಯಲ್ಲಿ ನುಡಿಸಿ, ಆಸಕ್ತರಿಗೂ ಕಲಿಸಿ, ತಾವೂ ಸಂತೋಷಪಟ್ಟು, ಕೇಳುಗರನ್ನೂ ಸಂತೋಷಪಡಿಸಿ, ಜನ್ಮಾಂತರೀಯದ ಪುಣ್ಯವಿಶೇಷದಿಂದ ಲಭ್ಯವಾದ ಸಂಗೀತಕಲಾ ಪ್ರೌಢಿಮೆಗೆ ಸಂಪೂರ್ಣ ಸಾಫಲ್ಯವನ್ನು ಕೊಟ್ಟು ಧನ್ಯರಾಗಿದ್ದಾರೆ.

ಹನ್ನೊಂದನೆಯ ಅಧ್ಯಾಯವಂತೂ, ಈ ಗ್ರಂಥದ ಕಿರೀಟವೆಂದೇ ಹೇಳಬೇಕಾಗಿದೆ. ಮೈಸೂರು ಸಂಸ್ಥಾನದ ಅಂತಿಮ ಅರಸರಾಗಿದ್ದುಕೊಂಡು, ಕನ್ನಡ ರಾಜರಾಜೇಶ್ವರಿಯ ಆರಾಧಕರಾಗಿದ್ದುಕೊಂಡು, ವಂಶದೇವತೆಯಾದ ಶ್ರೀ ಚಾಮುಂಡೇಶ್ವರಿಯ ಅನನ್ಯ

ಭಕ್ತರಾಗಿದ್ದುಕೊಂಡು, ಭೋಗವೈರಾಗ್ಯಗಳನ್ನು ಅಭಿನ್ನವಾಗಿ ಸ್ವೀಕರಿಸಿ ಬಾಳಿ, ವೇದಾಂತ ಮತ್ತು ಸಂಗೀತಶಾಸ್ತ್ರಗಳನ್ನು ಗುರುಮುಖೇನ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಅವುಗಳ ಸಾಧನೆಯಲ್ಲಿ ಪಾರಂಗತರಾಗಿ, ದತ್ತಾತ್ರೇಯ ಎಂಬ ವೇದಾಂತ ಪ್ರತಿಪಾದಕ ವ್ಯಾಖ್ಯಾನ ಗ್ರಂಥವನ್ನೂ, ಸುಮಾರು ತೊಂಬತ್ತನಾಲ್ಕು ಶಾಸ್ತ್ರೀಯ ಸಂಗೀತ ಕೃತಿಗಳನ್ನು ರಚಿಸಿ, ಲೌಕಿಕವಾದ ಕೀರ್ತಿಯನ್ನೂ ಬಯಸದೆ, ಸಾಧನಾ ಮಾರ್ಗದಲ್ಲಿ ಸಾಗಿ, ಸಿದ್ಧಿಯನ್ನು ಪಡೆದ, ರಾಜರ್ಷಿ, ರಾಜಯೋಗಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರವರ ಸಮಗ್ರ ಕೀರ್ತನೆಗಳನ್ನು ಸಂಗ್ರಹಿಸಿ, ಅವುಗಳನ್ನು ಪರಿಷ್ಕರಿಸಿ, ಅವುಗಳಲ್ಲಿ ಒಂಬತ್ತು ಕೀರ್ತನೆಗಳನ್ನು ಶ್ರೀಚಕ್ರದ ನವಾವರಣದ ಛಾಯೆಯಲ್ಲಿ, ತಮ್ಮದೇ ಆದ ಸ್ವಯಂ ನಿಶ್ಚಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ, ಗ್ರಂಥವನ್ನು ಮಂಗಳಗೊಳಿಸಿರುವುದು, ವಿದ್ವಾನ್ ಶ್ರೀ ವಿ. ನಂಜುಂಡಸ್ವಾಮಿಯವರ, ವಿವೇಕಾತ್ಮಕ ಶಕ್ತಿಯ ಮತ್ತು ವಿವೇಚನಾತ್ಮಕ ದೃಷ್ಟಿಯ ಪ್ರತೀಕವಾಗಿದೆ.

ಈ ಲೇಖನವನ್ನು ಗ್ರಂಥದ ಸಿಂಹಾವಲೋಕನದ ಹಿನ್ನೆಲೆಯಲ್ಲಿ ಬರೆದಿದ್ದೇನೆಯೇ ವಿನಾ ವಿಶ್ಲೇಷಣಾತ್ಮಕ ದೃಷ್ಟಿಯಿಂದ ಬರೆದಿಲ್ಲ. ಇಂತಹ ಗ್ರಂಥಗಳನ್ನು ವಿಶ್ಲೇಷಣಾತ್ಮಕ ದೃಷ್ಟಿಯಿಂದ ಚಿಂತನೆ ಮಾಡಲೂಬಾರದು. ಗ್ರಂಥಕರ್ತರು ಈ ಗ್ರಂಥದ ರಚನೆಗಾಗಿ ಶ್ರೀಲಲಿತಾಸಹಸ್ರನಾಮಸ್ತೋತ್ರ, ಶ್ರೀಲಲಿತಾತ್ರಿಶತಿಸ್ತೋತ್ರ, ಸೌಂದರ್ಯಲಹರಿ ಸ್ತೋತ್ರ, ಶಿವಾನಂದಲಹರಿಸ್ತೋತ್ರ, ಶ್ರೀದೇವೀಖಡ್ಗಮಾಲಾಸ್ತೋತ್ರ, ಉಪನಿಷತ್ತು ಮುಂತಾದುವನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿ, ಅವುಗಳಲ್ಲಿ ಶ್ರೀಚಕ್ರಕ್ಕೆ ಸಂಬಂಧಿಸಿದ ವಿಚಾರಗಳು ಹೇಗೆ ಪ್ರತಿಪಾದಿತವಾಗಿವೆ ಎಂಬುದನ್ನು ತಿಳಿಸಿದ್ದಾರೆ. ಈ ಗ್ರಂಥದ ಪ್ರತಿಯೊಂದು ಅಧ್ಯಾಯವೂ ಆ ವಿಷಯಕ್ಕೆ ಸಂಬಂಧಿಸಿದ ಒಂದು ಕಿರು ವಿಶ್ವಕೋಶವೇ ಆಗಿದೆ. ಹಾಗಾಗಿ ಇದೊಂದು ಶ್ರೀಚಕ್ರಕ್ಕೆ ಸಂಬಂಧಿಸಿದ ವಿಶ್ವಕೋಶಗಳ ವಿಶ್ವಕೋಶ ಎಂದೂ ಹೇಳಬಹುದು. ಆಸಕ್ತರು ಈ ಗ್ರಂಥವನ್ನು ಸದುಪಯೋಗಪಡಿಸಿ ಕೊಂಡು ಗ್ರಂಥಕರ್ತರ ಶ್ರಮವನ್ನು ಸಾರ್ಥಕಪಡಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಕೂಡಲಿ ಜಗನ್ನಾಥ ಶಾಸ್ತ್ರಿಗಳು 87 ವರ್ಷದ ಜ್ಞಾನವೃದ್ಧರು. ವಿದ್ಯಾಭ್ಯಾಸ: ಎಂ.ಎ(ಕ) (ಹಿಂ) (ಸಂ) ಬಿ.ಎಡ್. ಕನ್ನಡ ಪಂಡಿತರು-ಹಿಂದಿ ಸಾಹಿತ್ಯರತ್ನ ಕುವೆಂಪು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿದೆ. ಹಲವಾರು ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ಅನೇಕರಿಗೆ (ಗಣ್ಯರೂ, ಸ್ವಾಮೀಜಿಗಳೂ ಸೇರಿ) ಪಿ.ಹೆಚ್.ಡಿ. ಪದವಿಗೆ ಮಾರ್ಗದರ್ಶಕರು. ಇವಲ್ಲದೆ ಶ್ರೀವಿದ್ಯಾ- ಶ್ರೀಚಕ್ರ ಉಪಾಸಕರೂ ಆಗಿದ್ದಾರೆ. ಕಾಲೇಜು ಪ್ರಾಚಾರ್ಯರಾಗಿ ನಿವೃತ್ತರು)

# ವಾರ್ತಾವಿಹಾರ

## ಅಂಕಸ್ಥಾಪನೆ ಹೊಸ ಬದಲಾವಣೆಗೆ ನಾಂದಿ

ಅಂಕಸ್ಥಾಪನೆಗಳು ಕೆಟ್ಟ ಆಚರಣೆಯನ್ನು ದೂರ ಮಾಡುವ ಹಾಗೂ ಹೊಸ ಬದಲಾವಣೆಗೆ ಹೊಂದಿಕೊಳ್ಳುವಂತಹ ಮನಸ್ಥಿತಿಯನ್ನು ಮೂಡಿಸುತ್ತವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಸಂತೆಮರಹಳ್ಳಿಯಲ್ಲಿ ದಿನಾಂಕ 2.3.2015 ರಂದು ನಡೆದ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ವಿಗ್ರಹ ಪ್ರತಿಷ್ಠಾಪನೆ, ಸಂಪ್ರೋಕ್ಷಣೆ ಮತ್ತು ಕಳಸಾರೋಹಣ, ಶ್ರೀ ಗಣಪತಿ ದೇವಸ್ಥಾನದ ಉದ್ಘಾಟನೆ, ಅಂಕಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯವನ್ನು ವಹಿಸಿ ಅವರು ಆಶೀರ್ವಚನ ನೀಡಿದರು.

ಸಂತೆಮರಹಳ್ಳಿ ಭಾಗದ ಜನರು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿದ್ದರೂ ಧಾರ್ಮಿಕವಾಗಿ ಶ್ರದ್ಧಾಭಕ್ತಿಯನ್ನು ಇನ್ನೂ ರೂಢಿಸಿಕೊಂಡು ಬಂದಿದ್ದಾರೆ. ಹಿರಿಯ ಶ್ರೀಗಳಾದ ಶ್ರೀ ರಾಜೇಂದ್ರ ಸ್ವಾಮಿಗಳವರಿಗೆ ಸಂತೆಮರಹಳ್ಳಿ ಗ್ರಾಮದ ಭಕ್ತರು ಹೆಚ್ಚಿನ ಸಹಕಾರ ನೀಡಿದ್ದರು. ಅವರಿಗೆ ಕೇಂದ್ರಸ್ಥಾನವಾಗಿ ಸಂತೆಮರಹಳ್ಳಿ ಇತ್ತು. ಹೀಗಾಗಿ ಸುತ್ತೂರು ಮಠ ಹಾಗೂ ಸಂತೆಮರಹಳ್ಳಿ ಜನರಿಗೆ ಹೆಚ್ಚಿನ ಭಾವನಾತ್ಮಕವಾದ ಸಂಬಂಧ ಮತ್ತು ಭಕ್ತಿ ಇನ್ನೂ ಮುಂದುವರಿದುಕೊಂಡು ಹೋಗುತ್ತಿದೆ ಎಂದರು.

ದೇವಸ್ಥಾನಗಳ ಅಭಿವೃದ್ಧಿ ಹಾಗೂ ಅಂಕಸ್ಥಾಪನೆಯಂಥ ಪವಿತ್ರ ಕಾರ್ಯಕ್ರಮಗಳು ಮನಸ್ಸಿಗೆ ಹೆಚ್ಚಿನ ಉಲ್ಲಾಸವನ್ನು ಮೂಡಿಸುವ ಜೊತೆಗೆ ಭಕ್ತಿಮಾರ್ಗವಾಗಿ ಪರಿಣಮಿಸುತ್ತದೆ. ಈ ಸತ್ಕಾರ್ಯಗಳು ತಮ್ಮೆಲ್ಲರ ಜೀವನದ ಯಶಸ್ಸನ್ನು ಸಾಧಿಸಲು ಭಕ್ತಿ ಸ್ಫೂರ್ತಿಯಾಗಬೇಕು. ಅಂಕಸ್ಥಾಪನೆ ಮಾಡುವುದು ದೈವಶಕ್ತಿಯನ್ನು ಗಳಿಸುವುದರ ಮೂಲಕ ರಾಗದ್ವೇಷವನ್ನು ಬಿಡುವುದು ಎಂಬರ್ಥವಾಗಿದೆ. ಹೀಗಾಗಿ ಅಂಕಸ್ಥಾಪನೆ ಬೇಡವಾದ ಗುಣಗಳನ್ನು ದೂರ ಮಾಡುವ ಒಂದು ವಿಧಾನವಾಗಿದೆ ಎಂದು ಶ್ರೀಗಳು ಹೇಳಿದರು.

ಮಲ್ಲನಮೂಲೆ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಕಾರಾಪುರ ಮಠದ ಶ್ರೀ ಬಸವರಾಜ ಸ್ವಾಮಿಗಳು, ಸಾಲೂರು ಮಠದ ಶ್ರೀ ಗುರುಸ್ವಾಮಿಗಳು, ಮರಿಯಾಲ

ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು, ಮಾದಾಪಟ್ಟಣದ ಶ್ರೀ ಸದಾಶಿವ ಸ್ವಾಮಿಗಳು, ಮುಡಿಗುಂಡ ಮಠದ ಶ್ರೀ ಶ್ರೀಕಂಠ ಸ್ವಾಮಿಗಳು ಮುಂತಾದವರು ಹಾಜರಿದ್ದರು.

**ಪರಮಪೂಜ್ಯ ಶ್ರೀಗಳವರಿಂದ ರೈತಮಿತ್ರ ಉದ್ಘಾಟನೆ**

ರೈತ ಸಂಘಟನೆ ಹೋರಾಟಗಳನ್ನು ಕುಗ್ಗಿಸಲು ಕಾಣದ ಕೈಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದು, ಈ ಬಗ್ಗೆ ಎಚ್ಚರ ವಹಿಸಬೇಕು, ಜೊತೆಗೆ, ರೈತರ ಏಳಿಗೆಗೆ ಹೋರಾಟ ಮುಂದುವರಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮೈಸೂರಿನ ಗೌರಿಶಂಕರನಗರದಲ್ಲಿ ದಿನಾಂಕ 2.3.2015 ರಂದು 'ರೈತ ಮಿತ್ರ' ರೈತರ ಉತ್ಪಾದನಾ ಕಂಪನಿ ಉದ್ಘಾಟಿಸಿ ಮಾತನಾಡಿದ ಅವರು, ರೈತನೇ ದೇಶದ ಬೆನ್ನೆಲುಬು. ಆತನ ಬೆವರಿನಿಂದಲೇ ದೇಶಕ್ಕೆ ಅನ್ನ. ಅನೇಕ ಕಷ್ಟಗಳನ್ನು ಕಂಡು, ಜನರಿಗೆ ಅನ್ನ ನೀಡುತ್ತಿದ್ದಾರೆ. ಹಾಗಾಗಿ ರೈತರ ಉಳಿವಿಗೆ ಸಂಘಟನೆಗಳು ಹೋರಾಡಬೇಕು. ಜೊತೆಗೆ ಹೋರಾಟಗಳನ್ನು ಹತ್ತಿಕ್ಕುವವರ ಬಗ್ಗೆ ಎಚ್ಚರ ವಹಿಸಬೇಕು ಎಂದು ಸೂಚ್ಯವಾಗಿ ತಿಳಿಸಿದರು.

ರೈತರ ಏಳಿಗೆಗೆ ಕಂಪನಿ ಆರಂಭವಾಗಿರುವುದು ಉತ್ತಮ ಬೆಳವಣಿಗೆ. ರೈತರ ಪರವಾಗಿ ನಿರಂತರ ಹೋರಾಟಗಳಾಗುತ್ತಿದ್ದರೂ, ಅವರ ಸಮಸ್ಯೆಗಳು ದಿನೇದಿನೇ ಉಲ್ಬಣಗೊಳ್ಳುತ್ತಿವೆ. ಇದನ್ನು ನಿವಾರಿಸಲು ಹೋರಾಟ ಮತ್ತಷ್ಟು ಚುರುಕುಗೊಳ್ಳಬೇಕಿದೆ. ರೈತರು ಎಚ್ಚರಿಕೆಯಿಂದ ಹೆಜ್ಜೆ ಹಾಕಬೇಕು. ತೆಗೆದುಕೊಳ್ಳುವ ನಿರ್ಧಾರಗಳ ಸಾಧಕ-ಬಾಧಕದ ಬಗ್ಗೆ ಸಂಪೂರ್ಣ ಅರಿವಿರಬೇಕು ಎಂದರು.

ಸಮಾರಂಭದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಶ್ರೀ ಕುರುಬೂರು ಶಾಂತಕುಮಾರ್, ಬೆಳಗಾವಿ, ಧಾರವಾಡ, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಹಾಸನ ಸೇರಿದಂತೆ ಹಲವು ಜಿಲ್ಲೆಗಳ ರೈತರು ಭಾಗವಹಿಸಿದ್ದರು.

**ಅರ್ಜಿ ಆಹ್ವಾನವಿಲ್ಲದೆ ಸಾಧಕರನ್ನು ಗುರುತಿಸಿ ಗೌರವಿಸಬೇಕು**

ಅರ್ಜಿ ಆಹ್ವಾನವಿಲ್ಲದೆ ಸಾಧಕರನ್ನು ಗುರುತಿಸಿ ಗೌರವಿಸುವ ಸಂಸ್ಕೃತಿ ಪ್ರೋತ್ಸಾಹಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ದಿನಾಂಕ 5.3.2015 ರಂದು ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಬೆಂಗಳೂರಿನ ಡಾ. ಸಿ. ಸೋಮಶೇಖರ್ ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿ, ಸಮಾಜಕ್ಕೆ ಆದರ್ಶದ ಮಾರ್ಗದರ್ಶಿಯಾಗಿ ಪ್ರತಿಷ್ಠಾನ ಕೆಲಸ ನಿರ್ವಹಿಸಲಿ ಎಂದು ಶುಭ ಹಾರೈಸಿದರು.



'ಸಂಸ್ಕೃತಿ ಸಂಗಮ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರವಚನಕಾರ ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಯಾವುದಾದರೂ ಪ್ರಶಸ್ತಿ, ಪುರಸ್ಕಾರ ಎಂದರೆ ಹೆದರುವ ಸ್ಥಿತಿ ಬಂದಿದೆ. ಯಾರನ್ನು ಹಿಡಿದು ಪ್ರಶಸ್ತಿ ಪಡೆದ್ರಿ? ಎಂದು ಕೇಳುವ ಸ್ಥಿತಿ ಬಂದಿರುವುದು ನೋವಿನ ಸಂಗತಿ ಎಂದರು.

ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿದರು. ನಾಡೋಜ ಡಾ. ಚಂದ್ರಶೇಖರ ಕಂಬಾರ ಕಾರ್ಯಕ್ರಮ ಉದ್ಘಾಟಿಸಿದರು. ಪ್ರತಿಷ್ಠಾನದ ಶ್ರೀಮತಿ ಎನ್. ಸರ್ವಮಂಗಳ ಉಪಸ್ಥಿತರಿದ್ದರು.

**ಸಂಸ್ಕೃತಿ ಸಂಗಮ ಪ್ರಶಸ್ತಿ ಪುರಸ್ಕೃತರು :** ಪದ್ಮಶ್ರೀ ಪುರಸ್ಕೃತ ಬನ್ನಂಜೆ ಗೋವಿಂದಾಚಾರ್ಯ (ದಾಸ ಸಾಹಿತ್ಯ), ಗೊ.ರು. ಚನ್ನಬಸಪ್ಪ (ವಚನ ಸಾಹಿತ್ಯ), ಡಾ. ಎಚ್.ಜೆ. ಲಕ್ಕಪ್ಪಗೌಡ (ಜಾನಪದ ಸಾಹಿತ್ಯ), ಎಚ್.ಆರ್. ಲೀಲಾವತಿ (ಸಂಗೀತ ಕ್ಷೇತ್ರ).

ಸಮಾರಂಭದಲ್ಲಿ ಮಾಜಿ ಸಚಿವ ಶ್ರೀ ಎಂ.ವಿ. ರಾಜಶೇಖರನ್, ಡಾ. ಚಂದ್ರಶೇಖರ ಕಂಬಾರ, ಶ್ರೀ ಜರಗನಹಳ್ಳಿ ಶಿವಶಂಕರ್, ಡಾ. ಸಿ. ಸೋಮಶೇಖರ್ ಉಪಸ್ಥಿತರಿದ್ದರು.

**ಗ್ರಾಮೀಣ ಯುವಜನತೆ ಜ್ಞಾನಕ್ಷೇತ್ರಕ್ಕೆ ತಮ್ಮನ್ನು ತೆರೆದುಕೊಳ್ಳಬೇಕಿದೆ**

ದಿನಾಂಕ 6.3.2015 ರಂದು ಹೆಚ್.ಡಿ. ಕೋಟೆ ತಾಲ್ಲೂಕಿನ ಮನುಗನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಜೆಎಸ್‌ಎಸ್ ಪ್ರೌಢಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ನಮ್ಮ ಹಿರಿಯ ಜಗದ್ಗುರುಗಳವರು ಗ್ರಾಮೀಣ ಜನತೆ ಹೆಚ್ಚು ವಿದ್ಯಾವಂತರಾಗಲಿ ಎನ್ನುವ ದೃಷ್ಟಿಯಿಂದ ಅಂದಿನ ದಿನಗಳಲ್ಲಿಯೇ ಮೈಸೂರು ನಗರದಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ತೆರೆದರು. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರೌಢಶಾಲೆಗಳು, ವಿದ್ಯಾರ್ಥಿನಿಲಯಗಳನ್ನು ತೆರೆದರು. ನಗರ ಪ್ರದೇಶಕ್ಕಷ್ಟೇ ಸೀಮಿತವಾಗಿದ್ದ ವಿದ್ಯೆ ಗ್ರಾಮೀಣ ಜನತೆಯ ಮಕ್ಕಳಿಗೂ ವಿಸ್ತರಿಸಲಿ ಎಂಬುದು ಅವರ ಉದ್ದೇಶವಾಗಿತ್ತು. ನಮ್ಮ ರೈತ ಸಮುದಾಯ ಮಕ್ಕಳಿಗೆ ಆಸ್ತಿಯನ್ನು ಮಾಡುವುದರ ಬದಲು ವಿದ್ಯೆಯನ್ನು ಕೊಡುವುದರ ಮೂಲಕ ಅವರನ್ನೇ ಆಸ್ತಿಯನ್ನಾಗಿಸಬೇಕು ಎಂದು ಪರಮಪೂಜ್ಯರು ತಿಳಿಸಿದರು.

ಉದ್ಘಾಟನೆ ಮಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಯು.ಟಿ. ಖಾದರ್‌ರವರು ಮಾತನಾಡಿ, ಶಾಲೆ ಮಕ್ಕಳಿಗೆ ಎಲ್ಲವನ್ನೂ ಕಲಿಸಿಕೊಡುವುದಿಲ್ಲ. ಶಾಲೆಯಲ್ಲೇ ತಮ್ಮ ಮಕ್ಕಳು ಎಲ್ಲವನ್ನೂ ಕಲಿತುಬಿಡುತ್ತಾರೆ ಎಂದು ಪೋಷಕರು ಸುಮ್ಮನೆ ಕೂರಬಾರದು. ಮಕ್ಕಳಿಗೆ ಮನೆಯೇ ಮೊದಲ

ಪಾಠಶಾಲೆ. ಹಾಗಾಗಿ ಪೋಷಕರು ತಮ್ಮ ಮಕ್ಕಳು ದೇಶಕ್ಕೆ ಉತ್ತಮ ಪ್ರಜೆಗಳಾಗುವಂತೆ ರೂಪಿಸಬೇಕು ಎಂದು ಸಲಹೆ ನೀಡಿದರು.

ಕಂದಾಯ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್‌ರವರು ಅಧ್ಯಕ್ಷತೆ ವಹಿಸಿದ್ದರು. ಶಾಸಕ ಶ್ರೀ ಚಿಕ್ಕಮಾದು, ಮಾಜಿ ಸಚಿವರಾದ ಶ್ರೀ ಎಂ. ಶಿವಣ್ಣ, ಶ್ರೀ ಚಿಕ್ಕಣ್ಣ, ಮೈಕ್ಯಾಪ್ ಸಂಸ್ಥೆ ನಿರ್ದೇಶಕ ಶ್ರೀ ವಿಲಿಯಂ ಡಿಸೋಜ, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಡಾ. ಪುಷ್ಪಾ ಅಮರ್‌ನಾಥ್, ಉಪಾಧ್ಯಕ್ಷ ಶ್ರೀ ಮಾದಪ್ಪ ಮುಂತಾದವರು ಪಾಲ್ಗೊಂಡಿದ್ದರು.

**ಈ ಭಾಗದ ಜನತೆಯ ಕನಸು ನನಸಾಯಿತು**

ನಿರಂತರವಾಗಿ ಬರಗಾಲಕ್ಕೆ ತುತ್ತಾಗುತ್ತಿದ್ದ ಚಾಮರಾಜನಗರ ಗುಂಡ್ಲುಪೇಟೆಯ ಭಾಗದ ಜನ ತಮ್ಮ ಊರಿನ ಕೆರೆಗಳಿಗೆ ನೀರು ತುಂಬಿಸುವ ಕನಸನ್ನು ಕಾಣುತ್ತಿದ್ದರು. ಕರ್ನಾಟಕ ಸರ್ಕಾರ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ಕೊಡುವುದರ ಮೂಲಕ ಈ ಭಾಗದ ಎಲ್ಲ ಕೆರೆಗಳು ತುಂಬಿವೆ, ಜನತೆಯ ಕನಸು ಈ ಮೂಲಕ ನನಸಾಗಿದೆ ಎಂದು ಪರಮಪೂಜ್ಯರು ತಿಳಿಸಿದರು.

ದಿನಾಂಕ 8.3.2015 ರಂದು ಚಾಮರಾಜನಗರ ತಾಲ್ಲೂಕಿನ ಹರವೆ ಗ್ರಾಮದಲ್ಲಿ ಶ್ರೀ ಚನ್ನಬಸವರಾಜ ಸ್ವಾಮಿಗಳ ಗದ್ದಿಗೆ ಉದ್ಘಾಟನೆ, ಬೆಳ್ಳಿ ಕೊಳಗ ಧಾರಣೆ, ಹಾಗೂ ಸಾಮೂಹಿಕ ವಿವಾಹ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡಿ, ಕುಡಿಯುವ ನೀರಿಗಾಗಿ ಕಬಿನಿ ಜಲಾಶಯದಿಂದ ಜಿಲ್ಲೆಯ 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಿ, ಈ ಭಾಗದ ರೈತರು ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಮಾತನಾಡಿ, ಸಾಮೂಹಿಕ ವಿವಾಹಗಳನ್ನು ಹೆಚ್ಚೆಚ್ಚು ನಡೆಸಿ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಸಮಾರಂಭದಲ್ಲಿ ಪಡಗೂರು ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು, ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು, ಜಿ.ಪಂ. ಅಧ್ಯಕ್ಷ ಶ್ರೀ ಡಿ.ಸಿ. ನಾಗೇಂದ್ರ, ಮಾಜಿ ಸಚಿವ ಶ್ರೀ ಎಂ. ಮಹದೇವ್, ಶಾಸಕ ಶ್ರೀ ಗೋ. ಮಧುಸೂದನ್, ಮಾಜಿ ಶಾಸಕರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಎಸ್. ಬಾಲರಾಜು, ಶ್ರೀ ಜಿ.ಎನ್. ನಂಜುಂಡಸ್ವಾಮಿ, ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ,



ಮುಖಂಡರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

**'ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ' ಪ್ರದಾನ**

ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಹಿರಿಯ ಪತ್ರಕರ್ತ ಶ್ರೀ ಕೆ.ವಿ. ಶ್ರೀನಿವಾಸನ್ (ಬ್ರದರ್) ಅವರಿಗೆ 2014ರ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಿನಾಂಕ 16.3.2015ರಂದು ಪತ್ರಕರ್ತರ ಸಂಘದ ಸಹಯೋಗದೊಂದಿಗೆ ಸಂಘದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀ ಶ್ರೀನಿವಾಸನ್, ಪತ್ರಿಕೋದ್ಯಮ ವಿದ್ಯಾರ್ಥಿಗಳು ಸೇವಾಮನೋಭಾವ ಹೊಂದಿರಬೇಕು. ಪತ್ರಿಕೋದ್ಯಮ ವೃತ್ತಿಗೆ ಬಂದರೆ ಹಣ ಮಾಡಬಹುದು ಎಂಬ ಭ್ರಮೆ ಇರಬಾರದು. ದಲಿತರು, ಶೋಷಿತರ ನೋವಿಗೆ ಮಿಡಿಯುವ ಮನಸ್ಸು ನಮ್ಮಲ್ಲಿ ಇರಬೇಕೆಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಶ್ರೀ ಎಸ್.ಪಿ. ಮಂಜುನಾಥ್ ಮಾತನಾಡಿ, ಸಮಾಜ ತಿದ್ದುವ ಕಾರ್ಯದಲ್ಲಿ ಮಾಧ್ಯಮ ತೊಡಗಿಸಿಕೊಂಡಿದೆ. ಮಾಧ್ಯಮ ತನ್ನ ಜವಾಬ್ದಾರಿ ಅರಿತು ಸಮಾಜವನ್ನು ಮತ್ತಷ್ಟು ಉತ್ತಮ ಹಾದಿಯೆಡೆಗೆ ಕೊಂಡೊಯ್ಯಲು ಪ್ರಯತ್ನ ನಡೆಸಬೇಕೆಂದು ಹೇಳಿದರು.

ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಶ್ರೀ ಕೃಷ್ಣವಟ್ಟಂ, ಮೇಯರ್ ಶ್ರೀ ಆರ್. ಲಿಂಗಪ್ಪ, ಸಂಘದ ಅಧ್ಯಕ್ಷ ಶ್ರೀ ಕೆ. ದೀಪಕ್ ಮುಂತಾದವರು ಪಾಲ್ಗೊಂಡಿದ್ದರು.

**ದೇಶೀಯ ಸಂಸ್ಕೃತಿ ಎಲ್ಲ ವಯೋಮಾನದವರನ್ನೂ ಒಳಗೊಳ್ಳುತ್ತದೆ**

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 25.3.2015ರಂದು ಆಯೋಜಿಸಿದ್ದ 'ಯುಗಾದಿ ಕುಟುಂಬ ಮಿಲನ - 2015' ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಕುಟುಂಬಗಳು ಒಂದೇ ಸೂರಿನಡಿ ಸೇರಿ ಸಂತಸ ಕ್ಷಣಗಳನ್ನು ಹಂಚಿಕೊಂಡವು. ಎಲ್ಲ ವಯೋಮಾನದವರೂ ಹಾಗೂ ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಂತೋಷಪಟ್ಟರು.

ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯ ಜಗದ್ಗುರುಗಳವರು ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಹಬ್ಬಗಳ ಆಚರಣಾ ಪದ್ಧತಿ ಇದೆ. ಹಬ್ಬಗಳನ್ನು ಉತ್ತರ ಭಾರತದಲ್ಲಿ ಒಂದು ರೀತಿ ಆಚರಿಸಿದರೆ ದಕ್ಷಿಣ ಭಾರತದಲ್ಲಿ ಬೇರೆ ರೀತಿಯಲ್ಲಿ ವಿಶಿಷ್ಟವಾಗಿ ಆಚರಿಸಲಾಗು

ತ್ತದೆ. ಹಳ್ಳಿಗಾಡಿನಲ್ಲಿ ಕೃಷಿಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಆಚರಿಸುತ್ತಾರೆ. ಈ ನಿಟ್ಟಿನಲ್ಲಿ ಯುಗಾದಿಯನ್ನು ಎಲ್ಲ ವಯೋಮಾನದವರನ್ನು ಒಂದೆಡೆ ಸೇರಿಸಿ ದೇಶೀಯ ಸಂಸ್ಕೃತಿ, ಪರಂಪರೆ ಬಿಂಬಿಸುವ ಸ್ಪರ್ಧೆ ಮತ್ತು ಆಟಗಳನ್ನು ಆಯೋಜಿಸಿರುವುದು ಸಂತೋಷದ ತಂದಿದೆ ಎಂದರು.

ಸಮಾರಂಭದಲ್ಲಿ 'ಯುಗಾದಿಯಿಂದ ಯುಗಾದಿಗೆ' ಎಂಬ ಕ್ಯಾಲೆಂಡರ್ ಅನ್ನು ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿಯವರು ಬಿಡುಗಡೆ ಮಾಡಿದರು. ದೇಸೀ ಆಟದಲ್ಲಿ 750 ಮಂದಿ ಭಾಗವಹಿಸಿದ್ದರು.

**ಮರಾಠಿಗರಿಗೂ ತಾವು ಕನ್ನಡಿಗರು ಎಂಬ ಭಾವನೆ ಬರಬೇಕು**

ದಿನಾಂಕ 28.3.2015 ರಂದು ಬೆಂಗಳೂರಿನ ಗೋಸಾಯಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾಗಿ ಆಯ್ಕೆಯಾದ ಬುದ್ಧಿ ಯೋಗಾನಂದ ಸ್ವಾಮೀಜಿಯವರ ಪೀಠಾರೋಹಣ ಪಟ್ಟಾಭಿಷೇಕ ಮಹೋತ್ಸವದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯ ಜಗದ್ಗುರುಗಳವರು, ಸಾಹಸ ಬಲಿದಾನಕ್ಕೆ ಮರಾಠ ಸಮಾಜದ ಕೊಡುಗೆ ಅನನ್ಯವಾದುದು. ಗಡಿಯಲ್ಲಿರುವ ಮರಾಠಿಗರಿಗೂ ತಾವು ಕನ್ನಡಿಗರು ಎಂಬ ಭಾವನೆ ಬರಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಸ್ವಾಮೀಜಿ ಕನಕಪುರದ ಶ್ರೀ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿಯವರು ಆಶೀರ್ವಚನ ನೀಡಿದರು.

ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಸಮಾರಂಭವನ್ನು ಉದ್ಘಾಟಿಸಿದರು. ಸಚಿವರಾದ ಶ್ರೀಅನಂತಕುಮಾರ್, ಶ್ರೀಹೆಚ್. ಆಂಜನೇಯ ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯಾ ಸಮಾರಂಭದಲ್ಲಿ ಭಾಗವಹಿಸಿದ್ದರು.

**ಡಾ. ಎಸ್.ಎಂ. ವೃಷಭೇಂದ್ರಸ್ವಾಮಿಯವರ ಪುಣ್ಯಸ್ಮರಣೆ**

ದಿನಾಂಕ 4.4.2015 ರಂದು ಧಾರವಾಡದಲ್ಲಿ ನಡೆದ ಲಿಂಗೈಕ್ಯ ಡಾ. ಎಸ್.ಎಂ. ವೃಷಭೇಂದ್ರಸ್ವಾಮಿಯವರ ಪುಣ್ಯಸ್ಮರಣೆಯ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು ಕನ್ನಡ ಕಟ್ಟಲು ಮೂರು ದಶಕಗಳ ಕಾಲ ವೃಷಭೇಂದ್ರ ಸ್ವಾಮಿಗಳು ಶ್ರಮಿಸಿದ್ದರು ಎಂದು ತಿಳಿಸಿದರು.

ಸ್ಮರಣೋತ್ಸವದಲ್ಲಿ ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ರಂಗರಾಜು ಯಲಬುರ್ಗ, ಡಾ. ಶಾಂತಾ ಇಮ್ರಾಪುರ, ಹೊಸಪೇಟೆ ಶ್ರೀ ಸಂಗನಬಸವ ಸ್ವಾಮೀಜಿ, ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ಮುಂತಾದವರು ವೃಷಭೇಂದ್ರ ಸ್ವಾಮಿಯವರ ಗುಣಗಾನ ಮಾಡಿದರು.



**ನಿಡಸೋಸಿ ಶ್ರೀಗಳಿಂದ ಶೈಕ್ಷಣಿಕ, ಸಾಹಿತ್ಯಕ ಪ್ರಗತಿ**

ವೀರಶೈವ ಮಠಗಳಲ್ಲಿ ವಿಶಿಷ್ಟ ಪರಂಪರೆ ಹೊಂದಿರುವ, ಮೂರು ಶತಮಾನಗಳ ಚರಿತ್ರೆ ಇರುವ ನಿಡಸೋಸಿ ಮಠ ಭಕ್ತರ ಸಹಕಾರದಿಂದ ಉತ್ತಮ ರೀತಿಯಿಂದ ಕೆಲಸ ಮಾಡುತ್ತಿದ್ದು, ಪೀಠಾಧಿಕಾರಿ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಕ್ರಿಯಾಶೀಲ ದಿವ್ಯಶಕ್ತಿಯೇ ಪ್ರಾಮುಖ್ಯವಾಗಿದೆಯೆಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ದಿನಾಂಕ 4.4.2015ರಂದು ನಿಡಸೋಸಿಯಲ್ಲಿ ಶ್ರೀಮನ್ನಿರಂಜನ ಜಗದ್ಗುರು ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳ ಪೀಠಾರೋಹಣ ರಜತ ಮಹೋತ್ಸವದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯರು, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕರ್ನಾಟಕ ಮಠಗಳು ಕೇರಳ ರಾಜ್ಯಕ್ಕಿಂತಲೂ ಅಕ್ಷರ ಸಂಸ್ಕೃತಿ ಬೆಳೆಸುತ್ತಿರುವಲ್ಲಿ ಮುಂಚೂಣಿಯಲ್ಲಿದ್ದು ಉತ್ತಮ ಶಿಕ್ಷಣ ನೀತಿ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಅಹರ್ನಿಶಿ ಕೆಲಸ ಮಾಡುತ್ತಿವೆ. ನಿಜಲಿಂಗೇಶ್ವರ ಮತ್ತು ಶಿವಲಿಂಗೇಶ್ವರ ಹೆಸರಿನಿಂದ ಈಶ್ವರ ತೆಗೆದರೆ ನಿಜದರ್ಥ ಸತ್ಯ ಮತ್ತು ಶಿವನರ್ಥ ಹರ ಹೀಗೆ ಸತ್ಯ ಶಿವನ ಹೊಂದಾಣಿಕೆಯಿಂದ ಸೌಂದರ್ಯವನ್ನು ಕಾಣಬಹುದಾಗಿದೆ. ಕಾಯಕದಲ್ಲಿ ನಂಬಿಕೆ ಇಟ್ಟು ಬದುಕು ಸಾಗಿಸ ಬೇಕು. ಸಮಾನತೆಯ ತತ್ವದಲ್ಲಿ ಬದುಕಿ ನಾವೆಲ್ಲರೂ ಜೀವನ ಪಾವನ ಮಾಡಿಕೊಳ್ಳ ಬೇಕು. ನಾಡಿನ ಕಲೆ, ಸಂಸ್ಕೃತಿ ಜೊತೆಗೆ ಜಾತಿ-ಮತಗಳ ಭೇದವಿಲ್ಲದೆ ಮಾಡುತ್ತಿರುವ ಪೂಜ್ಯರ ಕಾರ್ಯವು ಸ್ತುತ್ಯಾರ್ಹವಾಗಿದೆಯೆಂದರು.

ಸಣ್ಣ ಕೈಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಸತೀಶ್ ಜಾರಕಿಹೊಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸುದೀರ್ಘ ಇತಿಹಾಸ ಹೊಂದಿರುವ ಜಗದ್ಗುರು ಪೀಠವು ಈ ಭಾಗದಲ್ಲಿ ಧಾರ್ಮಿಕ ಕ್ಷೇತ್ರದ ಜತೆಗೆ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳ ಕಲ್ಪವೃಕ್ಷವಾಗಿ ನಗರದಲ್ಲಿ ಲಭ್ಯವಿರುವ ಎಲ್ಲ ಬಗೆಯ ಶಿಕ್ಷಣಗಳ ಸೌಲಭ್ಯ ಒದಗಿಸುತ್ತಿರುವುದು ಪೂಜ್ಯರ ಸೇವಾಕೈಂಕರ್ಯದ ಪ್ರತೀಕವಾಗಿದೆಯೆಂದರು,

ಸಮಾರಂಭದಲ್ಲಿ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು, ಹಂದಿಗುಂದದ ಶ್ರೀ ಶಿವಾನಂದ ಸ್ವಾಮಿಗಳು, ಸಂಸದ ಶ್ರೀ ಪ್ರಕಾಶ್ ಹುಕ್ಕೇರಿ, ಮಾಜಿ ಸಚಿವ ಶ್ರೀ ವೀರಕುಮಾರ ಪಾಟೀಲ, ಶ್ರೀ ಮಹಾಂತೇಶ ಕವಟಗಿಮಠ, ಶ್ರೀ ಮಹಾಂತೇಶ ಕೌಜಲಗಿ ಮುಂತಾದವರು ಉಪಸ್ಥಿತರಿದ್ದರು.

**ಬಸವ ಜಯಂತಿ ಆಚರಣೆ ಹಾಗೂ ಬಸವ ರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭ**

ಮೈಸೂರಿನ ಕಲಾಮಂದಿರದಲ್ಲಿ ದಿನಾಂಕ 21.4.2015 ರಂದು ನಡೆದ ಬಸವ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಶ್ರೀ

ಸಿದ್ಧರಾಮಯ್ಯನವರು ಜಡ್ಡುಗಟ್ಟಿದ ಸಮಾಜಕ್ಕೆ ಚಲನಶೀಲತೆಯ ಚಕ್ರದ ಸ್ಪರ್ಶ ನೀಡಿದರೆ ಸಮಾಜ ಬದಲಾವಣೆ ಕಾಣಲು ಸಾಧ್ಯ. ಬಸವಣ್ಣನವರ ಕಾಲದಿಂದಲೂ ಸಮಾಜ ಪರಿವರ್ತನೆಗೆ ವಿರೋಧಿಸುವ ಜನರಿದ್ದಂತೆ ಈಗಲೂ ಮುಂದುವರಿದಿದ್ದಾರೆ. ದೇಶದಲ್ಲಿ ಜಾತಿ ವ್ಯವಸ್ಥೆ ಬಹಳ ಆಳವಾಗಿ ಬೇರೂರಿದೆ. ಕಾಲಕಾಲಕ್ಕೆ ಅದಕ್ಕೆ ಗೊಬ್ಬರ ನೀರನ್ನು ಹಾಕಿ ಅದು ಅಳಿಯದಂತೆ ನೋಡಿಕೊಳ್ಳಲಾಗುತ್ತಿದೆ. ಇದು ಭಾರತದಂತಹ ದೇಶಕ್ಕೆ ಕಳಂಕ. ಜಡ್ಡುಗಟ್ಟಿರುವ ಸಮಾಜದಿಂದ ಬದಲಾವಣೆಯನ್ನು ನಿರೀಕ್ಷಿಸುವುದು ಕಷ್ಟದ ಕೆಲಸವಾಗಿದೆ ಎಂದರು.

ಜಯಂತಿ ಸಮಾರಂಭದಲ್ಲಿ ಕರ್ನಾಟಕ ಸರ್ಕಾರ ಕೊಡಮಾಡುವ "ಬಸವ ರಾಷ್ಟ್ರೀಯ ಪುರಸ್ಕಾರ"ವನ್ನು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಶಿವಾಯತ ಧರ್ಮಗುರು ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಗಳವರಿಗೆ ನೀಡಿ ಗೌರವಿಸಿದರು.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ವಿ. ಶ್ರೀನಿವಾಪ್ರಸಾದ್, ಸಚಿವ ಎಚ್.ಎಸ್. ಮಹಾದೇವ ಪ್ರಸಾದ್, ಮಹಾಪೌರ ಆರ್. ಲಿಂಗಪ್ಪ, ಶಾಸಕ ಶ್ರೀ ವಾಸು, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಡಾ. ಬಿ. ಪುಷ್ಪ ಅಮರ್‌ನಾಥ್, ಶಾಸಕ ಎಂ.ಕೆ. ಸೋಮಶೇಖರ್, ಗೋ. ಮಧುಸೂಧನ್, ಮರಿತಿಬ್ಬೇಗೌಡ, ನಿಗಮ ಮಂಡಳಿ ಅಧ್ಯಕ್ಷರಾದ ಎಸ್.ಸಿ. ಬಸವರಾಜು, ಸಿ. ದಾಸೇಗೌಡ ಮುಂತಾದವರು ಭಾಗವಹಿಸಿದ್ದರು

## ನಂಬಿಕೆಯಿದ್ದ ಕಡೆ ಭಗವಂತನ ದರ್ಶನವಿರುತ್ತದೆ

ದಿನಾಂಕ 24.4.2015 ರಂದು ನಂಜನಗೂಡು ತಾಲ್ಲೂಕಿನ ಇತಿಹಾಸಪ್ರಸಿದ್ಧ ನಗರ್ಲೆ ಗ್ರಾಮದ ಶ್ರೀ ಮಾಳಿಗೇಶ್ವರಿ ಮತ್ತು ಈರಣ್ಣದೇವರ ದೇವಾಲಯಗಳ ಕಳಸಾರೋಹಣ ಮತ್ತು ಸಪ್ತಮಾತೃಕೆಯರ ವಿಗ್ರಹಗಳ ಪ್ರತಿಷ್ಠಾಪನೆ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಸಮಾರಂಭದಲ್ಲಿ ಆಶೀರ್ವಚನ ನೀಡಿದ ಪರಮಪೂಜ್ಯರು ನಂಬಿಕೆಯಿದ್ದ ಕಡೆ ಭಗವಂತನ ದರ್ಶನವಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಭಗವಂತನ ಬಗ್ಗೆ ವಿಶ್ವಾಸ ನಂಬಿಕೆ ಜೊತೆಗೆ ಪ್ರೀತಿಪೂರ್ವಕವಾದ ಭಕ್ತಿ ಉಳ್ಳವರಾಗಬೇಕೆಂದು ಕರೆ ನೀಡಿದರು.

ನಗರ್ಲೆ ಗ್ರಾಮದ ಇತಿಹಾಸವನ್ನು ಸ್ಮರಣೆ ಮಾಡಿಕೊಂಡ ಪರಮಪೂಜ್ಯರು ಸುತ್ತೂರು ಮಠದ ಸುತ್ತಮುತ್ತಲಿರುವ ನಗರ್ಲೆ, ಕುಪ್ಪರವಳ್ಳಿ ಗ್ರಾಮಗಳು ಸುತ್ತೂರು ಮಠದೊಂದಿಗೆ ಇರುವ ಅವಿನಾಭಾವಸಂಬಂಧವನ್ನು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಲ್ಲನಮೂಲೆ ಮಠಾಧ್ಯಕ್ಷರಾದ ಶ್ರೀ ಚೆನ್ನಬಸವ ಸ್ವಾಮಿಗಳು ಗ್ರಾಮಗಳಲ್ಲಿ ಶಾಂತಿ ನೆಮ್ಮದಿ ನೆಲೆಸಬೇಕಾದರೆ ಇಂತಹ ಧಾರ್ಮಿಕ ಕಾರ್ಯಗಳಿಂದ ಸಾಧ್ಯವಾಗುತ್ತದೆ ಎಂದರು.



ಈ ಧಾರ್ಮಿಕ ಸಮಾರಂಭದಲ್ಲಿ ವಾಟಾಳು ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಜಂಗಮಪ್ರೇಮಿಗಳಿರುವ ಈ ಗ್ರಾಮದಲ್ಲಿ ಇಂತಹ ಉತ್ತಮವಾದ ಕಾರ್ಯಕ್ರಮ ನಡೆಯುತ್ತಿರುವುದು ಸಂತೋಷವಾಗಿದೆ ಎಂದರು.

ಸಮಾರಂಭದಲ್ಲಿ ಕನಕಪುರದ ಮಠಾಧ್ಯಕ್ಷರಾದ ಮುಮ್ಮಡಿ ನಿರ್ವಾಣ ಸ್ವಾಮಿಗಳು ನಗರ್ಲೆ ಶಿವಕುಮಾರ ರಚಿಸಿರುವ ನಗರ್ಲೆ ಗ್ರಾಮದ ಒಂದು ನೋಟ "ಹೊಂಬಾಳೆ" ಕೃತಿಯನ್ನು ಬಿಡುಗಡೆ ಮಾಡಿದರು.

ಹರವೆ ಶ್ರೀ ಸರ್ಪಭೂಷಣ ಸ್ವಾಮಿಗಳು, ಬೆನಕನಹಳ್ಳಿ ಶ್ರೀ ಮಹದೇವ ಸ್ವಾಮಿಗಳು ಮಾತನಾಡಿದರು. ದೇವೀರಮ್ಮನಹಳ್ಳಿ ಶರಣ ಸಂಗಮ ಮಠಾಧ್ಯಕ್ಷ ಶ್ರೀ ನಾಗರಾಜೇಂದ್ರ ಸ್ವಾಮಿಗಳು, ಚುಂಚನಹಳ್ಳಿ ಶ್ರೀ ಚೆನ್ನಬಸವ ಸ್ವಾಮಿಗಳು ಸೇರಿದಂತೆ ಹತ್ತಾರು ಮಠಾಧೀಶರು ಭಾಗವಹಿಸಿದ್ದರು. ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ ಯವರು ಮುಖ್ಯ ಭಾಷಣಕಾರರಾಗಿದ್ದರು.

## ದೇವರಲ್ಲಿ ಅಚಲ ನಂಬಿಕೆ ಬೇಕು

ದೇವಸ್ಥಾನಗಳನ್ನು ನಿರ್ಮಿಸುವುದಷ್ಟೇ ಅಲ್ಲ, ದೇವರು ಮತ್ತು ಧರ್ಮದ ಬಗ್ಗೆ ಅಚಲವಾದ ನಂಬಿಕೆ ಇರಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ದಿನಾಂಕ 27.4.2015 ರಂದು ಹುಣಸೂರು ಪಟ್ಟಣದ ಲಕ್ಕುಣಿಕೆ ರಂಗನಾಥ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶನೇಶ್ವರಸ್ವಾಮಿ ದೇವಾಲಯದ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಪರಮ ಪೂಜ್ಯರು, ಆಧುನಿಕತೆಗೆ ಮಾರುಹೋಗುತ್ತಿರುವ ಇತ್ತೀಚಿನ ದಿನಗಳಲ್ಲಿ ದೇವಾಲಯ ಗಳನ್ನು ನಿರ್ಮಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಸಮಾರಂಭದಲ್ಲಿ ಶಾಸಕರಾದ ಹೆಚ್.ಪಿ. ಮಂಜುನಾಥ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಮಾದಳ್ಳಿ ಮಠದ ಶ್ರೀ ಸಾಂಬಸದಾಶಿವ ಸ್ವಾಮಿಗಳು, ಗಾವಡಗೆರೆಯ ಗುರುಲಿಂಗ ಜಂಗಮದೇವರ ಮಠದ ಶ್ರೀ ನಟರಾಜ ಸ್ವಾಮೀಜಿ, ಶ್ರೀಮತಿ ಕಲಾವತಿ ಬಸಪ್ಪ ಮುಂತಾದವರು ಭಾಗವಹಿಸಿದ್ದರು.

## ಬಸವೇಶ್ವರ ದೂರದೃಷ್ಟಿಯ ಮಾನವತಾವಾದಿ

ಸಮಾನತೆಯ ಪರಿಕಲ್ಪನೆಯನ್ನು ಬೋಧಿಸಿದ ಬಸವಣ್ಣ ದೂರದೃಷ್ಟಿ ಹೊಂದಿದ್ದ ಮಹಾನ್ ಮಹಾನವತಾವಾದಿ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ದಿನಾಂಕ 29.4.2015 ರಂದು ಗುಂಡ್ಲುಪೇಟೆಯಲ್ಲಿ ನಡೆದ ಬಸವ ಜಯಂತ್ಯುತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಬಾಲ ಬಸವನಿಂದ ಜಗಜ್ಯೋತಿ ಬಸವೇಶ್ವರ ಆದ ಅವರ ಸಾಧನೆ, ಸಮಾನತೆಯ ಮಂತ್ರ ಸಾರ್ವಕಾಲಿಕವಾದುದು ಎಂದರು.

ಸಹಕಾರ ಸಚಿವ ಎಚ್.ಎಸ್. ಮಹದೇವ ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಿದರು. ಪಡುಗೂರು ಅಡವಿ ಮಠಾಧ್ಯಕ್ಷರಾದ ಶಿವಲಿಂಗೇಂದ್ರ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಹಂಗಳ ಹಳ್ಳದ ಮಠಾಧ್ಯಕ್ಷ ಜಡೇಸ್ವಾಮಿಗಳು ಬಸವೇಶ್ವರರ ಭಾವಚಿತ್ರ ಅನಾವರಣಗೊಳಿಸಿದರು.

ಚಿಕ್ಕತುಪ್ಪೂರು ಶಿವಪೂಜಾ ಮಠದ ಚನ್ನವೀರಸ್ವಾಮಿಗಳು, ಕಬ್ಬಳ್ಳಿ ಪಟ್ಟಣ ಮಠದ ಶ್ರೀ ಚನ್ನಬಸವಸ್ವಾಮಿಗಳು, ಗೋಪಾಲಪುರ ಕಬ್ಬಿಣ ಕೋಲೇಶ್ವರ ಮಠದ ಶ್ರೀ ಗಂಗಾಧರಸ್ವಾಮಿಗಳು, ಬೊಮ್ಮನಹಳ್ಳಿ ಪಟ್ಟದ ಮಠದ ಶ್ರೀ ಇಮ್ಮಡಿ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಸೇರಿದಂತೆ ಹಲವು ಮಠಾಧೀಶರು ವಿವಿಧ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು.

## ಶಿಬಿರಗಳು

### ಶ್ರಮಜೀವನದಿಂದ ಮಾತ್ರ ಮಾನವನ ಬದುಕು ಸಾರ್ಥಕ

"ಶ್ರಮಜೀವನದಿಂದ ಮಾತ್ರ ಮಾನವನ ಬದುಕು ಸಾರ್ಥಕವಾಗುತ್ತದೆ" ಎಂದು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಸರ್ವಮಂಗಳ ಶಂಕರ್‌ರವರು ನುಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶುಶ್ರೂಷಕರಿಗಾಗಿ ಆಯೋಜಿಸಿದ್ದ ಮೂರು ದಿನಗಳ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, "ಪದವಿಯಿಂದಷ್ಟೇ ವ್ಯಕ್ತಿ ಪರಿಪೂರ್ಣನಾಗಲು ಸಾಧ್ಯವಿಲ್ಲ. ಶುಶ್ರೂಷಕರ ವೃತ್ತಿ ಪವಿತ್ರವಾದದ್ದು. ರೋಗಿಯ ಆತ್ಮವಿಶ್ವಾಸವನ್ನು ಉತ್ತಮಪಡಿಸುವಲ್ಲಿ ಶುಶ್ರೂಷಕಿಯರ ಪಾತ್ರ ಮಹತ್ತರವಾದುದು ಎಂದು ಹೇಳಿದರು.

ಸಹಕಾರ ಸಚಿವರ ಕಾರ್ಯದರ್ಶಿಗಳಾದ ಶ್ರೀ ಕೆ.ಸಿ. ವಿರೂಪಾಕ್ಷ ಅವರು ಮಾತನಾಡಿ "ಸಮಾಜಸೇವೆ ಮಾಡಲು ಸಿಗುವ ಅವಕಾಶಗಳು ಯಾವುದೇ ಸಮಯದಲ್ಲಿ ದೊರೆತರೂ ಅವನ್ನು ನಿರಾಕರಿಸಬಾರದು".

ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು "ಹೃದಯದಲ್ಲಿ ಅನುಕಂಪ, ಕರುಣೆ, ಮುಖದಲ್ಲಿ ಪ್ರಸನ್ನಭಾವದೊಂದಿಗೆ ರೋಗಿಗಳಿಗೆ



ಉಪಚರಿಸುವಂತಾದರೆ, ರೋಗಬಾಧೆ ನಿವಾರಣೆ ಯಾಗುತ್ತದೆ. ಉಪಚಾರ ಮಾಡುವಾಗ ಯಾವುದೇ ಭೇದಭಾವ ಮಾಡದೆ ಸಮಾನತೆಯಿಂದ ನೋಡಬೇಕು. ರೋಗಿಗಳ ನೋವು ನಿವಾರಿಸುವುದು ಪವಿತ್ರವಾದ ಕಾರ್ಯ. ರೋಗಿಗಳಿಗೆ ಮಾತೃಪ್ರೇಮವನ್ನು ತೋರಬೇಕು. ರೋಗಿಯ ನೋವು ನಿವಾರಣೆ ಹಾಗೂ ತಲೆಯೊಳಗಿನ ಅಜ್ಞಾನವನ್ನು ದೂರ ಮಾಡುವುದು ಜಗತ್ತಿನ ಎರಡು ಅದ್ಭುತ ಕಾರ್ಯಗಳು" ಎಂದು ಬಣ್ಣಿಸಿದರು.

ಶ್ರೀಮತಿ ಚಂದೂಬಾಯಿ ಪ್ರಾರ್ಥಿಸಿದರು. ಶ್ರೀ ಎಸ್.ಜಿ. ಶಶಿಧರಕುಮಾರ್ ಸ್ವಾಗತಿಸಿದರು. ಶ್ರೀಮತಿ ಡಿ.ಎನ್. ರೇಣುಕಾದೇವಿ ವಂದಿಸಿದರು. ಡಾ. ಪುರುಷೋತ್ತಮ ಶಾಸ್ತ್ರಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

### ವೃತ್ತಿತೃಪ್ತಿಯನ್ನು ಸಂಬಳದಿಂದ ಅಳೆಯಲಾಗದು

"ಯಾವುದೇ ವೃತ್ತಿಯಲ್ಲಿ ಸಿಗುವ ತೃಪ್ತಿಯನ್ನು ಸಂಬಳದಿಂದ ಅಳೆಯಲಾಗದು" ಎಂದು ನವದೆಹಲಿಯ ಭಾರತೀಯ ಶುಶ್ರೂಷಾ ಮಂಡಲಿಯ ಅಧ್ಯಕ್ಷರಾದ ಶ್ರೀ ದಿಲೀಪ್‌ಕುಮಾರ್ ನುಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶುಶ್ರೂಷಕರಿಗಾಗಿ ಆಯೋಜಿಸಿದ್ದ ಮೂರು ದಿನಗಳ ಶಿಬಿರದಲ್ಲಿ ಸಮಾರೋಪ ನುಡಿಗಳನ್ನಾಡಿದ ಅವರು, 2015ರ ರಾಷ್ಟ್ರೀಯ ಆರೋಗ್ಯ ವಿಮೆ ನಿಯಮಗಳ ಪ್ರಕಾರ, ರೋಗಿಯು ವೈದ್ಯರನ್ನು ಭೇಟಿಯಾಗುವ ಮುನ್ನ ಶುಶ್ರೂಷಕರಿಂದ ಉಪಚಾರ ಪಡೆದಿರಬೇಕು. ಶೇ.70 ರಿಂದ 80 ರಷ್ಟು ಸಣ್ಣಪುಟ್ಟ ದೈಹಿಕ ಅಥವಾ ಮಾನಸಿಕ ಸಮಸ್ಯೆಗಳನ್ನು ಶುಶ್ರೂಷಕರೇ ನಿವಾರಿಸಬಹುದು. ಇದರಿಂದ ವೈದ್ಯರ ಮೇಲಿನ ಒತ್ತಡ ಕಡಿಮೆಯಾಗುವುದು.

ಶ್ರೀ ಎಸ್.ಪಿ. ಮಂಜುನಾಥ್‌ರವರು ಮಾತನಾಡಿ, "ವೇತನ ಜಾಸ್ತಿಯಾದಷ್ಟೂ ಒತ್ತಡ ಜಾಸ್ತಿ ಎಂಬುದನ್ನು ಅರಿತುಕೊಳ್ಳಬೇಕು. 'ರೋಗಿಗಳೆಲ್ಲ ನಮ್ಮ ಬಂಧುಗಳು' ಎಂಬುದು ರಾಜೇಂದ್ರ ಶ್ರೀಗಳವರ ಕರುಣಾ ದೃಷ್ಟಿಯಾಗಿತ್ತು. ಮೊದಲಿಗೆ ಸಣ್ಣದಾಗಿ ಆರಂಭವಾದ ಜೆಎಸ್‌ಎಸ್ ಆಸ್ಪತ್ರೆ ಈಗ 1,800 ಹಾಸಿಗೆಯುಳ್ಳ ಅತ್ಯಾಧುನಿಕ ಆಸ್ಪತ್ರೆಯಾಗಿ ರೂಪುಗೊಂಡಿದೆ. ಅರ್ಹ ಸ್ಟ್ಯಾಫ್ ನರ್ಸ್‌ಗಳಿಗೆ ಉನ್ನತ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ. ಏಕೆಂದರೆ ಆಧುನಿಕ ಜಗತ್ತಿನ ವೇಗದೊಂದಿಗೆ ನಾವು ಹೊಂದಿಕೊಳ್ಳಬೇಕಾದರೆ ಹೊಸ ಹೊಸ ವಿಚಾರಗಳನ್ನು ಅರಿಯಬೇಕಾಗುತ್ತದೆ. ಚಿಕಿತ್ಸೆಗೆ ಮೊದಲು ರೋಗಿಗಳಿಗೆ ಶುಶ್ರೂಷಕರು ಮಾಡುವ ನಗುಮೊಗದ ಸೇವೆ ಔಷಧಿಗಿಂತಲೂ ಹೆಚ್ಚು ಪರಿಣಾಮಕಾರಿ ಎಂಬುದನ್ನು ಮನಗಾಣಬೇಕು" ಎಂದು ಶಿಬಿರಾರ್ಥಿಗಳಿಗೆ ಹಿತವಚನ ಹೇಳಿದರು.

ಸಮಾರಂಭದಲ್ಲಿ ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಎಸ್.ಪಿ.

ಉದಯಶಂಕರ್, ಶ್ರೀ ಆರ್. ಮಹೇಶ್, ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ವೀರಭದ್ರಯ್ಯ ಮೊದಲಾದವರು ಉಪಸ್ಥಿತರಿದ್ದರು.

**ಭವಿಷ್ಯದಲ್ಲಿ ಯಂತ್ರನಾಗರಿಕತೆಯ ಅಂತ್ಯ**

"ಭವಿಷ್ಯದಲ್ಲಿ ಯಂತ್ರನಾಗರಿಕತೆ ಕೊನೆಗೊಂಡು ಗುಡಿಕೈಗಾರಿಕೆಗಳು ಮತ್ತೆ ಪ್ರವೃದ್ಧಮಾನಕ್ಕೆ ಬರಬೇಕಾದ ಅಗತ್ಯವಿದೆ" ಎಂದು ಖ್ಯಾತ ರಂಗಕರ್ಮಿ ಶ್ರೀ ಪ್ರಸನ್ನರವರು ಅಭಿಪ್ರಾಯಪಟ್ಟರು. ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ನಾಲ್ಕು ದಿನಗಳ ಗ್ರಾಮೀಣ ಯುವಜನರ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. "ಶ್ರಮಸಹಿತವಾದ ಸರಳ ಬದುಕನ್ನು ಬದುಕಬೇಕು. ಜಾತೀಯತೆ, ಬಡತನ ಹಾಗೂ ಲಿಂಗತಾರತಮ್ಯಗಳಿಂದಾಗಿ ಗ್ರಾಮೀಣಾಭಿವೃದ್ಧಿಯು ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗಿಲ್ಲ. ಬುದ್ಧ, ಬಸವಣ್ಣನಂಥವರ ಆದರ್ಶಗಳನ್ನು ಮೈಗೂಡಿಸಿಕೊಂಡು ಗ್ರಾಮೀಣ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸಬೇಕು. ಕುಟುಂಬದ ಹಿಂದಿನ ವೃತ್ತಿಗಳನ್ನು ಯಾವುದೇ ಸಂಕೋಚವಿಲ್ಲದೆ ಮುಂದುವರಿಸಿಕೊಂಡು ಹೋಗುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಇಂದಿನ ಗ್ರಾಮೀಣ ಯುವಕಯುವತಿಯರು ನಿರಂಕುಶಮತಿಗಳಾಗಿ ಆತ್ಮಪ್ರಜ್ಞೆಯನ್ನು ಬೆಳೆಸಿಕೊಂಡು ಸಮೃದ್ಧ ಜೀವನವನ್ನು ನಡೆಸಬೇಕು" ಎಂದು ಹೇಳಿದರು.

ಸಮಾರಂಭವನ್ನು ಉದ್ಘಾಟಿಸಿದ ಸಹಕಾರ ಮತ್ತು ಸಕ್ಕರೆ ಸಚಿವರಾದ ಶ್ರೀ ಎಚ್.ಎಸ್. ಮಹದೇವಪ್ರಸಾದ್‌ರವರು, "ಗ್ರಾಮೀಣ ಸೊಗಡನ್ನು ಉಳಿಸಿಕೊಂಡು ಇಂದಿನ ಆಧುನಿಕತೆಗೆ ತಕ್ಕಂತೆ ಗ್ರಾಮಗಳನ್ನು ಬೆಳೆಸಬೇಕು. ಉಪಕಸುಬುಗಳನ್ನು ಕೈಗೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದರ ಮುಖಾಂತರ ಹಳ್ಳಿಗರು ನಗರದವರ ಬದುಕಿಗಿಂತ ಹೆಚ್ಚಿನ ಸಂತೃಪ್ತ ಜೀವನ ನಡೆಸಬೇಕು" ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಮಹಿಮಾ ಪಟೇಲ್‌ರವರು, "ನಗರದ ಬದುಕಿಗಿಂತಲೂ ಹಳ್ಳಿಯ ಬದುಕು ಹಿಂದಿಗಿಂತಲೂ ಚೆನ್ನಾಗಿದೆ. ಸಂತೋಷ ಎನ್ನುವುದು ನಮ್ಮ ಆಲೋಚನೆಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಗ್ರಾಮೀಣ ಯುವಜನರು ತಮ್ಮ ಕೀಳರಿಮೆಯನ್ನು ಬಿಟ್ಟು ಗ್ರಾಮದ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸಬೇಕು. ಸಮಸ್ಯೆಗಳ ಬಗ್ಗೆ ಬರಿದೆ ಮಾತನಾಡದೆ ಸ್ವತಃ ಪರಿಹಾರಗಳನ್ನು ಕಂಡುಕೊಳ್ಳುವತ್ತ ಚಿಂತನೆಯನ್ನು ನಡೆಸಬೇಕು. ಸಂತೋಷವೆಂಬುದು ನಮ್ಮ ಭಾವನೆಯಲ್ಲಿದೆ, ಆದಕಾರಣ ಸದಾಕಾಲ ಸಂತೋಷದಿಂದ ತಮ್ಮ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸುತ್ತ ಗ್ರಾಮದ ಏಳಿಗೆಗಾಗಿ ಶ್ರಮಿಸಬೇಕು" ಎಂದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಎಸ್.



ಪಾಲಯ್ಯನವರು ಮಾತನಾಡಿ, "ಗ್ರಾಮೀಣ ಯುವಕ-ಯುವತಿಯರು ಇಂದು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದಾರೆ. ಇದನ್ನು ಕಡಿಮೆ ಮಾಡಿ, ದೇಶೀ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕೆಂದರು. ಇಂದಿನ ಯುವಕ-ಯುವತಿಯರು ಸಹಾಯ-ಸಹಕಾರ ಮನೋಭಾವದಿಂದ ದೇಶದ ಪ್ರಗತಿಗೆ ಉತ್ತಮ ಕೊಡುಗೆ ನೀಡಬೇಕು ಎಂದರು. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಕ್ರೀಡೆಗಳು ಕಣ್ಮರೆಯಾಗುತ್ತಿದ್ದು, ಅವುಗಳನ್ನು ಉಳಿಸಿ ಬೆಳೆಸಬೇಕು" ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿಗಳಾದ ಶ್ರೀಮತಿ ಸಿ. ಶಿಖಾರವರು ಮಾತನಾಡಿ, "ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾದರೆ ಇಡೀ ದೇಶವೇ ಅಭಿವೃದ್ಧಿಯಾದಂತೆ. ಹಳ್ಳಿಯ ಜನರು ಗ್ರಾಮಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸರ್ಕಾರಿ ಯೋಜನೆಗಳನ್ನು ಯಶಸ್ವಿಗೊಳಿಸಬೇಕು" ಎಂದು ಹೇಳಿ, ಹಲವಾರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಕುರಿತು ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರಾದ ಶ್ರೀ ಡಿ.ಆರ್. ಪಾಟೀಲ್‌ರವರು ಮಾತನಾಡಿ, "ನಗರಪ್ರದೇಶಗಳಲ್ಲಿ ಸಂಬಂಧಗಳ ಕೊರತೆಯಿದೆ. ಆದರೆ ಹಳ್ಳಿಗಳಲ್ಲಿ ಜಾತಿಯ ಬಿಗಿಯಿದ್ದರೂ ಸಹ ಸಂಬಂಧಗಳು ಮಾತ್ರ ಸುಮಧುರವಾಗಿಯೇ ಇರುತ್ತವೆ. ಮಳೆನೀರು ಹಾಗೂ ಮಣ್ಣಿನ ಸಂರಕ್ಷಣೆಯನ್ನು ಎಲ್ಲ ಯುವಕರೂ ಕೈಗೊಳ್ಳಬೇಕು. ಇಲ್ಲವಾದರೆ ಮುಂದಿನ ಗ್ರಾಮಜೀವನ ಕಷ್ಟಕರವಾಗುತ್ತದೆ. ಪ್ರತಿಯೊಂದು ವ್ಯವಸ್ಥೆಯಲ್ಲಿ ಕೆಟ್ಟದ್ದು ಹಾಗೂ ಒಳ್ಳೆಯದು ಇರುತ್ತದೆ. ಕೆಟ್ಟದ್ದನ್ನು ದೂರ ಸರಿಸಿ, ಒಳ್ಳೆಯದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು.

ಆಶೀರ್ವಚನ ನೀಡಿದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, "ಭಾರತದಂತಹ ಸಂಪದ್ಭರಿತವಾದ ದೇಶ ಮತ್ತೊಂದಿಲ್ಲ. ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವುದು ಇಲ್ಲಿನ ವೈಶಿಷ್ಟ್ಯ. ಸ್ಥಳೀಯವಾಗಿ ದೊರಕುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಗ್ರಾಮೀಣ ಪ್ರದೇಶದ ಏಳಿಗೆಗಾಗಿ ಜನರು ದುಡಿಯಬೇಕು. ಸಕಾರಾತ್ಮಕ ಚಿಂತನೆಯನ್ನು ಮೈಗೂಡಿಸಿಕೊಂಡು ಸಂತೃಪ್ತ ಜೀವನವನ್ನು ನಡೆಸಬೇಕು" ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಮಾಜಿ ಸಚಿವರಾದ ಶ್ರೀ ಅಮರೇಗೌಡ ಬಯ್ಯಾಪುರ, ಮಾಜಿ ಶಾಸಕರಾದ ಶ್ರೀ ಬಾಲರಾಜ್, ಚಾಮರಾಜನಗರ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ನಾಗೇಂದ್ರ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

**ನಿಮ್ಮ ಗ್ರಾಮೀಣ ಸಂಪತ್ತನ್ನು ಸಂರಕ್ಷಣೆ ಮಾಡುವ ಹೊಣೆ ನಿಮ್ಮದು**

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಶ್ರೀಮತಿ ವಿ.

ರಶ್ಮಿ ಮಹೇಶ್‌ರವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಜರುಗಿದ ನಾಲ್ಕು ದಿನಗಳ ಗ್ರಾಮೀಣ ಯುವಜನ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ಗ್ರಾಮಗಳ ಸಂಪತ್ತನ್ನು ಆಯಾ ಗ್ರಾಮದ ಯುವಜನರೇ ಸಂರಕ್ಷಿಸಬೇಕೆಂದು ಕರೆ ನೀಡಿದರು. ಮುಂದುವರೆದು ಅವರು, "ಗ್ರಾಮದಲ್ಲಿ ಬರುವ ಗೋಮಾಳ, ಕೆರೆಕಟ್ಟೆಗಳು ಮೊದಲಾದ ಸ್ಥಳಗಳನ್ನು ಪಟ್ಟಿಮಾಡಿ ಗ್ರಾಮದ ವಿವಿಧ ಕಡೆ ಅದನ್ನು ಬರೆಯಿಸಿ, ಆ ಮೂಲಕ ಒತ್ತುವರಿಯನ್ನು ತಡೆಯಬೇಕೆಂದರು. ಗ್ರಾಮೀಣ ಭಾಗದಲ್ಲಿ ಮಾತ್ರ ಸಂಸ್ಕೃತಿ, ಭಾಷೆ ಹಾಗೂ ಸಂಪನ್ಮೂಲಗಳು ಉಳಿದಿರುವುದು. ಗ್ರಾಮೀಣ ಯುವಜನರು ಪಟ್ಟಣದ ಮೋಹವನ್ನು ಬಿಟ್ಟು ತಮ್ಮ ಗ್ರಾಮದ ಏಳಿಗೆಗಾಗಿ ಪಣ ತೊಡಬೇಕು. ಜಿಲ್ಲಾ ಪಂಚಾಯಿತಿಯ ವತಿಯಿಂದ ಜರುಗುವ ಗ್ರಾಮಸಭೆಯಲ್ಲಿ ಗ್ರಾಮೀಣ ಯುವಜನರು ತಪ್ಪದೆ ಭಾಗವಹಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸರ್ಕಾರದ ಯೋಜನೆಗಳ ಯಶಸ್ಸಿಗೆ ಸಹಕರಿಸಬೇಕು. ಪ್ರತಿಯೊಂದು ಮನೆಯೂ ಸಹ ಕಡ್ಡಾಯವಾಗಿ ಶೌಚಾಲಯವನ್ನು ಹೊಂದಿರಬೇಕು" ಎಂದು ನುಡಿದರು.

ಸಮಾರೋಪ ಭಾಷಣ ಮಾಡಿದ ಮೈಸೂರಿನ ಮಹಾರಾಜ ಜ್ಯೂನಿಯರ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಹಾಲತಿ ಸೋಮಶೇಖರ್‌ರವರು ಗಾಂಧೀಜಿಯವರು ಸತ್ಯ, ಅಹಿಂಸೆಗಳನ್ನು ತಮ್ಮ ಅಸ್ತ್ರವನ್ನಾಗಿಸಿಕೊಂಡು ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟಿದ್ದಾರೆ. ಅದೇ ರೀತಿ ಗ್ರಾಮೀಣ ಯುವಜನರು ಸತ್ಯ, ಅಹಿಂಸೆಯನ್ನು ಮೈಗೂಡಿಸಿಕೊಂಡು ಕಠಿಣವಾದರೂ ಸಹ ಸತ್ಯನಿಷ್ಠೆಯ ಜೀವನವನ್ನು ನಡೆಸಬೇಕು. ಭಾರತದ ಭವಿಷ್ಯವು ಗ್ರಾಮೀಣ ಪ್ರದೇಶದ ಯುವಜನರ ಕೈಯಲ್ಲಿದೆ. ಅವರುಗಳು ಗ್ರಾಮವನ್ನು ಕಟ್ಟುವ ಕೆಲಸವನ್ನು ಮಾಡಿದರೆ, ದೇಶ ಕಟ್ಟುವ ಕೆಲಸವು ತನ್ನಿಂದ ತಾನೇ ಆಗುತ್ತದೆ. ಗ್ರಾಮೀಣ ಯುವಜನರು ಪಟ್ಟಣಗಳ ಆಕರ್ಷಣೆಗೆ ಒಳಗಾಗದೆ ಗ್ರಾಮದಲ್ಲಿ ದೊರಕುವ ಸಂಪದ್ಭರಿತ ಜೀವನದಲ್ಲಿ ತೃಪ್ತಿ ಕಾಣಬೇಕೆಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ದಿವ್ಯ ಸಮ್ಮುಖ ವಹಿಸಿದ್ದರು. ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಉಪಸ್ಥಿತರಿದ್ದರು.

**ಕಾಯಕಬಂಧುಗಳ ಶಿಬಿರ**

ಕಾಯಕದಲ್ಲಿ ತೊಡಗಿರುವ ನೌಕರರು ಸಮಾಜದ ಏಳಿಗೆಗಾಗಿ ಹಾಗೂ ಸಮಾಜಮುಖಿಯಾಗಿ ಕೆಲಸ ನಿರ್ವಹಿಸಬೇಕೆಂದು ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯರವರು ಕರೆ ನೀಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸೇವಾನಿರತ ಕಾಯಕಬಂಧುಗಳಿಗೆ ಏರ್ಪಡಿಸಿದ್ದ ಮೂರು ದಿನಗಳ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ, "ಯಾವುದೇ ಕೆಲಸಕಾರ್ಯವಾದರೂ ಸಹ ಶಿಸ್ತು, ಕಾರ್ಯಕ್ಷಮತೆಯನ್ನು ರೂಢಿಸಿಕೊಳ್ಳಬೇಕು. ನಾವು ಹುಟ್ಟಿದಾರಭ್ಯ ಸಮಾಜದ ಋಣದಿಂದ ಬದುಕುತ್ತಿರುತ್ತೇವೆ. ಅದಕ್ಕೆ ಪ್ರತಿಯಾಗಿ ನಾವೂ ಸಹ ಕಾಯಕದ ಮೂಲಕ ಸಮಾಜದ ಋಣವನ್ನು ತೀರಿಸುವ ಕೆಲಸವನ್ನು ಮಾಡಬೇಕು" ಎಂದರು.



ಶ್ರೀ ಎಸ್.ಪಿ. ಮಂಜುನಾಥ್‌ರವರು ಮಾತನಾಡಿ "ಹಿಂದಿನ ದಿನಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ನೌಕರವರ್ಗದವರಿಂದಾಗಿಯೇ ಜೆಎಸ್‌ಎಸ್ ಸಂಸ್ಥೆಯು ಇಂದು ಈ ಹಂತಕ್ಕೆ ಬೆಳೆದಿದೆ. ಹಿಂದಿನವರಂತೆಯೇ ಈಗಿನ ನೌಕರವರ್ಗದವರೂ ಸಹ ಸಂಸ್ಥೆಯ ಹಾಗೂ ಸಮಾಜದ ಏಳಿಗೆಗಾಗಿ ದುಡಿಯಬೇಕು. ನಮ್ಮ ಮನಸ್ಸು ಹಾಗೂ ಹೃದಯ ಒಳ್ಳೆಯದನ್ನು ಸದಾ ಯೋಚಿಸುತ್ತಿದ್ದರೆ, ಜಗತ್ತು ಸುಂದರವಾಗಿ ಕಾಣುವುದು. ಆದಕಾರಣ ಒಳ್ಳೆಯ ಮನಸ್ಸಿನಿಂದ ಕಾಯಕನಿಷ್ಠೆಯನ್ನು ಬೆಳೆಸಿಕೊಂಡರೆ ಉತ್ತಮ ಹಾಗೂ ಸುಸ್ಥಿರ ಸಮಾಜವನ್ನು ನಿರ್ಮಿಸಬಹುದಾಗಿದೆ" ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕರಾದ ಶ್ರೀ ಪಾಂಡುರಂಗ ಎಚ್. ರಾಣೆಯವರು ಮಾತನಾಡಿ, "ಯಾವುದೇ ಕೆಲಸ ನಿರ್ವಹಿಸಿದರೂ ಅದಕ್ಕೆ ಒಂದು ಧ್ಯೇಯವಿರಬೇಕು. ನಾವು ಮಾಡುವ ಕೆಲಸವು ಸಮಾಜಮುಖಿಯಾಗಿರಬೇಕು ಹಾಗೂ ಅದನ್ನು ಪ್ರೀತಿಯಿಂದ, ತೃಪ್ತಿಯಿಂದ ಮಾಡಬೇಕು. ಸ್ವಾರ್ಥ ಮನೋಭಾವವನ್ನು ಬೆಳೆಸಿಕೊಳ್ಳದೆ ಸೇವಾ ಮನೋಭಾವವನ್ನು ರೂಢಿಸಿಕೊಂಡು ಕಾಯಕವನ್ನು ಕೈಗೊಳ್ಳಬೇಕು. ಸಂವಿಧಾನದ ಕರ್ತವ್ಯಗಳನ್ನು ಮನನ ಮಾಡಿಕೊಂಡು ರಾಷ್ಟ್ರ ಕಟ್ಟುವ ಕಾಯಕದಲ್ಲಿ ಪ್ರತಿಯೊಬ್ಬರೂ ತೊಡಗಬೇಕು" ಎಂದು ಹೇಳಿದರು.

ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸಮ್ಮುಖ ವಹಿಸಿದ್ದರು.

ಸುತ್ತೂರು ಜೆಎಸ್‌ಎಸ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರೆ, ಪ್ರೊ. ಪಿ.ಎಂ. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಎಂ.ಎಚ್. ಚಂದ್ರಶೇಖರ್ ವಂದಿಸಿದರೆ, ಶ್ರೀ ಕೆ.ಎಲ್. ಬಸಪ್ಪ ನಿರೂಪಿಸಿದರು.

ಜೆಎಸ್‌ಎಸ್ ಸಂಸ್ಥೆಗಳ ಸೇವಾನಿರತ ಕಾಯಕಬಂಧುಗಳ ಮೂರು ದಿನಗಳ ಶಿಬಿರದ ಸಮಾರೋಪ ಭಾಷಣ ಮಾಡಿದ "ಆಂದೋಲನ" ದಿನಪತ್ರಿಕೆಯ ಸಂಪಾದಕರಾದ ಶ್ರೀ ರಾಜಶೇಖರ ಕೋಟಿಯವರು, "ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವ ಕಾಯಕವನ್ನು ಎಲ್ಲರೂ ಮಾಡಬೇಕು. ಮುಂದುವರೆಯುತ್ತಿರುವ ನಮ್ಮ ರಾಷ್ಟ್ರ, ಮುಂದುವರೆದ ರಾಷ್ಟ್ರವಾಗಬೇಕಾದರೆ ಸಮಾಜದ ಎಲ್ಲಾ ವರ್ಗಗಳ ಜನರೂ ಶ್ರದ್ಧೆ,

ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ದುಡಿಯಬೇಕು" ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಸಮಾರಂಭಕ್ಕೆ ಆಗಮಿಸಿದ್ದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಂಸ್ಥಾಪಕರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಆರ್. ಬಾಲಸುಬ್ರಹ್ಮಣ್ಯಂರವರು ಮಾತನಾಡಿ, "ಅನುಕಂಪ, ಶ್ರದ್ಧೆ, ಮಂದಹಾಸ, ಸಕಾರಾತ್ಮಕ ಚಿಂತನೆ, ಧೈರ್ಯ ಹಾಗೂ ಸದಾಕಾಲ ಪ್ರಜ್ಞಾಶೀಲತೆ ಇವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉತ್ತಮ ಕಾಯಕವನ್ನು ಮಾಡಬೇಕಾದರೆ ಆಹಾರ, ವ್ಯಾಯಾಮ ಹಾಗೂ ಸದ್ವಿಚಾರಗಳ ಚಿಂತನೆಯಿಂದ ಮಾತ್ರ ಸಾಧ್ಯ. ಇದರಿಂದಾಗಿ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ" ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು "ಯಾವುದೇ ಕೆಲಸವನ್ನೂ ಸಹ ಆತ್ಮಸಾಕ್ಷಿಯಿಂದ ಮಾಡಿದರೆ, ಅದು ಉತ್ತಮ ಫಲಿತಾಂಶದಿಂದ ಕೂಡಿರುತ್ತದೆ. ಸಮಾಜದ ಏಳಿಗೆಯ ಹಿನ್ನೆಲೆಯಲ್ಲಿ ಪ್ರತಿಯೊಬ್ಬರ ಕಾಯಕವೂ ಅತ್ಯಮೂಲ್ಯ. ಆದಕಾರಣ ಎಲ್ಲರೂ ತಮ್ಮ ತಮ್ಮ ಕಾಯಕವನ್ನು ಉತ್ತಮವಾಗಿ ನಿರ್ವಹಿಸಬೇಕು" ಎಂದು ಕರೆ ನೀಡಿದರು.

ಸಮಾರಂಭದಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಉಪಸ್ಥಿತರಿದ್ದರು.

ಶ್ರೀ ಕೆ.ಎಲ್. ಬಸಪ್ಪ ಶಿಬಿರದ ವರದಿ ಮಂಡಿಸಿದರು. ಶಿಬಿರಾರ್ಥಿಗಳು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎಂ.ಎಚ್. ಚಂದ್ರಶೇಖರ್ ಸ್ವಾಗತಿಸಿದರೆ, ಡಾ. ಸದಾಶಿವಮೂರ್ತಿ ವಂದಿಸಿದರು. ಪ್ರೊ. ಪಿ.ಎಂ. ಮಹದೇವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

**ಶಿಕ್ಷಕರು ಜೀವನಪೂರ್ತಿ ಕಲಿಯುವಂತಿರಬೇಕು: ಶ್ರೀ ಸಂಜೀವ್ ಕುಮಾರ್**

ವಿದ್ಯಾರ್ಥಿಗಳ ಕುತೂಹಲವನ್ನು ಸಮರ್ಥವಾಗಿ ತಣಿಸಲು ಶಿಕ್ಷಕರು ಜೀವನಪೂರ್ತಿ ಕಲಿಯುವಂತಿರಬೇಕು ಎಂದು ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂಜೀವ್ ಕುಮಾರ್ ಸಲಹೆ ನೀಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಜೆಎಸ್‌ಎಸ್ ಪಬ್ಲಿಕ್ ಶಾಲೆಗಳ ಶಿಕ್ಷಕರ ನಾಲ್ಕು ದಿನಗಳ ಪುನಶ್ಚೇತನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, "ಏನಾದರೂ ಸರಿ ತಮ್ಮ ಮಕ್ಕಳು ಇಂಜಿನಿಯರ್ ಅಥವಾ ಡಾಕ್ಟರ್ ಆದರೆ ಸರಿ" ಎಂದು ಮಕ್ಕಳ ಮೇಲೆ ತೀವ್ರ ಒತ್ತಡ ಹೇರುತ್ತಿರುವ ಪೋಷಕರ ಹಗಲುಗನಸಿನ



ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ವಿದ್ಯಾರ್ಥಿಗಳಿಗೆ ಆಯ್ಕೆಯ ಸ್ವಾತಂತ್ರ್ಯ ಇರಬೇಕೇ ಹೊರತು ಬಲವಂತವಾಗಿ ಏನನ್ನೂ ಹೇರಬಾರದು ಎಂದು ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನದ ನಿರ್ದೇಶಕರಾದ ಶ್ರೀ ಎಚ್.ಎಸ್. ಅಶೋಕಾನಂದರವರು, ಮಾತೃಭಾಷೆಯಲ್ಲಿ ಕಲಿಯುವುದು ಮಗುವಿಗೆ ನಿಜಕ್ಕೂ ಆಪ್ಯಾಯಮಾನವಾಗಿರುತ್ತದೆ. ಆದರೆ ಬಲವಂತವಾಗಿ ಇತರ ಭಾಷೆಗಳನ್ನು ಮಗುವಿನ ಮೇಲೆ ಹೇರುತ್ತಿದ್ದೇವೆ. ಹೀಗಾಗಿ ಮಾತೃಭಾಷೆಯಿಂದ ಸಹಜವಾಗಿ ಮಗುವಿಗೆ ಬರಬೇಕಾದ ಸಂಸ್ಕೃತಿ, ಸಂಸ್ಕಾರಗಳು ಲಭಿಸುತ್ತಿಲ್ಲ ಎಂದು ವಿಷಾದಿಸಿದರು.

ತೋಟಗಾರಿಕೆ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್.ಪಿ. ಷಡಕ್ಷರಿಸ್ವಾಮಿ ಯವರು ಮಾತನಾಡಿ, "ಶಿಕ್ಷಣ, ಕೈಗಾರಿಕೆ, ಆರೋಗ್ಯ ಇವೇ ಮೊದಲಾದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯಾದಾಗ ಮಾತ್ರ ಸುಂದರ ಸಮಾಜ ನಿರ್ಮಾಣ ಹಾಗೂ ದೇಶ ಬಲಿಷ್ಠವಾಗಲು ಸಾಧ್ಯ. ಸಮಾಜದ ಚಿಂತನೆ ಈಗ ಬದಲಾಗುತ್ತಿದೆ. ಶಾಲೆಯಲ್ಲಿ ಮಕ್ಕಳು ಗಿಡಗಳಿಗೆ ನೀರೆರೆಯುವುದನ್ನೂ ಪೋಷಕರು ಅಪರಾಧಭಾವದಿಂದ ನೋಡುತ್ತಿರುವುದರಿಂದಾಗಿ ಶಿಕ್ಷಕರು ಜಾಗರೂಕತೆಯಿಂದ ತಮ್ಮ ಕರ್ತವ್ಯ ನಿರ್ವಹಿಸಬೇಕಾಗಿದೆ" ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಯುಎಇ ಆಲ್ ಐನ್ ಜೂನಿಯರ್ ಸ್ಕೂಲ್ ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ ಕೆ. ಅಯ್ಯಂಗಾರ್‌ರವರು, ಈಗಿನ ವಿದ್ಯಾರ್ಥಿಗಳು ಮಣ್ಣಿನ ಮುದ್ದೆಗಳಲ್ಲ, ವಿಜ್ಞಾನ ತಂತ್ರಜ್ಞಾನದ ಪ್ರಭಾವ ಶಿಕ್ಷಣ ಕ್ಷೇತ್ರದಲ್ಲೂ ಸಾಕಷ್ಟಾಗಿದೆ. ಅದನ್ನು ಸಮರ್ಥವಾಗಿ ಬಳಸಿಕೊಂಡು ಹೊಸ ಹೊಸ ಚಟುವಟಿಕೆಗಳ ಮೂಲಕ ಶಿಕ್ಷಕರು ಕ್ರಿಯಾಶೀಲರಾಗಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವಂತಾಗಬೇಕು ಎಂದು ನುಡಿದರು.

ಸಮಾರಂಭದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿ ಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸಮ್ಮುಖ ವಹಿಸಿದ್ದರು. ಶ್ರೀ ಎಸ್.ಪಿ. ಮಂಜುನಾಥ್‌ರವರು, ಚುಂಚನಹಳ್ಳಿ ಮಠದ ಶ್ರೀ ಚನ್ನಬಸವ ಸ್ವಾಮಿಗಳವರು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಪಿ.ಎ. ಗೋಪಾಲ್‌ರವರು, ಶ್ರೀ ಎಸ್. ಶಿವಕುಮಾರಸ್ವಾಮಿಯವರು ಉಪಸ್ಥಿತರಿದ್ದರು.

ಸುತ್ತೂರು ಜೆಎಸ್‌ಎಸ್ ಶಾಲಾ ಸಂಗೀತ ಶಿಕ್ಷಕರು ಪ್ರಾರ್ಥಿಸಿದರೆ, ಶ್ರೀಮತಿ ಎಂ.ಪಿ. ಮಂಜುಳಾ ಸ್ವಾಗತಿಸಿದರು. ಶ್ರೀ ಯೋಗೀಶ್ ವಂದಿಸಿದರೆ, ಶ್ರೀಮತಿ ಮಹೇಶ್ವರಿಪ್ರಸಾದ್ ನಿರೂಪಿಸಿದರು.

**ಚಿಂತನೆಗಳಿಂದ ಮಾನಸಿಕ ಚಿಂತೆ ದೂರ ಮಾಡಲು ಸಾಧ್ಯ**

"ಪ್ರತಿಯೊಬ್ಬರಲ್ಲೂ ಒಂದೊಂದು ರೀತಿಯಲ್ಲಿರುವ ಮಾನಸಿಕ ಚಿಂತೆಯನ್ನು, ಚಿಂತನೆಗಳಿಂದ ದೂರಮಾಡಲು ಸಾಧ್ಯ" ಎಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದತೀರ್ಥ ಮಹಾಸ್ವಾಮಿಗಳು ನುಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಭಾರತೀಯ ಸಾಂಸ್ಕೃತಿಕ ಪರಿಷತ್ತಿನಿಂದ ಏರ್ಪಡಿಸಿದ್ದ ಐದು ದಿನಗಳ ಚಿಂತನ-ಮಂಥನ ಶಿಬಿರದಲ್ಲಿ ಮಾತನಾಡಿದ ಶ್ರೀಗಳವರು "ಭೋಗಜೀವನದಿಂದಾಗಿ ಮಾನವ ಅಧಃಪತನಕ್ಕಿಳಿಯುತ್ತಿದ್ದಾನೆ. ಚಿಂತನೆಯಿಂದ ಸಂತೋಷ, ಸತ್ಸಂಗದಿಂದ ಪರಮಗತಿ, ವಿಚಾರದಿಂದ ಪರಮಜ್ಞಾನ, ಶ್ರಮದಿಂದ ಪರಮಶಾಂತಿ ಲಭಿಸುತ್ತವೆ. ಇಂದ್ರಿಯಗಳು ಮಾನವನಿಗೆ ಭಗವಂತ ಕೊಟ್ಟ ವರ. ಅವುಗಳಿಂದ ಭಗವಂತನ ದರ್ಶನ ಸಾಧ್ಯ. ಕಣ್ಣಿದ್ದೂ ಕುರುಡರಾಗಿರುವ, ಕಿವಿಯಿದ್ದೂ ಕಿವುಡರಾಗಿರುವ, ಬಾಯಿದ್ದು ಮೂಕರಾಗಿರುವ ಸ್ಥಿತಿಯಿಂದ ಪಾರಾಗಬೇಕು" ಎಂದು ನುಡಿದರು.

ಶಿಬಿರವನ್ನು ಉದ್ಘಾಟಿಸಿದ ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿಮಠದ ಡಾ. ಶ್ರೀ ಸಿದ್ಧರಾಮ ಮಹಾಸ್ವಾಮಿಗಳವರು, "ಭಾರತೀಯ ಸಂತರು, ಶರಣರು ತಮ್ಮ ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣಕ್ಕಾಗಿ ಶ್ರಮಿಸಿದರು. ಅವರ ಮಾನವೀಯ ಕಳಕಳಿ ಅನುಪಮವಾದುದು. ಭವಿಷ್ಯದ ಬಗೆಗಿನ ಅವರ ಮೌಲ್ಯಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಅವರು ಲಿಂಗಭೇದ, ಜಾತಿ ಮತ ಭೇದಗಳನ್ನು ತೊಡೆದುಹಾಕಿ, ಎಲ್ಲರಿಗೂ ಉದ್ಧಾರಮಾರ್ಗವನ್ನು ತೋರಿಸಿಕೊಟ್ಟರು. ಈ ಹಿನ್ನೆಲೆಯಲ್ಲಿ ಭಾರತೀಯ ಸಾಂಸ್ಕೃತಿಕ ಪರಿಷತ್ತು ಶೋಷಣಾರಹಿತ ಸಶಕ್ತ ಸಮಾಜ ನಿರ್ಮಾಣದ ಉದ್ದೇಶವನ್ನು ಮುಂದಿಟ್ಟುಕೊಂಡು ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದೆ" ಎಂದು ತಿಳಿಸಿದರು.

ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, "ಬದುಕನ್ನು ಜ್ಞಾನದ ಮೂಲಕ ಶ್ರೀಮಂತ ಮಾಡುವುದೇ ಧರ್ಮ. ಸನಾತನ ಎಂದರೆ ಸದಾ ಎಲ್ಲೆಡೆ ಇರುವಂಥದು, ನಾಶ ಮಾಡಲು ಸಾಧ್ಯವಿಲ್ಲದಿರುವಂಥದು. ಪ್ರೇಮ, ಜ್ಞಾನ ಹಾಗೂ ಅನುಭವಗಳ ಮುಪ್ಪುರಿಯೇ ಸನಾತನ ಧರ್ಮ. ಇಂತಹ ಉಪನ್ಯಾಸ ಚಿಂತನೆಗಳು ನಮ್ಮ ಮನಸ್ಸಿನಲ್ಲಿ ಜ್ಞಾನಕೋಶಗಳಾಗಿ ಉಳಿಯಬೇಕು" ಎಂದು ನುಡಿದರು.

**ಧರ್ಮದ ವಿಕೇಂದ್ರೀಕರಣ ಅಗತ್ಯ - ಪೂಜ್ಯ ಪೇಜಾವರ ಶ್ರೀಗಳು**

"ಆರ್ಥಿಕ ವಿಕೇಂದ್ರೀಕರಣ, ಜ್ಞಾನದ ವಿಕೇಂದ್ರೀಕರಣದಂತೆ ಧರ್ಮದ ವಿಕೇಂದ್ರೀಕರಣ ಮಾಡಬೇಕಾದ ಅವಶ್ಯಕತೆ ಇದೆ" ಎಂದು ಉಡುಪಿಯ ಶ್ರೀ ಪೇಜಾವರ



ಮಠದ ಡಾ. ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ನುಡಿದರು.

ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಚಿಂತನ-ಮಂಥನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀಗಳವರು, "ಪ್ರಾಚೀನ ಗ್ರಂಥಗಳ ಉತ್ತಮ ವಿಚಾರಗಳು ಯುವಕರಿಗೆ ಆದರ್ಶವಾಗಬೇಕು. ನಮ್ಮ ಧರ್ಮ ಮತ್ತು ಸಂಸ್ಕೃತಿ ದೇಶದಾದ್ಯಂತ ತಲುಪಬೇಕು. ನಮ್ಮೊಳಗಿನ ಅಜ್ಞಾನ ಮತ್ತು ಅಹಂಕಾರವನ್ನು ತ್ಯಜಿಸಬೇಕು. ಪರಸ್ಪರ ಪ್ರೇಮ, ಸ್ನೇಹ, ಸಾಮರಸ್ಯವನ್ನು ಬೆಳೆಸಿಕೊಳ್ಳಬೇಕು" ಎಂದು ಅಭಿಪ್ರಾಯಪಟ್ಟರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, "ವಿದೇಶೀಯರಿಗೆ ಭಾರತೀಯ ಸಂಸ್ಕೃತಿಯ ಬಗೆಗಿರುವ ಅಪಾರ ಗೌರವ, ಆಕರ್ಷಣೆ ಒಮ್ಮೊಮ್ಮೆ ನಮಗೇ ಇಲ್ಲವೇನೋ ಎನ್ನುವ ಸಂಶಯ ಮೂಡುತ್ತದೆ. ಪರಕೀಯರ ದಾಳಿಗೆ ಸಿಕ್ಕಿಯೂ ನಾಶವಾಗದ ಜಗತ್ತಿನ ಏಕೈಕ ಸಂಸ್ಕೃತಿ ನಮ್ಮದು. ಧರ್ಮ ಮತ್ತು ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಅವುಗಳ ಮಹತ್ತು ಅರ್ಥವಾಗುತ್ತದೆ" ಎಂದು ನುಡಿದರು.

ಆನಂದಪುರಂನ ಶ್ರೀ ಮುರುಘರಾಜೇಂದ್ರ ಮಠದ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು, "ಬದುಕಿನಲ್ಲಿ ನಾವು ಕಂಡುಕೊಂಡ ಅನುಭವಗಳನ್ನು ಇತರರಿಗೂ ಹಂಚುವ ಮೂಲಕ ನಮ್ಮ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳಬೇಕು. ಸದ್ಭಾವನೆಗಳು ವ್ಯಾಪಕವಾಗಿ ಸಮಾಜವನ್ನು ತಲುಪಬೇಕಾದ ಅವಶ್ಯಕತೆ ಇದೆ. ಚಿಂತನೆಗಳು ಬದುಕಿನಲ್ಲಿ ಉತ್ಸಾಹ, ಸ್ಫೂರ್ತಿಯನ್ನು ತಂದುಕೊಡುತ್ತವೆ. ವೈಯಕ್ತಿಕ ಪರಿಶುದ್ಧತೆಗೆ ಹೆಚ್ಚಿನ ಮಹತ್ವ ನೀಡಿದರೆ ಇಡೀ ದೇಶವೇ ಮುನ್ನಡೆಯಲು ಸಾಧ್ಯ. ಇಂಥ ಶಿಬಿರವನ್ನು ಶಿಬಿರಾರ್ಥಿಗಳ ಆಶಯದಂತೆ ಶಿವಮೊಗ್ಗ ಬೆಕ್ಕಿನ ಕಲ್ಮಠದಲ್ಲೂ ಮುಂದಿನ ದಿನಗಳಲ್ಲಿ ಏರ್ಪಡಿಸಲಾಗುವುದು" ಎಂದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮಾತನಾಡಿ "ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಶ್ರೀಮಂತವಾದ ಭಾರತದೇಶದಲ್ಲಿ ಇರುವುದೇ ಹೆಮ್ಮೆಯ ಸಂಗತಿ. ಹೊರಗಿನ ಆಘಾತಗಳೊಂದಿಗೆ ನಮ್ಮೊಳಗಿನ ಸಮಸ್ಯೆಗಳಿಂದಲೂ ನಮ್ಮನ್ನು ನಾವೇ ಹೊಡೆದುಕೊಳ್ಳುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಇಡೀ ಮಾನವ ಕುಲವನ್ನು ಗೌರವಿಸುವ ಹಿಂದೂ ಧರ್ಮವನ್ನು, ಸನಾತನ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳಬೇಕಾದ ನೈತಿಕ ಜವಾಬ್ದಾರಿ ಎಲ್ಲರ ಮೇಲಿದೆ" ಎಂದು ನುಡಿದರು.

ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು

"ಪುಷ್ಪಗಳು ಪರಿಮಳವನ್ನು ಹರಡುವಂತೆ ತಾವೆಲ್ಲ ಸುಂದರ ಧರ್ಮಪುಷ್ಪಗಳಾಗಬೇಕು. ನಾಡಿನ ತುಂಬೆಲ್ಲ ಧರ್ಮದ ಪರಿಮಳವನ್ನು ಹರಡಬೇಕು. ಭಾರತದ ಅಖಂಡತೆ, ವೈಭವ ಮತ್ತು ಸಾರವನ್ನು ಮನೆಮನೆಗೆ ಮುಟ್ಟಿಸುವ ಅವಶ್ಯಕತೆ ಇದೆ. ಈ ಉದ್ದೇಶದಿಂದಲೇ ಭಾರತೀಯ ಸಾಂಸ್ಕೃತಿಕ ಪರಿಷತ್ತು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದೆ. 'ವಸುಧೈವ ಕುಟುಂಬಕಂ' ಎಂಬ ಸಂದೇಶವನ್ನು ಸಾರಬೇಕಾಗಿದೆ. ಉದಾರ ಮನಸ್ಸನ್ನು ಹೊಂದಬೇಕಾಗಿದೆ. ವಿಶ್ವದಷ್ಟು ವಿಶಾಲಗೊಳಿಸಿಕೊಳ್ಳಬೇಕಾಗಿದೆ" ಎಂದು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಳಗಾವಿ ಕೆ.ಎಲ್.ಇ. ಸೊಸೈಟಿ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಶಂಕರಣ್ಣ ಐ. ಮುನವಳ್ಳಿಯವರು ಒಳ್ಳೆಯ ಮನಸ್ಸಿನಿಂದ ಮಾಡುವ ಕೆಲಸಕ್ಕೆ ಯಶಸ್ಸು ಖಂಡಿತ. ಸನಾತನಧರ್ಮವನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದರು.

ಮಾಜಿ ಸಚಿವರಾದ ಶ್ರೀ ಎ.ಬಿ. ಪಾಟೀಲ್‌ರವರು ಮಾತನಾಡಿ, ಇಂಥ ಶಿಬಿರಗಳಲ್ಲಿ ಭಾಗವಹಿಸುವುದರಿಂದ ಉತ್ತಮ ಸಮಾಜ ಕಟ್ಟಲು ಸಾಧ್ಯ ಎಂದು ನುಡಿದರು.

ಶಿಬಿರದಲ್ಲಿ ಹಲವಾರು ಜನ ಮಠಾಧೀಶ್ವರರು, ಸಾಧು-ಸಂತರು, ಸಾಧಕರು ಹಾಗೂ ಜಿಜ್ಞಾಸುಗಳು ಮಾತನಾಡಿದರು. ಡಾ. ನಂದೀಶ್ ಹಂಚೆ ಶಿಬಿರದ ವರದಿ ಮಂಡಿಸಿದರು. ಸುತ್ತೂರು ಶಾಲಾ ಸಂಗೀತ ಶಿಕ್ಷಕರು ಪ್ರಾರ್ಥಿಸಿದರು. ಶಿಬಿರಾರ್ಥಿಗಳಾದ ಶ್ರೀ ಜ್ಞಾನೇಶ್ವರ ಸ್ವಾಮಿಗಳು, ಮಾತೆ ಜಯದೇವಿ ತಾಯಿ, ಶ್ರೀ ಸಿದ್ಧಲಿಂಗಪ್ಪ, ಶ್ರೀಮತಿ ಸುವರ್ಣ ಪಟ್ಟಣಶೆಟ್ಟಿ, ಶ್ರೀ ರವಿಪ್ರಕಾಶ್ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

**ಎಳೆಯರ ಮೇಳ**

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಹತ್ತು ದಿನಗಳ ಗ್ರಾಮೀಣ ಎಳೆಯರ ಮೇಳವನ್ನು ಉದ್ಘಾಟಿಸಿದ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಆರ್ಥೋಪೆಡಿಕ್ ಸರ್ಜನ್ ಡಾ. ಪುರುಷೋತ್ತಮ ಶಾಸ್ತ್ರಿಯವರು ಮಾತನಾಡಿ, "ಶಿಕ್ಷಣ ಎನ್ನುವುದು ಕೇವಲ ಶಾಲೆಗೆ ಮಾತ್ರ ಸೀಮಿತವಾಗಿಲ್ಲ. ಸಾಂಸ್ಕೃತಿಕ, ಧಾರ್ಮಿಕ, ವ್ಯಕ್ತಿತ್ವ ವಿಕಸನದ ಬೆಳವಣಿಗೆಗೆ ಶಿಕ್ಷಣ ಸಹಾಯಕವಾಗಿದೆ. ಇಂದಿನ ಯುಗದಲ್ಲಿ ದೂರದರ್ಶನ, ಕಂಪ್ಯೂಟರ್‌ಗಳಿಂದ ಮಕ್ಕಳನ್ನು ವಿಮುಖರನ್ನಾಗಿಸಲು ಇಂತಹ ಗ್ರಾಮೀಣ ಎಳೆಯರ ಮೇಳ ಉಪಯುಕ್ತವಾಗಿದೆ. ತರಗತಿಗಳಲ್ಲಿ ಕೊಡುವ ಶಿಕ್ಷಣಕ್ಕೂ, ನಿಸರ್ಗದ ಮಧ್ಯೆ ದೊರೆಯುವ ಶಿಕ್ಷಣಕ್ಕೂ ಬಹಳಷ್ಟು ವ್ಯತ್ಯಾಸವಿರುತ್ತದೆ. ಮಕ್ಕಳು ದೇಶದ ಸಂಸ್ಕೃತಿ, ಪರಂಪರೆಯನ್ನು ಗೌರವಿಸುವುದನ್ನು ಕಲಿಯಬೇಕು. ಆಧುನಿಕ ಯುಗದ ಭರಾಟೆಯಲ್ಲಿ ಗ್ರಾಮೀಣ ಬದುಕು ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಇಂತಹ ಶಿಬಿರದಿಂದ



ಅವೆಲ್ಲವುಗಳನ್ನೂ ಸರಿದೂಗಿಸಬಹುದು. ನಾವು ಹಲವಾರು ಒಳ್ಳೆಯ ವಿಷಯಗಳನ್ನು ಸಹ ತಿಳಿದುಕೊಳ್ಳಬಹುದು" ಎಂದು ಅವರು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸಿ.ಎ. ಶ್ರೀಧರ್‌ರವರು ಮಾತನಾಡುತ್ತಾ, "ಪೂಜ್ಯ ಶ್ರೀಗಳವರು ನಗರ ಹಾಗೂ ಪಟ್ಟಣದ ಮಕ್ಕಳಿಗೆ ಸಿಗುವ ಎಲ್ಲಾ ಸೌಲಭ್ಯಗಳು ಗ್ರಾಮೀಣ ಮಕ್ಕಳಿಗೂ ತಲುಪಬೇಕೆಂಬ ಉದಾರ ದೃಷ್ಟಿಯಿಂದ ಈ ಶಿಬಿರವನ್ನು ಆಯೋಜಿಸಿದ್ದಾರೆ. ಹಲವಾರು ವರ್ಷಗಳಿಂದ ಸಂಸ್ಥೆಯ ವತಿಯಿಂದ ಎಳೆಯರ ಮೇಳ ಹಮ್ಮಿಕೊಳ್ಳಲಾಗುತ್ತಿದ್ದು, ಇಲ್ಲಿ ವಿವಿಧ ಕ್ರಿಯಾಶೀಲ ಚಟುವಟಿಕೆಗಳಿಗೆ ಅವಕಾಶವಿದೆ. ಇದರ ಸದುಪಯೋಗ ಪಡೆದುಕೊಂಡು ಮಕ್ಕಳು ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡಲ್ಲಿ ಶಿಬಿರವನ್ನು ಹಮ್ಮಿಕೊಂಡದ್ದು ಸಾರ್ಥಕವಾಗುತ್ತದೆ. ಮಕ್ಕಳಿಗೆ ಇಂದು ಉತ್ತಮ ಸಂಸ್ಕೃತಿಯನ್ನು ನೀಡಿದರೆ ಮುಂದೆ ಅವರೇ ಸಂಸ್ಕೃತಿಯ ರಕ್ಷಕರಾಗುತ್ತಾರೆ. ಇಂಥ ಶಿಬಿರಗಳು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂದುವರಿಯಲು ಹಾಗೂ ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಹಕಾರಿಯಾಗುತ್ತವೆ. ಸಂಗೀತ ಮತ್ತು ಕಲೆಗಳನ್ನು ಜೀವನದಲ್ಲಿ ರೂಢಿಸಿಕೊಂಡರೆ ಜ್ಞಾಪಕಶಕ್ತಿ ಹೆಚ್ಚುತ್ತದೆ" ಎಂದು ನುಡಿದರು.

ಕಾರ್ಯಕ್ರಮದಲ್ಲಿ ಶ್ರೀ ವೀರಭದ್ರಯ್ಯ ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದರು. ಶ್ರೀ ಎಂ. ನಾಗೇಂದ್ರ ಸ್ವಾಗತಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ವಂದಿಸಿದರು.

ಶಿವಲಿಂಗವ ನೋಡುವ ಕಣ್ಣಲ್ಲಿ
ಪರಸ್ತ್ರೀಯ ನೋಡಿದಡೆ ಅಲ್ಲಿ ಲಿಂಗವಿಲ್ಲ.
ಪರಬ್ರಹ್ಮವ ನುಡಿವ ಜಿಹ್ವೆಯಲ್ಲಿ
ಪರಸ್ತ್ರೀಯರ ಅಧರಪಾನವ ಕೊಂಡಡೆ ಪ್ರಸಾದಕ್ಕೆ ದೂರ.
ಘನಲಿಂಗವ ಪೂಜಿಸುವ ಕೈಯಲ್ಲಿ
ಪರಸ್ತ್ರೀಯರ ಕುಚವ ಮುಟ್ಟಿದಡೆ ತಾ ಮಾಡಿದ ಪೂಜೆ ನಿಷ್ಫಲ
ಇದನರಿಯದಿರ್ದಡೆ ಬಳ್ಳದಲ್ಲಿ ಸುರೆಯ ತುಂಬಿ
ಮೇಲೆ ಬೂದಿಯ ಹೂಸಿದಂತಾಯ್ತು ಕಾಣಾ
ಕೂಡಲ ಚೆನ್ನಸಂಗಮದೇವಾ.

**ಚೆನ್ನಬಸವಣ್ಣ**



## ಕೃತಿ ಸ್ವೀಕೃತಿ

* **104 Women Will Inspire :** Dr. M.C. Mohan Kumari (Gita), Pramaan Publications, P. 556, Rs. 500-00
* **ಹೊಂಬಾಳೆ** (ನಗರ್ಲೆ ಗ್ರಾಮ–ಒಂದು ನೋಟ): ನಗರ್ಲೆ ಶಿವಕುಮಾರ, ರೂಪ ಪ್ರಕಾಶನ, ಮೈಸೂರು, ಪು. 84, ಬೆಲೆ ರೂ. 50
* **ಬೆನ್ನುನೋವಿಗೆ ಯೋಗ ಚಿಕಿತ್ಸೆ:** ಯೋಗರತ್ನ ಡಾ. ಎಸ್.ಎನ್. ಓಂಕಾರ್, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ಪು. 136, ಬೆಲೆ ರೂ. 90
* **Yoga Mandir Student Upliftment and Rejuvenation Through Yoga:** Yoga Ratna Dr. S.N. Omkar, Yogamandir Trust, P. 24.
* **ಯೋಗಮಂದಿರ್ (ರಿ), ಆರೋಗ್ಯದ ಆಕರ ಸೂರ್ಯನಮಸ್ಕಾರ** : ಯೋಗರತ್ನ ಡಾ. ಎಸ್.ಎನ್. ಓಂಕಾರ್, ಪು. 32, ಪ್ರಕಾಶನ: ಯೋಗಮಂದಿರ್ ಟ್ರಸ್ಟ್ (ರಿ), ಬೆಂಗಳೂರು
* **ನಿತ್ಯಸಚಿವ (ಶ್ರೀ ಕೆ.ವಿ. ಶಂಕರೇಗೌಡರ ಜೀವನ ಚರಿತ್ರೆ):** ದೇಜಗೌ, ಪ್ರಕಾಶನ: ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ, ಮೊದಲ ಮುದ್ರಣ 1986, ಮೂರನೆಯ ಮುದ್ರಣ: 2014, ಪು. x + 235, ಬೆಲೆ 200/-
* **ಕೆ.ವಿ. ಶಂಕರೇಗೌಡರ ಜೀವನ ಸಾಧನೆ:** ಡಾ. ಎಸ್. ಶಿವರಾಮು, ಪ್ರಕಾಶನ : ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ). ಮಂಡ್ಯ, ಮೊದಲ ಮುದ್ರಣ 2008, ಎರಡನೆಯ ಮುದ್ರಣ: 2014
* **ಕೆ.ವಿ. ಶಂಕರೇಗೌಡರ ಸಮಗ್ರ ನಾಟಕ:** ಸಂ. ಡಾ. ರಾಮೇಗೌಡ, ಪ್ರಕಾಶನ : ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ, ಮೊದಲ ಮುದ್ರಣ 2014, ಪು. xlvi + 668, ಬೆಲೆ 700/-
* **ಪತ್ರಲೋಕ ಭಾಗ 1:** ಡಾ. ಜಿ.ವಿ. ಜಯಾರಾಜಶೇಖರ್, ಪ್ರಕಾಶನ : ಸಿರಿ ಪ್ರಕಾಶನ, ಜಯನಗರ, ಬೆಂಗಳೂರು, ಮೊದಲ ಮುದ್ರಣ 2014, ಪು. xx + 198, ಬೆಲೆ 125/-
* **ವಚನ ತವನಿಧಿ:** ಪ್ರಕಾಶ್ ಜಿ. ಕಶೆಟ್ಟಿ, ಪ್ರಕಾಶನ: ವಚನ ಭಂಡಾರಿ ಶಾಂತರಸ ಪ್ರಕಾಶನ, ತಾಳಿಕೋಟೆ, ಮೊದಲ ಮುದ್ರಣ: 2015, ಪು. 710, ಬೆಲೆ 350/-
* **ಅಮರ ಫಲ** (ಜನಪದ ರೂಪಕ-ಡಪ್ಪಿನ ಆಟ)**:** ಲೇ. ಪ್ರೊ. ಶಂಕರಗೌಡ್ರು ಮ. ಬಿರಾದಾರ (ಗುಂಡಕನಾಳ), ಮೊದಲ ಮುದ್ರಣ 2015, ಪು. 72, ಬೆಲೆ 50/-
* **ಸುಜ್ಞಾನ ಸಂಪದ** (ಪ್ರವಚನಗಳು): ಲೇ. ಪ್ರೊ. ಶಂಕರಗೌಡ್ರು ಮ. ಬಿರಾದಾರ (ಗುಂಡಕನಾಳ), ಮೊದಲ ಮುದ್ರಣ 2015, ಪು. 72, ಬೆಲೆ 50/-




ದಿನಾಂಕ 2.5.2015 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ "ಜೀವನ ಸಮೃದ್ಧಿ ಶಿಬಿರ"ವನ್ನು ವಿಶ್ರಾಂತ ಗೌ.ನ್ಯಾ. ಶ್ರೀ ಕೆ.ಎಲ್. ಮಂಜುನಾಥ್ ಉದ್ಘಾಟಿಸಿದರು. ಚಿತ್ರದಲ್ಲಿ ಪರಮಪೂಜ್ಯ ಶ್ರೀಗಳವರು ಹಾಗೂ ಗೌ.ನ್ಯಾ. ಶ್ರೀ ಎ.ಎಸ್. ಪಚ್ಚಾಪುರೆ ಅವರಿದ್ದಾರೆ




ದಿನಾಂಕ 24.4.2015 ರಂದು ನಂಜನಗೂಡು ತಾಲ್ಲೂಕು ನಗರ್ಲೆ ಗ್ರಾಮದ ಶ್ರೀ ಮಾಳಿಗೇಶ್ವರಿ ಮತ್ತು ಶ್ರೀ ಈರಣ್ಣದೇವರ ದೇವಾಲಯಗಳ ಕಳಶಾರೋಹಣ, ಸಪ್ತಮಾತೃಕೆಯರ ವಿಗ್ರಹಗಳ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿ, ಕನಕಪುರ ಶ್ರೀಗಳು, ಪರಮಪೂಜ್ಯ ಜಗದ್ಗುರುಗಳವರು, ವಾಟಾಳು ಶ್ರೀಗಳು, ಮಲ್ಲನಮೂಲೆ ಶ್ರೀಗಳನ್ನು ಕಾಣಬಹುದು.



ದಿನಾಂಕ 9.5.2015 ರಂದು ಕೊಡಗಿನ ಶ್ರೀ ಅರಮೇರಿ ಕಳಂಚೇರಿ ಮಠದ ತ್ರಿಶತಮಾನೋತ್ಸವ, ಲಿಂಗೈಕ್ಯ ಶ್ರೀ ಶಾಂತಮಲ್ಲ ಸ್ವಾಮಿಗಳ ಜನ್ಮ ಶತಮಾನೋತ್ಸವ ಹಾಗೂ ಲಿಂಗರಾಜೇಂದ್ರ ಪ್ರಸಾದನಿಲಯದ ಪ್ರಾರಂಭೋತ್ಸವ. ಚಿತ್ರದಲ್ಲಿ ಶ್ರೀ ಕಳಂಚೇರಿ ಮಠದ ಶ್ರೀಗಳು, ಮಾಜಿ ಸಚಿವ ಶ್ರೀ ಎಚ್. ವಿಶ್ವನಾಥ್, ಕನಕಪುರದ ಶ್ರೀ ದೇಗುಲಮಠದ ಶ್ರೀಗಳು, ಪರಮಪೂಜ್ಯ ಜಗದ್ಗುರುಗಳವರು ಹಾಗೂ ಡಾ. ಶ್ರೀ ವೀರೇಂದ್ರ ಹೆಗ್ಗಡೆ ಅವರನ್ನು ಕಾಣಬಹುದು



ದಿನಾಂಕ 29.6.2015 ರಂದು ಮೈಸೂರಿನಲ್ಲಿ ಜೆಎಸ್‌ಎಸ್ ಅಗ್ರಿ ಕ್ಲಿನಿಕ್ ಉದ್ಘಾಟನಾ ಸಮಾರಂಭ. ಶ್ರೀ ಬಿ.ಎನ್. ಬೆಟ್‌ಕೆರೂರ್, ವಿಧಾನಸಭೆ ಸದಸ್ಯರಾದ ಶ್ರೀ ಎಂ.ಕೆ. ಸೋಮಶೇಖರ್, ಉಪಮೇಯರ್‌ರಾದ ಶ್ರೀಮತಿ ಮಹದೇವಮ್ಮ, ಪರಮಪೂಜ್ಯ ಜಗದ್ಗುರುಗಳು, ಲೋಕಸಭಾ ಸದಸ್ಯರಾದ ಶ್ರೀ ಧ್ರುವನಾರಾಯಣ, ಡಾ. ಎಂ. ಮಹದೇವಪ್ಪ ಮತ್ತು ನಗರಪಾಲಿಕೆ ಸದಸ್ಯರಾದ ಶ್ರೀ ಮಂಜುನಾಥ್‌ರವರನ್ನು ಚಿತ್ರದಲ್ಲಿ ಕಾಣಬಹುದು



ದಿನಾಂಕ 8.3.2015 ರಂದು ಚಾಮರಾಜನಗರ ತಾಲ್ಲೂಕು ಹರವೆ ಮಠದಲ್ಲಿ ನಡೆದ ಶ್ರೀ ಚನ್ನಬಸವಸ್ವಾಮಿಗಳವರ ಗದ್ದುಗೆ ಉದ್ಘಾಟನೆ, ಬೆಳ್ಳಿಕೊಳಗ ಧಾರಣೆ ಮತ್ತು ಉಚಿತ ಸಾಮೂಹಿಕ ವಿವಾಹ ಸಮಾರಂಭ. ಚಿತ್ರದಲ್ಲಿ ಶಾಸಕ ಗೋ. ಮಧುಸೂದನ್, ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಪರಮಪೂಜ್ಯ ಜಗದ್ಗುರುಗಳವರು, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು, ಮಾಜಿ ಸಚಿವರಾದ ಶ್ರೀ ಎಂ. ಮಹದೇವ್, ಪಡುಗೂರು ಹಾಗೂ ಹುಲ್ಲಹಳ್ಳಿ ಮಠದ ಶ್ರೀಗಳವರನ್ನು ಕಾಣಬಹುದು



ದಿನಾಂಕ 11.4.2015 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಕಾರ್ಯಾಗಾರವನ್ನು ಗೌ.ನ್ಯಾ. ಮೋಹನ್ ಎಂ. ಶಾಂತನಗೌಡರ್ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಜರಗನಹಳ್ಳಿ ಶಿವಶಂಕರ್, ಡಾ. ಸಿ. ಸೋಮಶೇಖರ್, ನಾಗನೂರು ಮಠದ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು, ಪರಮಪೂಜ್ಯ ಜಗದ್ಗುರುಗಳು, ಶ್ರೀ ಗೊ.ರು. ಚನ್ನಬಸಪ್ಪ ಮತ್ತು ಶ್ರೀ ಚಂದ್ರಕಾಂತ ಬೆಲ್ಲದರವರುಗಳು



ದಿನಾಂಕ 14.5.2015 ರಂದು ಸುತ್ತೂರಿನಲ್ಲಿ ನಡೆದ "ಚಿಂತನ-ಮಂಥನ ಶಿಬಿರ"ದ ಸಮಾರೋಪ ಸಮಾರಂಭದಲ್ಲಿ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಎ.ಬಿ. ಪಾಟೀಲ್, ಜಗದ್ಗುರು ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು, ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಹಾಗೂ ಶ್ರೀ ಶಂಕರಣ್ಣ ಐ. ಮುನವಳ್ಳಿ ಅವರನ್ನು ಕಾಣಬಹುದು




ದಿನಾಂಕ 17.4.2015 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ "ಗ್ರಾಮೀಣ ಯುವಜನರ ಶಿಬಿರ"ದಲ್ಲಿ ರಂಗಕರ್ಮಿ ಶ್ರೀ ಪ್ರಸನ್ನರವರು ಜ್ಯೋತಿ ಬೆಳಗಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಡಿ.ಆರ್. ಪಾಟೀಲ್, ಪರಮಪೂಜ್ಯ ಶ್ರೀಗಳವರು, ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಮಾಜಿ ಶಾಸಕರಾದ ಶ್ರೀ ಮಹಿಮಾ ಪಟೇಲ್, ಮಾಜಿ ಸಚಿವ ಶ್ರೀ ಅಮರೇಗೌಡ ಬಯ್ಯಾಪುರ ಅವರುಗಳು

**ಪತ್ರಿಕೆಯ ಅಪೇಕ್ಷಾ ಪತ್ರ**

☐ ಬಿಡಿ ಪ್ರತಿ: ₹ 10/-

☐ ವಾರ್ಷಿಕ: ₹ 100/-    ☐ ದಶವಾರ್ಷಿಕ: ₹ 500/-

ಹೆಸರು/ವಿಳಾಸ ______________________________

__________________________________________

__________________________________________

**ಜೆಎಸ್ಎಸ್ ಪ್ರಸಾದ ಮ್ಯಾಗಜ್ಹಿನ್**
ಹೆಸರಿಗೆ ಡಿಡಿ/ಚಕ್/ಎಂಓ/ನಗದನ್ನು
ಸಂದಾಯ ಮಾಡಬಹುದಾಗಿದೆ

**ಪ್ರಕಟಣ ವಿಭಾಗ, ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004